ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 24 ಭಾನುವಾರ 2022

ಸಂಪುಟ: 43 | ಸಂಚಿಕೆ: 99 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

‘ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ’ ಗ್ರಂಥ ಬಿಡುಗಡೆ

ಸುತ್ತೂರು, ಆದಿಚುಂಚನಗಿರಿ, ಕಾಗಿನೆಲೆ ಶ್ರೀಗಳ ಸಾನ್ನಿಧ್ಯ

ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಡಾ.ಬಿ.ಎಲ್.ಶಂಕರ್, ಡಾ.ಹೆಚ್.ಸಿ.ಮಹದೇವಪ್ಪ ಉಪಸ್ಥಿತಿ

ಮೈಸೂರು, ಜು.23 (ಆರ್‌ಕೆಬಿ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತ ಕುರಿತಂತೆ ವಿವಿಧ ಲೇಖಕರ ಬರಹಗಳನ್ನು ಒಳಗೊಂಡ ‘ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ’ ಗ್ರಂಥ ವಿವಿಧ ಮಠಾಧೀಶರ ಸಾನ್ನಿಧ್ಯ, ಹಲವು ಗಣ್ಯರ ಉಪಸ್ಥಿತಿಯಲ್ಲಿ ಇಂದು ಮೈಸೂರು ಕಲಾಮಂದಿರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆಗೊಂಡಿತು. ಸಿದ್ದರಾಮಯ್ಯ ಬೆಂಬಲಿಗರು, ಹಿತೈಷಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರಿಂದ ಕಲಾಮಂದಿರ ಕಿಕ್ಕಿರಿದು ತುಂಬಿತ್ತು.

ಬೆಂಗಳೂರಿನ ಜನಮನ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಕಾಗಿನೆಲೆ ಮಠಾಧೀಶ ಶ್ರೀ ಶಿವಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರಾಜ್ಯಸಭೆಯಲ್ಲಿ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ವಿಧಾನಪರಿಷತ್ ಮಾಜಿ ಸಭಾಪತಿ ಡಾ.ಬಿ.ಎಲ್.ಶಂಕರ್, ಸ್ವಾಮೀಜಿಗಳು ಜಂಟಿಯಾಗಿ ‘ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ’ ಗ್ರಂಥವನ್ನು ಬಿಡುಗಡೆ ಮಾಡಿದರು. ಆ.3ರಂದು ದಾವಣಗೆರೆಯಲ್ಲಿ ನಡೆಯಲಿರುವ ಸಿದ್ದರಾಮಯ್ಯನವರ 75ನೇ ಜನ್ಮದಿನಾಚರಣೆ ‘ಸಿದ್ದರಾಮೋತ್ಸವ’ದ ▶ 8ನೇ ಪುಟಕ್ಕೆ



■ ಸಾಕ್ಷರತೆ ಕಡಿಮೆ ಇದ್ದಾಗ ಸಾಮರಸ್ಯವಿತ್ತು: ಸಾಕ್ಷರತೆ ಹೆಚ್ಚಾದಾಗ ಸಾಮರಸ್ಯ ನಾಶವಾಯ್ತು! ■ ಪುಟ–4

■ ಸಿದ್ದು ಸಿದ್ಧಾಂತಕ್ಕೆ ಖರ್ಗೆ ಸರ್ಟಿಫಿಕೇಟ್... ■ ಪುಟ–4

■ ಸಿದ್ದರಾಮಯ್ಯರಂಥ ರಾಜಕಾರಣಿಯನ್ನು ನೀಡಿದ ಮೈಸೂರಿಗರಿಗೆ ಧನ್ಯವಾದಗಳು: ಬಿ.ಎಲ್.ಶಂಕರ್ ■ ಪುಟ–4

ಪಿಎಸ್‌ಐ ಸೇರಿದಂತೆ ಇತ್ತೀಚಿನ ಎಲ್ಲಾ ನೇಮಕಾತಿಗಳಲ್ಲಿ ಭಾರೀ ಭ್ರಷ್ಟಾಚಾರ

ಕೇಂದ್ರ ತನಿಖಾ ತಂಡದಿಂದ ತನಿಖೆ

● ಬಿಜೆಪಿ ವರಿಷ್ಠರ ಸೂಚನೆ ಮೇರೆಗೆ ಕೇಂದ್ರ ಗೃಹ ಇಲಾಖೆಗೆ ಪತ್ರ ಬರೆಯಲು ತೀರ್ಮಾನ ● ಅಕ್ರಮ ನೇಮಕಾತಿಯಲ್ಲಿ ಭಾಗಿಯಾಗಿರುವ ಕೆಲ ರಾಜಕೀಯ ಪಕ್ಷದ ನಾಯಕರ ಸಿಲುಕಿಸುವುದೇ ತನಿಖೆ ಉದ್ದೇಶ

ರಾಜ್ಯ ಸರ್ಕಾರ ನಿರ್ಧಾರ



ಬೆಂಗಳೂರು, ಜು.23 (ಕೆಎಂಶಿ)– ಪಿಎಸ್‌ಐ ನೇಮಕಾತಿ ಸೇರಿದಂತೆ ಇತ್ತೀಚಿನ ವರ್ಷಗಳಲ್ಲಿ ನಡೆದಿರುವ ಸರ್ಕಾರಿ ನೇಮಕಾತಿಗಳಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಕೇಂದ್ರ ತನಿಖಾ ತಂಡಗಳಿಂದ ತನಿಖೆ ನಡೆಸಲು ರಾಜ್ಯ ಸರ್ಕಾರ ಮುಂದಾಗಿದೆ.

ಬಿಜೆಪಿ ವರಿಷ್ಠರ ಸೂಚನೆ ಮೇರೆಗೆ ಈ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಸರ್ಕಾರ ನಿರ್ಧಾರ ಕೈಗೊಂಡಿದೆ. ಅಲ್ಲದೆ ಕೇಂದ್ರ ಗೃಹ ಇಲಾಖೆಗೆ ಈ ಸಂಬಂಧ ಪತ್ರ ಬರೆಯಲು ತೀರ್ಮಾನಿಸಿದೆ. ನೇಮಕಾತಿ ಹಗರಣದಲ್ಲಿ ಕೋಟ್ಯಾಂತರ ರೂ. ಅವ್ಯವಹಾರ ಮತ್ತು ವಹಿವಾಟು ನಡೆದಿರುವುದರಿಂದ ಈ ಬಗ್ಗೆ ಇಡಿ ಮತ್ತು ಸಿಬಿಐನಿಂದ ತನಿಖೆ ನಡೆಸಲು ಸಿದ್ಧತೆ ನಡೆದಿದೆ. ಅಕ್ರಮ ನೇಮಕಾತಿಯಲ್ಲಿ ನಡೆದಿರುವ ಅವ್ಯವಹಾರದಲ್ಲಿ ಕೆಲವು



ರಾಜಕೀಯ ಪಕ್ಷದ ಮುಖಂಡರು ಶಾಮೀಲಾಗಿದ್ದಾರೆ. ಅವರನ್ನು ಇಕ್ಕಟ್ಟಿನಲ್ಲಿ ಸಿಲುಕಿಸುವುದೇ ಈ ತನಿಖೆಯ ಉದ್ದೇಶ ಎನ್ನಲಾಗಿದೆ. ರಾಜ್ಯ ವಿಧಾನಸಭಾ ಚುನಾವಣಾ ಸಮೀಪದಲ್ಲಿ ಕೆಲವು ಕಠಿಣ ತೀರ್ಮಾನಗಳನ್ನು ಕೈಗೊಳ್ಳುತ್ತಿರುವ ಬಿಜೆಪಿ ವರಿಷ್ಠರು ಅದರಲ್ಲಿ ಪಕ್ಷಕ್ಕೆ ಕಂಟಕವಾಗಿರುವವರನ್ನು ಸಿಲುಕಿಸಲು ಮುಂದಾಗಿದೆ. ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ನಡೆದಿರುವ ಬಹುತೇಕ ನೇಮಕಾತಿಯಲ್ಲಿ ಅಕ್ರಮ ಮತ್ತು ದೊಡ್ಡ ಪ್ರಮಾಣದ ಹಣಕಾಸು ವರ್ಗಾವಣೆಯಾಗಿದೆ. ಲೋಕಸೇವಾ ಆಯೋಗದ ನೇಮಕಾತಿಯಲ್ಲೂ ಆರೋಪಗಳು ಕೇಳಿ ಬಂದಿದ್ದವು. ಇದಲ್ಲದೆ ವಿವಿಧ ಇಲಾಖೆಗಳಲ್ಲಿ ನೇಮಕಾತಿ ಮಾಡುವ ಸಂದರ್ಭದಲ್ಲೂ ದೊಡ್ಡ ಪ್ರಮಾಣದಲ್ಲಿ ಅಕ್ರಮವಾಗಿದೆ.

ಈ ಹಿಂದೆ ಪಿಎಸ್‌ಐ ನೇಮಕಾತಿಯಲ್ಲೂ ಅಕ್ರಮಗಳು ನಡೆದಿವೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ತನಿಖೆಗೆ ಮುಂದಾಗಿದೆ. ಈ ಅಕ್ರಮಗಳಿಂದ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಕಳಂಕ ಎದುರಾಗಿದ್ದು, ಅದನ್ನು ನಿವಾರಿಸುವ ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ಕೊಡುವ, ಮುಂದೆ ಇಂತಹ ಘಟನಾವಳಿಗಳು ಮರುಕಳಿಸದಂತೆ ನೋಡಿಕೊಳ್ಳಲು ವರಿಷ್ಠರು ಈ ನಿರ್ಣಯ ಕೈಗೊಂಡಿದ್ದಾರೆ. ವರಿಷ್ಠರ ▶ 8ನೇ ಪುಟಕ್ಕೆ


ಬಿ.ವೈ.ವಿಜಯೇಂದ್ರ ಸ್ಪರ್ಧೆ ನಿರ್ಧರಿಸುವವರು ವರಿಷ್ಠರು!



ಬೆಂಗಳೂರು, ಜು.23– ನಿನ್ನೆಯಷ್ಟೇ ಶಿಕಾರಿಪುರ ಕ್ಷೇತ್ರವನ್ನು ಪುತ್ರ ಬಿ.ವೈ.ವಿಜಯೇಂದ್ರಗೆ ಬಿಟ್ಟುಕೊಟ್ಟಿರುವುದಾಗಿ ಹೇಳಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಇಂದು ಯೂಟರ್ನ್ ಹೊಡೆದಿದ್ದು, ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಹೇಳಿದ್ದಾರೆ.

ಹೈಕಮಾಂಡ್ ಟಿಕೆಟ್ ಘೋಷಣೆಗೂ ಮೊದಲೇ ಪುತ್ರನಿಗೆ ಟಿಕೆಟ್ ಕೊಡಿಸಲು ಕ್ಷೇತ್ರ ಬಿಟ್ಟುಕೊಡುವ ಮಾತಾಡಿದ್ದಾರೆಂಬ ವಿಶ್ಲೇಷಣೆಗೆ ಪ್ರತಿಕ್ರಿಯಿಸಿದ ಮಾಜಿ ಸಿಎಂ, ನಿನ್ನೆ ನಾನು ನೀಡಿದ ಹೇಳಿಕೆ ಬಗ್ಗೆ ಸಾಕಷ್ಟು ಗೊಂದಲ ಆಗಿದೆ. ನಾನು ವಿಧಾನಸಭೆ ಚುನಾವಣೆಗೆ ನಿಲ್ಲಲ್ಲ. ನನಗೆ ಶಿಕಾರಿಪುರದ ಜನ ಚುನಾವಣೆಗೆ ನಿಲ್ಲಲು ಒತ್ತಾಯ ಮಾಡಿದರು. ಆದರೆ ನಾನು ನಿಲ್ಲೋದಿಲ್ಲ. ವಿಜಯೇಂದ್ರ ನಿಲ್ತಾರೆ ಎಂದು ಹೇಳಿದೆ. ನಿನ್ನೆ ಅಲ್ಲಿಯ ಜನ ಒತ್ತಾಯ ಮಾಡಿದ ಕಾರಣ ನಾನು ಹಾಗೆ ಹೇಳಿದ್ದೇನೆ. ಆದರೆ ಅಂತಿಮ ತೀರ್ಮಾನ ಮೋದಿ, ▶ 7ನೇ ಪುಟಕ್ಕೆ

ರಾಜಕಾರಣದಿಂದ ನಿವೃತ್ತರಾಗಬೇಡಿ...



ಬೆಂಗಳೂರು, ಜು.23 (ಕೆಎಂಶಿ)– ಸಕ್ರಿಯ ರಾಜಕಾರಣದಿಂದ ನಿವೃತ್ತಿ ಬೇಡ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.

ಚುನಾವಣಾ ರಾಜಕೀಯದಿಂದ ಹಿಂದೆ ಸರಿಯುವುದಾಗಿ ಯಡಿಯೂರಪ್ಪ ನಿನ್ನೆ ಘೋಷಣೆ ಮಾಡಿದ ಬೆನ್ನಲ್ಲೆ ಮುಖ್ಯಮಂತ್ರಿಯವರು ಇಂದು ಕಾವೇರಿ ನಿವಾಸಕ್ಕೆ ತೆರಳಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ, ಈ ಮನವಿ ಮಾಡಿದ್ದಾರೆ.

ಮುಂಬರುವ ವಿಧಾನಸಭೆ ಚುನಾವಣೆ ನಿಮ್ಮ ನಾಯಕತ್ವದಲ್ಲೇ ನಡೆಯಬೇಕು. ನಿಮ್ಮ ಮಾರ್ಗದರ್ಶನದಲ್ಲಿ ಚುನಾವಣೆ ನಡೆದು, ಪಕ್ಷವನ್ನು ಅಧಿಕಾರಕ್ಕೆ ತರೋಣ. ನೀವು ಈ ಮಾತನ್ನು ಹೇಳುತ್ತಲೇ ಇದ್ದೀರಿ. ಆದರೆ ನಿನ್ನೆ ಏಕಾಏಕಿ ದಿಢೀರನೆ ತೆಗೆದುಕೊಂಡಿರುವ ನಿರ್ಧಾರ ನಮ್ಮೆಲ್ಲರನ್ನು ದಿಗ್ಭ್ರಮೆಗೊಳಿಸಿದೆ. ▶ 7ನೇ ಪುಟಕ್ಕೆ

ಆರೇಳು ತಿಂಗಳಲ್ಲಿ ಮನೆ ಕಟ್ಟಿ ಫಲಾನುಭವಿಗಳಿಗೆ ಒದಗಿಸಿ

● ವಸತಿ ಸಚಿವ ವಿ.ಸೋಮಣ್ಣ ತಾಕೀತು ● ಮಂಡಕಳ್ಳಿ ಬಳಿ 2446 ಮನೆಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ
● ಜಾಗ ಕಲ್ಪಿಸಿದರೆ ಇನ್ನೂ ಸಾವಿರ ಮನೆಗೆ ನೆರವಿನ ಭರವಸೆ



ಮೈಸೂರು ನಗರ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಫಲಾನುಭವಿಗಳಿಗೆ ಮಂಡಕಳ್ಳಿ ಪ್ರದೇಶದಲ್ಲಿ ಮನೆಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ವಸತಿ ಸಚಿವ ವಿ.ಸೋಮಣ್ಣ, ಸಭಾ ಕಾರ್ಯಕ್ರಮದಲ್ಲಿ ದೀಪ ಬೆಳಗಿಸಿದರು. ಮೇಯರ್ ಸುನಂದಾ ಪಾಲನೇತ್ರ, ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಮತ್ತಿತರರಿದ್ದರು.

ಮೈಸೂರು, ಜು.23(ಎಸ್‌ಬಿಡಿ)– ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಮಂಡಕಳ್ಳಿಯಲ್ಲಿ ಆರೇಳು ತಿಂಗಳಲ್ಲಿ ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಬೇಕು. ಜಾಗ ಒದಗಿಸಿದರೆ ಇನ್ನೂ ಸಾವಿರ ಮನೆ ನಿರ್ಮಾಣಕ್ಕೆ ನೆರವು ನೀಡಲು ಸರ್ಕಾರ ಸಿದ್ಧವಿದೆ ಎಂದು ವಸತಿ ಹಾಗೂ ಮೂಲ ಸೌಕರ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ವಸತಿ ಇಲಾಖೆ, ರಾಜೀವ್ ಗಾಂಧಿ ವಸತಿ ನಿಗಮ, ಮೈಸೂರು ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆ ಸಹಯೋಗದಲ್ಲಿ ‘ಪ್ರಧಾನಮಂತ್ರಿ ಆವಾಸ್ ಯೋಜನೆ–ಸರ್ವರಿಗೂ ಸೂರು’ ಯೋಜನೆಯಡಿ ಮೈಸೂರು ನಗರ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಫಲಾನುಭವಿಗಳಿಗೆ ಮಂಡಕಳ್ಳಿ ಪ್ರದೇಶದಲ್ಲಿ 2446 ಮನೆಗಳ ನಿರ್ಮಾಣಕ್ಕೆ ಶನಿವಾರ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಪ್ರಧಾನಿ ಮೋದಿ ಅವರು ರಾಷ್ಟ್ರದ ಪ್ರತಿಯೊಂದು ಕುಟುಂಬಕ್ಕೂ ಸೂರು ಕಲ್ಪಿಸುವ ಆಶಯದೊಂದಿಗೆ ಸ್ವಾತಂತ್ರ್ಯ ಅಮೃತಮಹೋತ್ಸವ ▶ 8ನೇ ಪುಟಕ್ಕೆ

ಸೋಮಣ್ಣ ಸಿಎಂ ಆಗಲಿ ಎಂದು ಬೇಡಿಕೊಳ್ಳಿ...

ಮೈಸೂರು: ವಸತಿ ಸಚಿವ ವಿ.ಸೋಮಣ್ಣ, ರಾಜ್ಯದ ಮುಖ್ಯಮಂತ್ರಿಯಾಗಲು ದೇವರಲ್ಲಿ ಪ್ರಾರ್ಥಿಸುವಂತೆ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು. ಫಲಾನುಭವಿ ಪರವಾಗಿ ಮಾತನಾಡಿದ ಶಶಿರೇಖಾ ‘ನಮ್ಮಂತಹ ಬಡವರಿಗೆ ಸೂರು ಕಲ್ಪಿಸಿದ ಸಚಿವರಾದ ಸೋಮಣ್ಣ, ರಾಜ್ಯದ ಮುಖ್ಯಮಂತ್ರಿಯಾಗಿ ಲಕ್ಷಾಂತರ ಬಡವರಿಗೆ ಮನೆ ನೀಡುವಂತಾಗಲಿ’ ಎಂದು ಆಶಿಸಿದ್ದನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ಜಿಟಿಡಿ, ಈ ಹೆಣ್ಣುಮಗಳು ಸಿಎಂ ಆಗಲಿ ಎಂದು ಹೇಳಿದಳು. ದೇವರ ಕೃಪೆ ಹಾಗೂ ಬಡವರ ಆಶೀರ್ವಾದ ಇದ್ದರೆ ಸೋಮಣ್ಣ ಏಕೆ ಸಿಎಂ ಆಗಬಾರದು. ಬಡವರಿಗಾಗಿ ಕೆಲಸ ಮಾಡುತ್ತಿರುವ ಸೋಮಣ್ಣ ಸಿಎಂ ಆಗಲಿ ಎಂದು ದೇವರಿಗೊಂದು ಹೂವಿಟ್ಟು ಬೇಡಿಕೊಳ್ಳಿ ಎಂದು ಫಲಾನುಭವಿಗಳಿಗೆ ಹೇಳಿದರಲ್ಲದೆ ಚಪ್ಪಾಳೆಯನ್ನೂ ಹಾಕಿಸಿದರು.

ಜಿ.ಟಿ.ದೇವೇಗೌಡ, ಪ್ರತಾಪ್‌ಸಿಂಹನ ಬಣ್ಣಿಸಿದ ವಿ.ಸೋಮಣ್ಣ

ಮೈಸೂರು: ಸಚಿವ ವಿ.ಸೋಮಣ್ಣ ತಮ್ಮ ಭಾಷಣದುದ್ದಕ್ಕೂ ಹಲವು ಬಾರಿ ಶಾಸಕ ಜಿ.ಟಿ.ದೇವೇಗೌಡರು ಹಾಗೂ ಸಂಸದ ಪ್ರತಾಪ್ ಸಿಂಹ ಅವರನ್ನು ಬಣ್ಣಿಸಿದರು. ನಾನು ಮೈಸೂರು ಜಿಲ್ಲಾ ಉಸ್ತುವಾರಿಯಾಗಿದ್ದ 229 ದಿನಗಳಲ್ಲಿ 45 ದಿನ ಮೈಸೂರಿನಲ್ಲಿ ವಾಸ್ತವ್ಯವಿದ್ದೆ. ಆ ಸಂದರ್ಭದಲ್ಲಿ ಇಲ್ಲಿನ ವಾಸ್ತವ ಅರಿತು ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವಲ್ಲಿ ಜಿಟಿಡಿ ಹಾಗೂ ಪ್ರತಾಪ್ ಸಿಂಹ ಅವರ ಸಹಕಾರವನ್ನು ನನ್ನ ಜೀವನದಲ್ಲಿ ಮರೆಯಲು ▶ 8ನೇ ಪುಟಕ್ಕೆ

ಪುಣ್ಯಕೋಟಿ ದತ್ತು ಯೋಜನೆ ಜು.28ಕ್ಕೆ ಲೋಕಾರ್ಪಣೆ

●ಗೋ ಸಂಕುಲ ಸಂರಕ್ಷಣೆಗೆ ದೇಶದಲ್ಲೇ ಮಹತ್ವದ ಯೋಜನೆ ಜಾರಿ ●ಗೋಶಾಲೆಗಳ ಜಾನುವಾರುಗಳ ಸಾರ್ವಜನಿಕರು, ಸಂಘ-ಸಂಸ್ಥೆಗಳು ದತ್ತು ಪಡೆಯಲು ಅವಕಾಶ



ಬೆಂಗಳೂರು, ಜು.23(ಕೆ.ಎಂ.ಶಿ.)- ಪುಣ್ಯಕೋಟಿ ದತ್ತು ಯೋಜನೆಯನ್ನು ಜುಲೈ 28 ರಂದು ಲೋಕಾರ್ಪಣೆ ಮಾಡಲಾಗುವುದು ಎಂದು ಪಶು ಸಂಗೋಪನೆ ಸಚಿವ ಪ್ರಭು ಚವ್ಹಾಣ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೋ ಸಂಕುಲವನ್ನು ಸಂರಕ್ಷಿಸಲು ಗೋಶಾಲೆಗಳಲ್ಲಿರುವ ಜಾನುವಾರುಗಳನ್ನು ಪೋಷಣೆ ಮತ್ತು ಪಾಲನೆಗಾಗಿ ಸಾರ್ವಜನಿಕರು ಮತ್ತು ಖಾಸಗಿ ಸಂಸ್ಥೆಗಳು ದತ್ತು ತೆಗೆದುಕೊಳ್ಳುವುದನ್ನು ಪ್ರೋತ್ಸಾಹಿಸಲು ನಮ್ಮ ಸರ್ಕಾರ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಈ ಯೋಜನೆ ತಂದಿದೆ ಎಂದರು.

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಜು.28ರಂದು ಒಂದು ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಅದೇ ದಿನ ಲೋಕಾರ್ಪಣೆ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಜಾನುವಾರುಗಳ ಪೋಷಣೆ ಮತ್ತು ಇತರೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸುವ ಸಲುವಾಗಿ ಗೋಶಾಲೆಗಳಲ್ಲಿರುವ ಜಾನುವಾರುಗಳನ್ನು ಸಾರ್ವಜನಿಕರು ಮತ್ತು ಖಾಸಗಿ ಸಂಸ್ಥೆಗಳು ದತ್ತು ತೆಗೆದುಕೊಳ್ಳುವುದನ್ನು ಪ್ರೋತ್ಸಾಹಿಸಲು ನಮ್ಮ ಸರ್ಕಾರವು ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ "ಪುಣ್ಯಕೋಟಿ ದತ್ತು ಯೋಜನೆ"ಯನ್ನು ಪ್ರಾರಂಭಿಸಿದೆ ಎಂದರು.

ರಾಜ್ಯದಲ್ಲಿ ಒಟ್ಟು 215 ಕ್ಕೂ ಹೆಚ್ಚಿನ ಖಾಸಗಿ ಗೋಶಾಲೆಗಳಲ್ಲಿ ಜಾನುವಾರುಗಳಿಗೆ ಆಶ್ರಯ ಕಲ್ಪಿಸಲಾಗಿದೆ. 100 ಸರ್ಕಾರಿ ಗೋಶಾಲೆಗಳನ್ನು ಹಂತಹಂತವಾಗಿ ಪ್ರಾರಂಭ ಮಾಡುತ್ತಿದ್ದು, ಈ



ಎಲ್ಲಾ ಗೋಶಾಲೆಗಳಲ್ಲಿ ದೇಶಿ ತಳಿ, ಮಿಶ್ರತಳಿ ಜಾನುವಾರುಗಳು, ನಿರ್ಗತಿಕ, ನಿಶ್ಯಕ್ತ, ವಯಸ್ಸಾದ, ರೋಗಗ್ರಸ್ಥ, ರೈತರು ಸಾಕಲಾಗದೆ ತಂದು ಬಿಡುವ ಜಾನುವಾರುಗಳು, ಹೋರಿ ಕರುಗಳು ಮತ್ತು ನ್ಯಾಯಾಲಯ, ಪೊಲೀಸ್ ಕಸ್ಟಡಿಯಿಂದ ವಶಪಡಿಸಿಕೊಂಡ ಜಾನುವಾರುಗಳಿಗೆ ಆಶ್ರಯ ನೀಡಿ ಪೋಷಣೆ ಮಾಡಲಾಗುತ್ತಿದೆ ಎಂದು ಪ್ರಭು ಚವ್ಹಾಣ್ ವಿವರಿಸಿದರು.

ಗೋಶಾಲೆಗಳಲ್ಲಿರುವ ಜಾನುವಾರುಗಳಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಮತ್ತು ಗೋಶಾಲೆಯ ಗೋವುಗಳನ್ನು ಸಂರಕ್ಷಿಸಲು ಸಾರ್ವಜನಿಕರನ್ನು ಪ್ರೇರೇಪಿಸುವುದು, ಗೋಶಾಲೆಗಳನ್ನು ಆರ್ಥಿಕವಾಗಿ ಸದೃಢಗೊಳಿಸುವುದು ಮತ್ತು ಗೋಶಾಲೆಗಳನ್ನು ಸಾರ್ವಜನಿಕರ ಸಹಕಾರದಿಂದ ನಿರಂತರವಾಗಿ ಯಾವುದೇ ಅಡಚಣೆಯಿಲ್ಲದೆ ನಡೆಸುವುದು ಈ ಯೋಜನೆಯ ಉದ್ದೇಶ ಎಂದು ಅವರು ತಿಳಿಸಿದರು.

ಜಾನುವಾರುಗಳ ದತ್ತು (ADOPT) ಯೋಜನೆಯಡಿ ಪುಣ್ಯಕೋಟಿ ದತ್ತು ಪೋರ್ಟಲ್‌ನಲ್ಲಿರುವ ಯಾವುದೇ ಗೋಶಾಲೆಗಳ ಪ್ರತಿ ಜಾನುವಾರಿಗೆ ವಾರ್ಷಿಕ ರೂ.11,000/- (ರೂಪಾಯಿ ಹನ್ನೊಂದು ಸಾವಿರ ಮಾತ್ರ) ಗಳನ್ನು ಪಾವತಿಸಿ ಜಾನುವಾರುಗಳನ್ನು ದತ್ತು ಪಡೆಯಬಹುದು.

ಜಾನುವಾರುಗಳಿಗಾಗಿ ಆಹಾರ (FEED A COW) ಯೋಜನೆಯಡಿ ಸಾರ್ವಜನಿಕರು ತಮ್ಮ ಜೀವನದ ವಿಶೇಷ ಸಂದರ್ಭಗಳಲ್ಲಿ (ಹುಟ್ಟು ಹಬ್ಬ, ಮದುವೆ ವಾರ್ಷಿಕೋತ್ಸವ ಇತ್ಯಾದಿ) ಪುಣ್ಯಕೋಟಿ ದತ್ತು ಪೋರ್ಟಲ್‌ನಲ್ಲಿರುವ ಯಾವುದೇ ಗೋಶಾಲೆಗಳಲ್ಲಿರುವ ರಾಸುಗಳಿಗೆ ಒಂದು ದಿನಕ್ಕೆ ರೂ.70/-ರಂತೆ ತಮಗೆ ಇಷ್ಟವಾದಷ್ಟು ರಾಸುಗಳಿಗೆ ಆಹಾರಕ್ಕಾಗಿ ವಂತಿಗೆ ನೀಡಬಹುದಾಗಿದೆ. ಗೋಶಾಲೆಗಳಿಗೆ ದೇಣಿಗೆ (Donation) ಯೋಜನೆಯಡಿ ಸಾರ್ವಜನಿಕರು ಪುಣ್ಯಕೋಟಿ ದತ್ತು ಪೋರ್ಟಲ್‌ನಲ್ಲಿರುವ ಯಾವುದೇ ಗೋಶಾಲೆಗಳಿಗೆ ಕನಿಷ್ಠ ರೂ.10/-ಯಿಂದ ತಮ್ಮ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಮೂಲಭೂತ ಸೌಕರ್ಯ ಹಾಗೂ ಇತರೆ ವೆಚ್ಚಗಳಿಗಾಗಿ ದೇಣಿಗೆ ನೀಡಬಹುದು ಎಂದು ಸಂಕ್ಷಿಪ್ತವಾಗಿ ಹೇಳಿದರು.

ಸಾರ್ವಜನಿಕರು/ಸಂಘ ಸಂಸ್ಥೆಗಳು ತಾವಿದ್ದ ಸ್ಥಳದಿಂದಲೇ ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಗೋಶಾಲೆಯಲ್ಲಿರುವ ಜಾನುವಾರುಗಳನ್ನು ದತ್ತು ಪಡೆಯುವ ನಾವೆಲ್ಲರೂ ಒಗ್ಗೂಡಿ ಗೋಸಂಕುಲ ರಕ್ಷಣೆ ಮಾಡೋಣ ಎಂದು ಪ್ರಭು ಚವ್ಹಾಣ್ ಇದೇ ವೇಳೆ ಮನವಿ ಮಾಡಿದರು.

ವ್ಯಕ್ತಿ ಪೂಜೆ ಬಿಟ್ಟು ಪಕ್ಷ ಪೂಜೆ ಮಾಡಿ...

ಸಿದ್ದರಾಮೋತ್ಸವ, ಸಿಎಂ ಕುರ್ಚಿಗೆ ಪೈಪೋಟಿ ನಡುವೆ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಲಾಪ!



ಬೆಂಗಳೂರು, ಜು.23 (ಕೆಎಂಶಿ)-ಪಕ್ಷದ ಬಗ್ಗೆ ನಿಜವಾಗಲೂ ಆಸಕ್ತಿ ಇದ್ದರೆ ವ್ಯಕ್ತಿ ಪೂಜೆ ಬಿಟ್ಟು ಪಕ್ಷ ಪೂಜೆ ಮಾಡಿ. ಹೆಚ್ಚಿನ ಜನರನ್ನು ಪಕ್ಷಕ್ಕೆ ಕರೆ ತರುವತ್ತ ಗಮನಹರಿಸಿ. ಎಲ್ಲರೂ ತಮ್ಮ ತಮ್ಮ ಸಮುದಾಯಗಳನ್ನು ಸಂಘಟನೆ ಮಾಡಿ, ಪಕ್ಷ ವನ್ನು ಅಧಿಕಾರಕ್ಕೆ ತನ್ನಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ತಮ್ಮದೇ ಪಕ್ಷದ ಮುಖಂಡರಿಗೆ ಕಿವಿಮಾತು ಹೇಳಿದ್ದಾರೆ.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸ್ಥಾನದ ವಿಚಾರವಾಗಿ ಜಮೀರ್ ಅಹ್ಮದ್ ಅವರು ನೀಡಿರುವ ಹೇಳಿಕೆ ವಿಚಾರವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ನನ್ನ ಲೆವೆಲ್‌ಗೆ ಮಾತನಾಡು ವವರ ವಿಚಾರ ನಾನು ಮಾತನಾಡುತ್ತೇನೆ' ಎಂದರು. ಸದ್ಯಕ್ಕೆ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಪಕ್ಷವನ್ನು ಅಧಿಕಾರಕ್ಕೆ ತರುವ ಕೆಲಸವನ್ನು ಬಾಯಿ ಮುಚ್ಚಿಕೊಂಡು ಮಾಡಬೇಕು. ಎಲ್ಲರಿಗೂ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರು. ಮುಸಲ್ಮಾನರ ಸಲೂನ್ ಬಂದ್ ಮಾಡಿಸಬೇಕು ಎಂಬ ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕ್ ಅವರ ಹೇಳಿಕೆ ವಿಚಾರವಾಗಿ ಕೇಳಿದ ಪ್ರಶ್ನೆಗೆ, ನಾನು ಪ್ರಮೋದ್ ಮುತಾಲಿಕ್ ಅವರಿಗೆ ಉತ್ತರ ನೀಡುವುದಿಲ್ಲ. ರಾಜ್ಯದಲ್ಲಿ ಸಂವಿಧಾನ ಬದ್ಧವಾಗಿ ಎಲ್ಲರಿಗೂ ರಕ್ಷಣೆ ನೀಡುತ್ತೇವೆ ಎಂದು ಪ್ರಮಾಣ ಮಾಡಿರುವ ಮುಖ್ಯಮಂತ್ರಿಗಳು, ಸಚಿವರು ಈ ಬಗ್ಗೆ ಉತ್ತರ ನೀಡಬೇಕು. ಈ ಎಲ್ಲವನ್ನು ಬಿಜೆಪಿ ಹಾಗೂ ಬಿಜೆಪಿ ಸರ್ಕಾರವೇ ಹೇಳಿಸುತ್ತಿದೆ.

ಹಳೇ ಮೈಸೂರು ಸೇರಿದಂತೆ ಅನೇಕ ಭಾಗಗಳಲ್ಲಿ ಅವರು ಈ ರೀತಿ ಪ್ರಚೋದಿಸುತ್ತಿದ್ದಾರೆ. ಇದೆಲ್ಲದರ ಬಗ್ಗೆ ನಾನು ಈಗ ಮಾತನಾಡುವುದಿಲ್ಲ. ಆಮೇಲೆ ಮಾತಾಡುತ್ತೇನೆ. ಈ ವಿಚಾರವಾಗಿ ಮೊದಲು ಮುಖ್ಯಮಂತ್ರಿಗಳು ಉತ್ತರಿಸಲಿ' ಎಂದು ತಿಳಿಸಿದರು. ಕೋಲಾರದಲ್ಲಿ ಬೇರೆ, ಬೇರೆ ಬಣಗಳ ಪ್ರತಿಭಟನೆ ವಿಚಾರವಾಗಿ ಕೇಳಿದ ಪ್ರಶ್ನೆಗೆ, ಕೋಲಾರದಲ್ಲಿ ಯಾವುದೇ ಬಣ ಇಲ್ಲ. ಸೋನಿಯಾ ಗಾಂಧಿ ಅವರಿಗೆ ರಕ್ಷಣೆ ಸಿಗಬೇಕು ಎಂದು ಎಲ್ಲರೂ ಹೋರಾಟ ಮಾಡುತ್ತಿದ್ದೇವೆ. ನಾವು ಎಲ್ಲ ಜಿಲ್ಲೆಯಲ್ಲಿ ಪ್ರತಿಭಟನೆ ಮಾಡಲು ಸೂಚಿಸಿದ್ದು, ಅವರು ಮಾಡಿದ್ದಾರೆ ಎಂದು ಉತ್ತರಿಸಿದರು. ನಾನು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರ ಸ್ಪರ್ಧೆಯ ಮಧ್ಯೆ ಹೋಗುವುದಿಲ್ಲ. ನನ್ನದೇ ಆದ ಪ್ರತ್ಯೇಕ ಗುರುತು ಇದೆ ಎಂಬ ಎಂ.ಬಿ. ಪಾಟೀಲ್ ಅವರ ಹೇಳಿಕೆ ವಿಚಾರವಾಗಿ ಕೇಳಿದ ಪ್ರಶ್ನೆಗೆ, '224 ಕ್ಷೇತ್ರಗಳಲ್ಲಿ ಗೆಲ್ಲುವ ಎಲ್ಲರೂ ಮುಖ್ಯಮಂತ್ರಿ ಸ್ಥಾನಕ್ಕೆ ಆಸೆ ಪಟ್ಟರೆ ತಪ್ಪಿಲ್ಲ' ಎಂದರು.

ಮುಂದಿನ ಸಿಎಂ ಹೇಳಿಕೆ ಮೊದಲು ಕೊಟ್ಟವರೇ ಅವರು, ನಾವು ಮುಂದುವರಿಸಿಕೊಂಡು ಹೋದೆವು...

ದಾವಣಗೆರೆ, ಜು.23- ಕಾಂಗ್ರೆಸ್‌ನಲ್ಲಿ 'ಸಿಎಂ ಕುರ್ಚಿ ಕಾದಾಟ' ದಿನದಿಂದ ದಿನಕ್ಕೆ



ಜಮೀರ್ ಅಹ್ಮದ್ ತಿರುಗೇಟು

ತಾರಕಕ್ಕೇರುತ್ತಿದೆ. ನಾಯಕರ ಟಾಕ್ ವಾರ್ ಜೋರಾಗಿದೆ. ಸಿದ್ದರಾಮೋತ್ಸವ ದಿನ ಹತ್ತಿರ ಬರುತ್ತಿದ್ದಂತೆ ಅದು ಜೋರಾಗಿದೆ. ನಾಯಕರ ಬಗ್ಗೆ ನಿಮಗೆ ಅಭಿಮಾನವಿದ್ದರೆ ಮೊದಲು ಬಾಯಿ ಮುಚ್ಚಿಕೊಂಡು ಪಕ್ಷಕ್ಕಾಗಿ ಕೆಲಸ ಮಾಡಿ, ಕಾಂಗ್ರೆಸ್ ಪಕ್ಷದತ್ತ ಜನರನ್ನು ಸೆಳೆಯುವ, ಕರೆತರುವ ಕೆಲಸ ಮೊದಲು ಮಾಡಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇಂದು ಬೆಳಗ್ಗೆ ನೀಡಿದ್ದ ಹೇಳಿಕೆಗೆ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ತಿರುಗೇಟು ನೀಡಿದ್ದಾರೆ.

ದಾವಣಗೆರೆಯಲ್ಲಿಂದು ಮಾತನಾಡಿದ ಅವರು, ನಮ್ಮ ಕೆಪಿಸಿಸಿ ಅಧ್ಯಕ್ಷರು ಸಿಟ್ಟು ಮಾಡಿಕೊಂಡರೆ ನಾನು ಏನು ಮಾಡುವುದಕ್ಕಾಗುತ್ತದೆ? ನಾನು ನನ್ನ ಅಭಿಪ್ರಾಯ ಹೇಳಿದ್ದೇನೆ, ನಮ್ಮ ಪಕ್ಷ ಹೈಕಮಾಂಡ್ ಪಕ್ಷ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ತೀರ್ಮಾನ ಮಾಡುತ್ತಾರೆ. ಸಿದ್ದರಾಮಯ್ಯನವರು ಮುಂದಿನ ಮುಖ್ಯಮಂತ್ರಿಯಾಗಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಸಂವಿಧಾನದಲ್ಲಿ ನನ್ನ ಅಭಿಪ್ರಾಯ ಹೇಳಲು ನನಗೆ ಸ್ವಾತಂತ್ರ್ಯವಿದೆ, ನನ್ನ ಅಭಿಪ್ರಾಯ ಹೇಳುವುದು ತಪ್ಪೇನಿಲ್ಲ, ಪಕ್ಷದ ಅಧ್ಯಕ್ಷರಿಗೆ ನಾನು ಗೌರವ ಕೊಡುತ್ತೇನೆ ಎಂದು ತಿರುಗೇಟು ನೀಡಿದರು. ಕಾಂಗ್ರೆಸ್‌ನಲ್ಲಿ ಮುಂದಿನ ಸಿಎಂ ಬಗ್ಗೆ ಮೊದಲು ಹೇಳಿಕೆ ಕೊಟ್ಟವರು ಡಿ.ಕೆ.ಶಿವಕುಮಾರ್ ಅವರಲ್ಲವೇ, ಒಕ್ಕಲಿಗ ಸಮಾವೇಶದಲ್ಲಿ ಬಹಿರಂಗವಾಗಿಯೇ ಹೇಳಿದರು. ಅಧ್ಯಕ್ಷರು ಹೇಳಿದ ನಂತರ ನಾವೆಲ್ಲ ಹೇಳಿದ್ದೆವಷ್ಟೇ. ಅದಕ್ಕೆ ಮೊದಲು ಯಾರೂ ಹೇಳಲಿಲ್ಲ. ಎಲ್ಲರಿಗೂ ಮುಖ್ಯಮಂತ್ರಿಯಾಗಬೇಕೆಂದು ಆಸೆ ಇರುತ್ತದೆ. ಶೇಕಡಾ 15ರಷ್ಟಿರುವ ಮುಸ್ಲಿಮರಿಗೂ ಅವಕಾಶ ಸಿಗಬೇಕು, ಎಲ್ಲಾ ಸಮುದಾಯದವರು ಸೇರಿ ಅವಕಾಶ ಮಾಡಿಕೊಡಬೇಕು ಎಂದರು.

ಪಕ್ಷ ಪೂಜೆ ಜೊತೆಗೆ ವ್ಯಕ್ತಿ ಪೂಜೆಯನ್ನೂ ಮಾಡಬೇಕಾಗುತ್ತದೆ. ಡಿ.ಕೆ.ಶಿವಕುಮಾರ್ ಅವರ ಲೆವೆಲ್ ದೊಡ್ಡದಿರಬಹುದು, ಅವರೇ ದೊಡ್ಡವರಾಗಲಿ, ಸಿದ್ದರಾಮಯ್ಯನವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ನೀಡಿದ್ದ ಕಾರ್ಯಕ್ರಮಗಳನ್ನು ಮೆಚ್ಚಿ ಜನರೇ ಅವರು ಮುಖ್ಯಮಂತ್ರಿಯಾಗಬೇಕೆಂದು ಬಯಸುತ್ತಿದ್ದಾರೆ ಎಂದರು. ಮೊದಲು ಕಾಂಗ್ರೆಸ್, ಆ ಮೇಲೆ ಸಿದ್ದರಾಮಯ್ಯ, ಅದು ಹೈಕಮಾಂಡ್‌ಗೂ ಗೊತ್ತಿದೆ, ಮುಂದಿನ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಯಾರು ಸಿಎಂ ಎಂದು ಹೈಕಮಾಂಡ್ ತೀರ್ಮಾನ ಮಾಡುತ್ತಾರೆ ಎಂದರು.

ಒಕ್ಕಲಿಗ ಸಮುದಾಯ ಹೆಸರಿಸಿ ಮಾತನಾಡುವುದು ಬೇಡ...

ಬೆಂಗಳೂರು, ಜು.23-ಒಕ್ಕಲಿಗರಿಗಿಂತ ಮುಸ್ಲಿಮರು ಹೆಚ್ಚು



ಜಮೀರ್‌ಗೆ ಚೆಲುವರಾಯಸ್ವಾಮಿ ಎಚ್ಚರಿಕೆ...


ಸಂಖ್ಯೆಯಲ್ಲಿ ಇದ್ದೇವೆ ಎಂಬ ಶಾಸಕ ಜಮೀರ್ ಅಹಮ್ಮದ್ ಹೇಳಿಕೆಗೆ ಅವರ ಆಪ್ತರೂ ಆದ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಜಮೀರ್ ಅಹಮ್ಮದ್ ಒಕ್ಕಲಿಗ ಸಮುದಾಯವನ್ನು ಹೆಸರಿಸಿ ಮಾತನಾಡಿರುವುದು ತಪ್ಪು. ಮತ್ತೆ ಆ ರೀತಿ ಮಾತನಾಡುವುದು ಬೇಡ ಎಂದು ಅವರಿಗೆ ಹೇಳುತ್ತೇನೆ ಎಂದರು. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಬೇಕು ಎಂಬ ಬದ್ಧತೆ ಬೇಕಾದರೆ ಪ್ರದರ್ಶಿಸಿಕೊಳ್ಳಲಿ. ಆದರೆ ಒಕ್ಕಲಿಗ ಸಮಾಜವನ್ನು ಹೆಸರಿಸಿ ಮಾತನಾಡುವುದು ಬೇಡ. ಆತ ನನ್ನ ಒಳ್ಳೆಯ ಸ್ನೇಹಿತ. ನಾನು ಹಳ್ಳಿಯಿಂದ ಬಂದವನು. ಅವನು ನಗರದಲ್ಲಿ ಬೆಳೆದವನು. ಬಹಳ ಬುದ್ಧಿವಂತ. ಆದರೆ ಈಗ ಯಾಕೆ ಹೀಗೆ ಮಾತನಾಡುತ್ತಿದ್ದಾನೆ? ಎಂದು ಗೊತ್ತಾಗುತ್ತಿಲ್ಲ ಎಂದರು.

ಇತ್ತೀಚೆಗೆ ಜಮೀರ್ ಅಹಮ್ಮದ್ ಅವರು, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲು ಸಹಕಾರ ನೀಡಿ ಎಂದು ಒಕ್ಕಲಿಗ ಸಮುದಾಯವನ್ನು ಕೇಳಿದ್ದಾರೆ. ಹಾಗೆ ನೋಡಿದರೆ ನಾವು ಮುಸ್ಲಿಮರು ಅವರಿಗಿಂತ ಹೆಚ್ಚಿದ್ದೇವೆ. ಹಾಗಂತ ನಾನೂ ಕೂಡ ಸಿಎಂ ಆಗಬೇಕು ಎಂದು ಕೇಳಬಹುದು. ಆದರೆ ಸಿಎಂ ಆಗಲು ಎಲ್ಲಾ ಸಮುದಾಯದ ಸಹಕಾರ ಅಗತ್ಯ ಎಂದು ಹೇಳಿದ್ದನ್ನು ಸ್ಮರಿಸಬಹುದು.

ಶ್ರೀ ಆಂಜನೇಯ ಸ್ವಾಮಿ 18ನೇ ವಾರ್ಷಿಕೋತ್ಸವ

ಮೈಸೂರು, ಜು.23- ಮೈಸೂರಿನ ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್‌ನ ಶ್ರೀ ಪ್ರಸನ್ನ ಗಣಪತಿ ಮತ್ತು ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಮಂದಿರದ ಆವರಣದಲ್ಲಿರುವ ಶ್ರೀಮದ್ ಆಂಜನೇಯ ಸ್ವಾಮಿಯವರ 18ನೇ ವರ್ಷದ ವಾರ್ಷಿಕೋತ್ಸವವನ್ನು ಜು.31ರಂದು ಬೆಳಿಗ್ಗೆ 9 ಗಂಟೆಗೆ ಆಚರಿಸಲಾಗುತ್ತಿದ್ದು, ರಾಮತಾರಕ ಹೋಮ, ಪವಮಾನ ಹೋಮ ಮತ್ತು ಶ್ರೀ ಸಾಯಿ ಗಾಯಿತ್ರಿ ಹೋಮಗಳು ನಡೆಯಲಿವೆ ಎಂದು ಶ್ರೀ ಪ್ರಸನ್ನ ಗಣಪತಿ ಮತ್ತು ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್‌ನ ಪ್ರಕಟಣೆ ತಿಳಿಸಿದೆ.



ಶನಿವಾರ ಕಾರ್ಯನಿಮಿತ್ತ ಮೈಸೂರಿಗೆ ಆಗಮಿಸಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಡಿಸಿಸಿ ಕಾರ್ಯದರ್ಶಿ ಹುಯಿಲಾಳು ರಾಮಸ್ವಾಮಿ, ಅಭಿನಂದಿಸಿದರು. ಈ ವೇಳೆ ಮುಖಂಡರಾದ ಸಾಹುಕಾರ್‌ಹುಂಡಿ ಗೋಪಾಲಗೌಡ, ಜಟ್ಟಿಹುಂಡಿ ಸುನಿಲ್ ಇದ್ದಾರೆ.

ಮೈಸೂರಲ್ಲಿ ಲೋನ್ ಆ್ಯಪ್‌ಗಳ ಮೂಲಕ ವಂಚನೆ ಪ್ರಕರಣ ಹೆಚ್ಚಳ



ಮೈಸೂರು, ಜು. 23(ಆರ್‌ಕೆ)- ಲೋನ್ ಆ್ಯಪ್‌ಗಳ ಮೂಲಕ ಸಾರ್ವಜನಿಕರನ್ನು ವಂಚಿಸುವ ಪ್ರಕರಣಗಳು ಮೈಸೂರಿನಲ್ಲಿ ಹೆಚ್ಚಾಗುತ್ತಿವೆ. ಆನ್‌ಲೈನ್‌ನಲ್ಲಿ ಸಾಲ ಪಡೆಯಲು ಪ್ರಯತ್ನಿಸುತ್ತಿರುವವರನ್ನೇ ಟಾರ್ಗೆಟ್ ಮಾಡಿಕೊಳ್ಳುತ್ತಿರುವ ವಂಚಕರು, ನಕಲಿ ಲೋನ್ ಅಪ್ಲಿಕೇಷನ್‌ಗಳ ಲಿಂಕ್ ಅನ್ನು ಕಳುಹಿಸುತ್ತಿದ್ದು, ಆ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವವರ ದಾಖಲಾತಿ, ಮಾಹಿತಿ ಪಡೆದು ಲೋನ್ ನೀಡುತ್ತಿದ್ದಾರೆ. ನಂತರ ಪಡೆದ ಸಾಲದ ಹಣಕ್ಕಿಂತಲೂ ಅಧಿಕ ಹಣ ಪಾವತಿಸುವಂತೆ ಮೆಸೇಜ್ ಕಳುಹಿಸಿ, ಹಣ ಕಟ್ಟದಿದ್ದಲ್ಲಿ ಅವರ ಕಾಂಟ್ಯಾಕ್ಟ್ ಲಿಸ್ಟ್‌ನಲ್ಲಿರುವ ಎಲ್ಲರಿಗೂ ಮಾರ್ಫ್ ಮಾಡಿದ ಅವರ ನಗ್ನ ಫೋಟೋ ಮತ್ತು ಅಶ್ಲೀಲ ಮೆಸೇಜ್ ಕಳುಹಿಸಿ ಚಾರಿತ್ರ್ಯ ಹರಣ ಮಾಡಿ ಮಾನಸಿಕ ಹಿಂಸೆ ನೀಡುತ್ತಾರೆ.

ಇಂತಹ ಹಲವು ಪ್ರಕರಣಗಳು ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಕೆಲವರು ಅವಮಾನ ಸಹಿಸಲಾರದೇ ಆತ್ಮಹತ್ಯೆಗೂ ಯತ್ನಿಸುತ್ತಿರುವುದಾಗಿ ಮಾಹಿತಿ ಇದೆ. ಇಂತಹ ವಂಚನೆ ಜಾಲದ ಬಗ್ಗೆ ಎಚ್ಚರದಿಂದಿರುವಂತೆ ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಸಾರ್ವಜನಿಕರಿಗೆ ಸಲಹೆ ನೀಡಿದ್ದಾರೆ.

ಆರ್‌ಬಿಐನ NBFC ಲಿಸ್ಟ್‌ನಲ್ಲಿಲ್ಲದಿರುವ ಲೋನ್ ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡಬಾರದು, ವಾಟ್ಸಾಪ್ ಮತ್ತು ಇನ್ನಿತರ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಕರೆಗಳನ್ನು ಸ್ವೀಕರಿಸಬೇಡಿ, ಅನಾಮಧೇಯ ಸಂದೇಶದಲ್ಲಿ ಬರುವ ನೀಲಿ ಬಣ್ಣದ ಲಿಂಕ್‌ಗಳನ್ನು ಕ್ಲಿಕ್ ಮಾಡಬೇಡಿ ಎಂದು ಸಲಹೆ ನೀಡಿರುವ ಅವರು, ಒಂದು ವೇಳೆ ನಕಲಿ ಲೋನ್ ಆ್ಯಪ್‌ಗಳ ಜಾಲಕ್ಕೆ ಬಿದ್ದಲ್ಲಿ ತಕ್ಷಣ ದೂರು ನೀಡಬೇಕು ಎಂದು ಆಯುಕ್ತರು ತಿಳಿಸಿದ್ದಾರೆ.

ನಕಲಿ ಲೋನ್ ಆ್ಯಪ್‌ಗಳಿವು

ಯುಪಿಎ ಲೋನ್, ಎಂಐ ರುಪೇ, ರುಪೀ ಲೋನ್, ಕ್ಯಾಷ್ ಪಾರ್ಕ್ ಲೋನ್, ರುಪೀ ಬಾಕ್ಸ್, ಅಸನ್ ಲೋನ್, ಕ್ಯಾಷ್ ಪಾಕೆಟ್, ಕ್ಯಾಷ್ ಅಡ್ವಾನ್ಸ್, ಸನ್ ಕ್ಯಾಷ್ ಆನ್‌ಸ್ಟ್ರೀಮ್, ಇನ್‌ಸ್ಟಾ ಮನಿ, ಸ್ಟಾಂಡ್ ಪ್ರೊ ಫಾರ್ ಪೇ ಆ್ಯಪ್, ಕ್ಯಾಷ್‌ಪಾ, ಲೋನ್ ಜೋನ್, ಕ್ಯಾಷ್‌ಕರಿ, 66 ಕ್ಯಾಷ್, ಡೈಲಿ ಲೋನ್, ರುಪಿಯಾ ಬಸ್, ಏಂಜೆಲ್ ಲೋನ್, ಲೋನ್ ಸಾಥಿ, ಗೋಲ್ಡ್ ಕ್ಯಾಷ್, ಸ್ಕೈಲೋನ್, ಶಾರ್ಪ್ ಲೋನ್, ಹಾಲಿಡೇ ಮೊಬೈಲ್ ಲೋನ್, ಕ್ವಿಕ್ ಲೋನ್ ಆ್ಯಪ್, ರಾಕೆಟ್ ಲೋನ್, ಲೋನ್ ಹೋಮ್ ಸ್ಮಾಲ್, ಲೆಂಡ್ ಮಾಲೆ, ಈಸಿ ಲೋನ್, ಮಿನ್ಯುಟ್ ಕ್ಯಾಷ್, ಮೈಕ್ಯಾಷ್ ಲೋನ್, ಅರ್ಲಿ ಕ್ರೆಡಿಟ್ ಆ್ಯಪ್, ರಿಚ್ ಕ್ಯಾಷ್, ಬೆಸ್ಟ್ ಪೈಸಾ, ರುಪೀ ಮ್ಯಾಜಿಕ್, ಹೆಲೋ ರುಪೀ ಸೇರಿದಂತೆ ಹಲವು ನಕಲಿ ಲೋನ್ ಆ್ಯಪ್‌ಗಳಾಗಿದ್ದು, ಅವುಗಳ ಬಗ್ಗೆ ಜಾಗೃತರಾಗಿರುವಂತೆ ಡಾ. ಚಂದ್ರಗುಪ್ತ ತಿಳಿಸಿದ್ದಾರೆ.

ದೂರು ನೀಡಲು ಸೈಬರ್ ಕ್ರೈಂ ಹೆಲ್ಪ್‌ಲೈನ್ ಸಂಖ್ಯೆ 1930 ಮತ್ತು 112 ಅಥವಾ ಸೆನ್ ಪೊಲೀಸ್ ಠಾಣೆ 9480802263, 0821-2418598ಗೆ ಕರೆ ಮಾಡುವಂತೆಯೂ ತಿಳಿಸಿದರು.

ಅರ್ಜುನ್ ಸರ್ಜಾ ತಾಯಿ ಲಕ್ಷ್ಮೀದೇವಿ ವಿಧಿವಶ



ಬೆಂಗಳೂರು, ಜು.23-ಖ್ಯಾತ ನಟ ಅರ್ಜುನ್ ಸರ್ಜಾ ತಾಯಿ ಧ್ರುವ ಸರ್ಜಾ ಅಜ್ಜಿ, ಹಿರಿಯ ನಟ ಶಕ್ತಿ ಪ್ರಸಾದ್ ಪತ್ನಿ ಲಕ್ಷ್ಮೀದೇವಿ ನಿಧನರಾಗಿದ್ದಾರೆ.

ವಯೋ ಸಹಜ ಕಾಯಿಲೆಯಿಂದ ಬಳಲುತ್ತಿದ್ದ ಲಕ್ಷ್ಮೀದೇವಿ ಇಂದು ಮಾಧ್ಯಾಹ್ನ 12 ಗಂಟೆ ಸುಮಾರಿಗೆ ನಿಧನ ಹೊಂದಿದ್ದಾರೆ. ಅವರಿಗೆ 84 ವರ್ಷ ವಯಸ್ಸಾಗಿತ್ತು. ಅವರನ್ನು ಕಳೆದ 22 ದಿಗಳಿಂದ ಬೆಂಗಳೂರಿನ ಅಪೋಲೋ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಇಹಲೋಕ ತ್ಯಜಿಸಿದ್ದಾರೆ. ತಾಯಿಯ ಅನಾರೋಗ್ಯದ ಹಿನ್ನಲ್ಲೇ ಅರ್ಜುನ್ ಸರ್ಜಾ ಬೆಂಗಳೂರಿನಲ್ಲೇ ಇದ್ದರು ಎನ್ನುವ ಮಾಹಿತಿ ತಿಳಿದುಬಂದಿದೆ. ಲಕ್ಷ್ಮೀದೇವಿ ಖ್ಯಾತ ನಟ ಶಕ್ತಿ ಪ್ರಸಾದ್ ಜೊತೆ ವಿವಾಹ ಆಗಿದ್ದರು.

ನಿಧನ



ಸಿ.ಆರ್.ರಾಮದಾಸ್

ಮೈಸೂರು, ಜು. 23- ನಿವೃತ್ತ ರೈಲ್ವೆ ಸೂಪರಿಂಟೆಂಡೆಂಟ್ ಹಾಗೂ ಮೈಸೂರಿನ ಅಗ್ರಹಾರದ ವೀಣೆ ಶಾಮಣ್ಣ ರಸ್ತೆ ನಿವಾಸಿ ಸಿ.ಆರ್ ರಾಮದಾಸ್ (89) ಶುಕ್ರವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ ಸಿ.ಆರ್. ನಾಗಮಣಿ, ಮೂವರು ಪುತ್ರರಾದ ಸಿ.ಆರ್.ಯೋಗನರಸಿಂಹ (ಶಿಕ್ಷಣ ಸಂಸ್ಥೆ), ಸಿ.ಆರ್.ಸೀತಾರಾಮ್ (ಅಡ್ವೋಕೇಟ್ ಮತ್ತು ನೋಟರಿ) ಮತ್ತು ಸಿ.ಆರ್. ರಾಜಗೋಪಾಲ್ (ವಕೀಲರು), ಸೊಸೆಯಂದಿರು, ಇಬ್ಬರು ಸಹೋದರಿಯರು, ಓರ್ವ ಸಹೋದರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಶನಿವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.07.2022 ಭಾನುವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ಏಕಾದಶಿ, ನಕ್ಷತ್ರ : ರೋಹಿಣಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ದೇವಲಮಹರ್ಷಿ ಟ್ರಿನಿಟಿ ಪ್ರಥಮ ದರ್ಜೆ ಕಾಲೇಜು** : ರೈಡ್ ಫಾರ್ ಲೈಫ್ ಬೃಹತ್ ಬೈಕ್ ರ್‍ಯಾಲಿ, ಸ್ಥಳ: ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 7 ರಿಂದ.

■ **ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆ** : ಬೆಳಗ್ಗೆ 7ಕ್ಕೆ ಸ್ವಾತಂತ್ರೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಪಾರಂಪರಿಕ ವೇಗದ ನಡಿಗೆ, ಉದ್ಘಾಟನೆ: ವೇದಿಕೆ ಗೌರವಾಧ್ಯಕ್ಷರಾದ ಡಾ. ನಳಿನಿ ತಮ್ಮಯ್ಯ, ಡಾ. ಬಿ.ಎಸ್.ಗೀತಾ ಗಣೇಶ್, ಸಾಮಾಜಿಕ ಚಿಂತಕರಾದ ಸವಿತಾ ಘಾಟ್ಕೆ, ಜಯಂತಿ ಅನಂತ, ಬೆಳಗ್ಗೆ 7.30 ಕ್ಕೆ ಖ್ಯಾತ ಗಾಯಕ ಕೃಷ್ಣಮೂರ್ತಿ ಅವರಿಂದ ಗಾನಲಹರಿ, 8.30ಕ್ಕೆ ಸಭಾ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್, ಅಧ್ಯಕ್ಷತೆ : ಸಮಾಜ ಸೇವಕ ರಘುರಾಂ ವಾಜಪೇಯಿ, ಪ್ರಧಾನ ಭಾಷಣ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಗನ್‌ಹೌಸ್ ಎದುರು.

■ **ಮೈಸೂರು ಜಿಲ್ಲಾ ಗಂಗಾಮತಸ್ಥರ ಸಂಘ** : ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ, ಸ್ಥಳ : ಸಂಘದ ಆವರಣ, ಗಂಗೋತ್ರಿ ಬಡಾವಣೆ, ಬೆಳಗ್ಗೆ 10ಕ್ಕೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವಗಳು, ಶ್ರೀ ಚಕ್ರ ಪೂಜೆ, ಮಹಾಗಣಪತಿ ಹೋಮ, 8ಕ್ಕೆ ಯೋಗ ವಾಸಿಷ್ಠ ಪ್ರವಚನ, ಸಂಜೆ 7ಕ್ಕೆ ವಿಶೇಷ ಕಾರ್ಯಕ್ರಮ, ದತ್ತಸ್ವಾಮಿಗೆ ತೈಲಾಭಿಷೇಕ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ, ಲಯನ್ಸ್ ಕ್ಲಬ್ ಆಫ್ ಮೈಸೂರು ಗಾರ್ಡನ್ ಸಿಟಿ** : ಉಚಿತ ಆರೋಗ್ಯ ಶಿಬಿರ, ವೈದ್ಯರ ದಿನಾಚರಣೆ, ಪತ್ರಿಕಾ ದಿನಾಚರಣೆ, ಸಾಧಕರಿಗೆ ಸನ್ಮಾನ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ : ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಉದ್ಘಾಟನೆ : ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಅಧ್ಯಕ್ಷತೆ : ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದ ಗೌರವಾಧ್ಯಕ್ಷ ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಸಾಧಕರಿಗೆ ಸನ್ಮಾನ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ಪಾಲಿಕೆ ಸದಸ್ಯರಾದ ನಮ್ರತಾ ರಮೇಶ್, ಭಾಗ್ಯ ಮಹದೇಶ್, ಲಯನ್ ಕೆ. ದೇವೇಗೌಡ, ಕೆ. ಹರೀಶ್‌ಗೌಡ, ಕವೀಶ್‌ಗೌಡ, ಸ್ಥಳ : ಶ್ರೀ ಮಹದೇಶ್ವರ ದೇವಸ್ಥಾನ, 1ನೇ ಮುಖ್ಯ ರಸ್ತೆ, ವಿನಾಯಕನಗರ, ಬೆಳಗ್ಗೆ 9.30 ರಿಂದ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ:** ಬೆಳಗ್ಗೆ 8ಕ್ಕೆ ಪತ್ರಕರ್ತರ ಕ್ರೀಡಾಕೂಟ, ಉದ್ಘಾಟನೆ: ರಾಷ್ಟ್ರೀಯ ಅಥ್ಲೆಟ್ ಧನುಷಾ, ಮುಖ್ಯ ಅತಿಥಿಗಳು: ಮೈಸೂರು ಸಂಘ-ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್. ಪ್ರಶಾಂತ್, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಕೃಷ್ಣಯ್ಯ, ಸಂಜೆ 4ಕ್ಕೆ ಬಹುಮಾನ ವಿತರಣಾ ಸಮಾರಂಭ, ಮುಖ್ಯ ಅತಿಥಿಗಳು: ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಚೇತನ್, ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸ್ಥಳ: ಸ್ಪೋರ್ಟ್ಸ್ ಪೆವಿಲಿಯನ್, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿವಿ.

■ **ಅಶೋಕಪುರಂ ಅಭಿಮಾನಿಗಳ ಬಳಗ, ಮಹಿಷ ಮಂಡಲ ಅಂತರರಾಷ್ಟ್ರೀಯ ಬುದ್ಧಿಸ್ಟ್ ಕಲ್ಚರಲ್ ಟ್ರಸ್ಟ್** : ಲೇಖಕ ಸಿದ್ದಸ್ವಾಮಿ ಅವರ ಮಹಿಷ ಮಾಧ್ಯಮ ಪುಸ್ತಕ ಲೋಕಾರ್ಪಣೆ, ಸಾನ್ನಿಧ್ಯ : ಅಷ್ಟಾಂಗ ಮಾರ್ಗ ಧ್ಯಾನ ಕೇಂದ್ರದ ಭಂತೆ ಬೋಧಿದತ್ತ, ಉದ್ಘಾಟನೆ : ಚಲನಚಿತ್ರ ನಟ ಚೇತನ್‌ಕುಮಾರ್, ಅಧ್ಯಕ್ಷತೆ : ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್, ಪುಸ್ತಕ ಬಿಡುಗಡೆ : ಪತ್ರಕರ್ತ ಎ.ಎಸ್. ರಮಾಕಾಂತ್, ಪುಸ್ತಕ ಕುರಿತು ಮಾತನಾಡುವವರು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ಗಂಗೋತ್ರಿ ಗೆಳೆಯರ ಬಳಗ ಟ್ರಸ್ಟ್, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಜೀವಧಾರ ಬ್ಲಡ್ ಬ್ಯಾಂಕ್** : ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ, ಸ್ಥಳ: ಅಂಬೇಡ್ಕರ್ ಸಮುದಾಯ ಭವನ, ಎಸ್‌ಆರ್‌ಎಸ್ ಕಾಲೋನಿ, ಹೂಟಗಳ್ಳಿ, ಬೆಳಗ್ಗೆ 10 ರಿಂದ.

■ **ಮೈಸೂರು ಸಶಸ್ತ್ರ ಪಡೆಗಳ ಮಾಜಿ ಸೈನಿಕರ ಸಂಘ** : 2ನೇ ವಾರ್ಷಿಕ ಮಹಾಸಭೆ, ಸ್ಥಳ: ಕೊಡಗು ಸಹಕಾರ ಸಂಘ, ಜಯಲಕ್ಷ್ಮಿಪುರಂ, ಬೆಳಗ್ಗೆ 10ಕ್ಕೆ

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ** : ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ನೇತಾಜಿ ಸರ್ಕಲ್ ಹತ್ತಿರ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10 ರಿಂದ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್-ಹೌಸ್ ಅಂಡ್ ಫೆಸ್ಟಿವಲ್ಸ್** : ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೋಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ರವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು ರಚನೆ ಮತ್ತು ಪ್ರಸ್ತುತಿ- ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ: ರಚನೆ- ಶ್ರೀನಿವಾಸ ಪ್ರಸಾದ್, ಪ್ರಸ್ತುತಿ- ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 9.00 ರಾಗಲಹರಿ: ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ದೈನಂದಿನ ವಿಶೇಷ, ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಎಂ.ಎಲ್. ವಸಂತಕುಮಾರಿ- ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 12.30 ಎದೆ ತುಂಬಿದ ಹಾಡು: ಪರಿಕಲ್ಪನೆ ಮತ್ತು ಪ್ರಸ್ತುತಿ- ಬಸವರಾಜ್ ಸಾದರ್, 12.45 ಜನಪದಗೀತೆ: ತುಳಸಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ: ಬಿ. ಸುನಂದ ದಿಲೀಪ್, ಎಸ್. ಶಾರದಾ, 3.35 ಮಕ್ಕಳ ಮಂಟಪ- ಮುಖಾಮುಖಿ: ನಾದವಪುಷಾ ಸಂಗೀತ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 4.00 ನಾಟಕ 'ಬೇರು', ರಚನೆ- ಕೃಷ್ಣಮೂರ್ತಿ ಕವತಾರ, ನಿರ್ಮಾಣ-ಉಮೇಶ್ ಎಸ್.ಎಸ್.,4.30 ಡಾ.ಹಾ.ಮಾ.ನಾಯಕ್ ಅವರೊಂದಿಗೆ ಡಾ.ಎನ್.ಎಸ್. ತಾರಾನಾಥ್ ಅವರು ನಡೆಸಿದ್ದ ಸಂವಾದ, ಪ್ರಸ್ತುತಿ- ಎಸ್. ಲಕ್ಷ್ಮೀನಾರಾಯಣ 6.50 ಕೃಷಿರಂಗ 'ಕಿಸಾನ್ ವಾಣಿ' ತೋರಣ ಹೂರಣ: ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್: ಕಥಾನಾಟಕ. ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ 'ಬದುಕು' ಮೂಲಕಥೆ- ದಿವಾಕರ ಹೆಗ್ಡೆ, ನಿರ್ಮಾಣ- ಪ್ರಭುಸ್ವಾಮಿ ಮಳಿಮಠ್, 9.15 ಎಲ್ಲಿ ಯಾವ ಗಿಡಾ ಮರ: ಅರಣ್ಯ ಇಲಾಖಾ ಅಧಿಕಾರಿ ಮನೋಜ ಕುಮಾರ ಅವರೊಂದಿಗೆ ಸಂದರ್ಶನ. ಸಂದರ್ಶಕರು- ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ: ಮೋಹಿತ್ ಕುಮಾರ್- ಗಿಟಾರ್ ವಾದನ 2. ಉಲ್ಲಾಸ್ ರಾಜ್ಹನ್ಸ್ - ತಬಲ, 11.00 ಸವಿನೆನಪು.

■ **ಮೈಸೂರು ಲಿಟರರಿ ಫೋರಮ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್** : ಮೈಸೂರು ಸಾಹಿತ್ಯ ಹಬ್ಬದ 6ನೇ ಆವೃತ್ತಿ, ಸ್ಥಳ: ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10 ರಿಂದ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ದೇವೋತಂ ಚಾರಿಟಬಲ್ ಟ್ರಸ್ಟ್** : ಸಂಸ್ಕೃತ ವಿದ್ವಾಂಸ ಎಚ್. ಯೋಗನರಸಿಂಹಂ ಅವರ ಜನ್ಮ ವರ್ಷಾಚರಣೆ ಪ್ರಯುಕ್ತ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿವೃತ್ತ ಉಪನಿರ್ದೇಶಕ ವಿದ್ವಾನ್ ಟಿ.ವಿ. ಸತ್ಯನಾರಾಯಣ ಅವರಿಂದ ಭಾರತೀಯ ತತ್ತ್ವಶಾಸ್ತ್ರ ಚಿಂತನೆ ಕುರಿತು ಉಪನ್ಯಾಸ, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಆರ್.ಟಿ. ನಗರ ಬಳಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ಮಾಯಕಾರ ಚಾರಿಟಬಲ್ ಟ್ರಸ್ಟ್, ಶ್ರೀ ಮಾಯಾಕಾರ ಗುರುಕುಲ, ಶ್ರೀ ಮಾಯಕಾರ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರ** : ದಶಮಾನೋತ್ಸವ, ಗುರುವಂದನಾ ಹಾಗೂ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ, ಸಾನ್ನಿಧ್ಯ ಬೇಬಿಮಠ ಚಂದ್ರವನ ಆಶ್ರಮದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಅವಧೂತ ದತ್ತಪೀಠಂನ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಪ್ರಮಾಣ ಪತ್ರ ವಿತರಣೆ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ಕುಲಸಚಿವ ಪ್ರೊ.ವಿ.ಗಿರೀಶ್‌ಚಂದ್ರ, ಅಧ್ಯಕ್ಷತೆ: ಸುತ್ತೂರು ಶಿವರಾತ್ರೀಶ್ವರ ಪಂಚಾಂಗಕರ್ತರಾದ ಡಾ. ಕೆ.ಜಿ. ಪುಟ್ಟಹೊನ್ನಯ್ಯ, ಮುಖ್ಯ ಅತಿಥಿಗಳು: ಹಿರಿಯ ಜ್ಯೋತಿಷಜ್ಞರಾದ ಡಾ. ಅರುಳಾಳನ್, ಅರಸು ಮಂಡಲಿ ಸಂಘದ ಅಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇ ಅರಸು, ಶ್ರೀ ಮಾಯಕಾರ ಗುರುಕುಲ ಸಂಸ್ಥಾಪಕ ಡಾ. ಮೂಗೂರು ಮಧುದೀಕ್ಷಿತ್, ಸ್ಥಳ:ಗಾನಭಾರತೀ ಸಂಸ್ಕೃತ ನೃತ್ಯ ಶಾಲೆ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಅಖಿಲ ಕರ್ನಾಟಕ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಹಿತರಕ್ಷಣಾ ಸಂಘ** : ದ್ವಿತೀಯ ಪಿಯು ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಉಚಿತ ಬೋಧನಾ ತರಗತಿ, ಮುಖ್ಯ ಅತಿಥಿಗಳು : ಡಿಡಿಪಿಯುಗಳಾದ ಡಿ.ಕೆ. ಶ್ರೀನಿವಾಸಮೂರ್ತಿ, ನಾಗಮಲ್ಲೇಶ್, ಸಾಹಿತಿ ಬನ್ನೂರು ಕೆ.ರಾಜು, ಎಂ. ಪ್ರಮೀಳಾ ಭರತ್, ಅಧ್ಯಕ್ಷತೆ: ಸಂಘದ ರಾಜ್ಯಾಧ್ಯಕ್ಷ ಕಾಡ್ನೂರು ಶಿವೇಗೌಡ, ಸ್ಥಳ: ದೇವರಾಜ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಸೇನಾ ಪಡೆ:** ನಾಡಪ್ರಭು ಕೆಂಪೇಗೌಡರ ಸ್ಮರಣೆ, ಸಾನ್ನಿಧ್ಯ: ಪ್ರೊ.ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಉಪಸ್ಥಿತರು: ಬಿಜೆಪಿ ಮುಖಂಡ ಯಶಸ್ವಿನಿ ಸೋಮಶೇಖರ್, ಹೆಚ್.ಕೆ. ರಾಮು, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಅಧ್ಯಕ್ಷತೆ : ಜಿಪಂ ಮಾಜಿ ಅಧ್ಯಕ್ಷ ಕೆ. ಮರೀಗೌಡ, ಸ್ಥಳ: ರೋಟರಿ ಶಾಲೆ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಅಘಹರಾನಂದ ಅವರಿಂದ ಸ್ವಾಮಿ ವಿವೇಕಾನಂದರ ಗುರುಭಕ್ತಿ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್** : ಸಂಗೀತ ಕಾರ್ಯಕ್ರಮ, ವಿದುಷಿ ಆತ್ರೇಯಿ ಕೃಷ್ಣ ಅವರಿಂದ ಗಾಯನ, ವಿದುಷಿ ಪೃಥ್ವಿ ಭಾಸ್ಕರ್-ಪಿಟೀಲು, ವಿದ್ವಾನ್ ನಂದನ್ ಕಶ್ಯಪ್ - ಮೃದಂಗ, ವಿದ್ವಾನ್ ಶಮಿತ್ ಗೌಡ-ಘಟಂ, ಸ್ಥಳ: ಕೆ. ವಾಸುದೇವಚಾರ್ಯ ಭವನ, ಶ್ರೀ ನಾದಬ್ರಹ್ಮ ಸಂಗೀತ ಸಭಾ, ಸಂಜೆ 6 ಗಂಟೆಗೆ.

■ **ರಂಗಾಯಣ** : ಹವ್ಯಾಸಿ ಅಭಿನಯ ರಂಗ ತರಬೇತಿ ಶಿಬಿರದ ಶಿಬಿರಾರ್ಥಿಗಳಿಂದ 'ಅಶ್ವಪರ್ವ' ನಾಟಕ, ರಚನೆ: ಎಸ್. ರಾಮನಾಥ, ನಿರ್ದೇಶನ: ಕಾರ್ತಿಕ್ ಉಪಮನ್ಯು, ಸ್ಥಳ: ಭೂಮಿಗೀತ ರಂಗಮಂದಿರ, ರಂಗಾಯಣ, ಸಂಜೆ 6 ಗಂಟೆಗೆ.

■ **ಕಡಾಂಬಿ ಪದ್ಮ ಮೆಮೋರಿಯಲ್ ಟ್ರಸ್ಟ್** : ಡಿವಿಜಿಯವರ 'ಮಂಕುತಿಮ್ಮನ ಕಗ್ಗ' ಪ್ರವಚನ, ಸಂಜೆ 6 ರಿಂದ ದೇವರನಾಮಗಳು, ಸಂಜೆ 6.30 ರಿಂದ ಕು. ತೇಜಸ್ವಿನಿ ಅವರಿಂದ ಪ್ರವಚನ, ಸ್ಥಳ: ಗಣಪತಿ ದೇವಸ್ಥಾನ 'ಐ' ಬ್ಲಾಕ್, ರಾಮಕೃಷ್ಣನಗರ.

■ **ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಹವ್ಯಕ ಸಂಘ:** ಯಕ್ಷಗಾನ ಪ್ರಸಂಗ ಸುಧನ್ವಾರ್ಜುನ, ಹಿಮ್ಮೇಳ: ಭಾಗವತರು: ಅನಂತ ಹೆಗಡೆ, ದಂತಳಿಗೆ, ಮಂಜುನಾಥ, ಗುಡ್ಡೆದಿಂಗ-ಮೃದಂಗ, ಭಾರ್ಗವ ಹೆಗ್ಗೋಡು - ಚಂಡೆ, ಸ್ಥಳ : ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಲವಕುಶ ಪಾರ್ಕ್ ಎದುರು, ಕುವೆಂಪುನಗರ, ಸಂಜೆ 6ಕ್ಕೆ

■ **ಋಷಿ ಸಂಸ್ಕೃತಿ ವಿದ್ಯಾಕೇಂದ್ರ** : ಸಿದ್ಧ ಸಮಾಧಿ ಯೋಗ ಕುರಿತು ಉಚಿತ ಪರಿಚಯ ಕಾರ್ಯಕ್ರಮ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ.


ಮೈಸೂರು ಮಿತ್ರ

ಭಾನುವಾರ 24 ಜುಲೈ 2022



ಎರಡನೇ ತಿರುಪತಿ ಎಂದು ಖ್ಯಾತಿ ಪಡೆದಿರುವ ಮೈಸೂರಿನ ಒಂಟಿಕೊಪ್ಪಲಿನ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ಅಲ್ಲಿನ ಟ್ರಸ್ಟಿಗಳು ಸಾರ್ವಜನಿಕರ ಕೋಟಿಗಟ್ಟಲೆ ಹಣವನ್ನು ಕೊಳ್ಳೆ ಹೊಡೆದಿರುವುದು ಅಲ್ಲಿ ಚಾಲಕರಾಗಿದ್ದವರ ದೂರಿನಿಂದ ಬಯಲಾಗಿದೆ. ಟ್ರಸ್ಟಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಂಡು, ದೇವಾಲಯವನ್ನು ಮುಜರಾಯಿ ಇಲಾಖೆಗೆ ವಹಿಸಬೇಕು. ಇಲ್ಲವಾದಲ್ಲಿ ದೇವಸ್ಥಾನದ ಟ್ರಸ್ಟಿಗಳ ವಿರುದ್ಧ ದೇವಾಲಯದ ಮುಂಭಾಗದಲ್ಲಿ ಮುಂದಿನ ದಿನಗಳಲ್ಲಿ ಉಗ್ರವಾದ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ ಎಂದು ಪಾಲಿಕೆ ಸದಸ್ಯ ಲೋಕೇಶ್ ಪಿಯಾ ನೇತೃತ್ವದಲ್ಲಿ ಶನಿವಾರ ಮೈಸೂರು ಜಿಲ್ಲಾ ಪಂಚಾಯತ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು. ಈ ಸಂದರ್ಭದಲ್ಲಿ ಪ್ರಶಾಂತ್, ಆರ್ಯ, ಸ್ಮರಣ್, ಶೇಖರ್, ನಾಗೇಶ್, ಮಂಜು, ರಾಜು, ಸಾಗರ್ ಇನ್ನಿತರರು ಪಾಲ್ಗೊಂಡಿದ್ದರು.

ಚಾಮುಂಡೇಶ್ವರಿ ಹಬ್ಬ, ವರ್ಧಂತಿ ಉತ್ಸವ ನಾಳೆ



ಮೈಸೂರು, ಜು.23– ಮೈಸೂರಿನ ಹೆಬ್ಬಾಳ್, ಸೂರ್ಯ ಬೇಕರಿ ಸರ್ಕಲ್ ಬಳಿ ಇರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಜು. 25ರಂದು ಬೆಳಗ್ಗೆ 6ರಿಂದ ಚಾಮುಂಡೇಶ್ವರಿ ಹಬ್ಬ ಹಾಗೂ ವರ್ಧಂತಿ ಉತ್ಸವವನ್ನು ಏರ್ಪಡಿಸಲಾಗಿದೆ ಎಂದು ಚಾಮುಂಡೇಶ್ವರಿ ದೇವಸ್ಥಾನ ಸಮಿತಿ ತಿಳಿಸಿದೆ.

ನಕ್ಕರೆ ಅದೇ ಸ್ವರ್ಗ

ಪ್ರಯಾಣಿಕ : (ಬಸ್‌ನಲ್ಲಿ) ಕಂಡಕ್ಟರ್ ಸಿಗರೇಟು ಸೇದಬಹುದಾ?
ಕಂಡಕ್ಟರ್ : ಇಲ್ಲ, ಸೇದಬಾರದು
ಪ್ರಯಾಣಿಕ : ಮತ್ತೆ ಬಸ್‌ನಲ್ಲಿ ಇಷ್ಟೊಂದು ಸಿಗರೇಟು ತುಂಡುಗಳು?
ಕಂಡಕ್ಟರ್ : ಅವರು ಯಾರೂ ನಿಮ್ಮ ಹಾಗೆ ಕೇಳಲಿಲ್ಲ

ಮೈಸೂರು ಮಿತ್ರ

ಭಾನುವಾರ, 24 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ತಪ್ಪುಗಳು ನೀರಿನ ಮೇಲೆ ತೇಲುವ ಹುಲ್ಲಿನಂತೆ ಎದ್ದು ಕಾಣುತ್ತವೆ.
ಸದ್ಗುಣಗಳು ಮುತ್ತಿನಂತೆ ಒಳಗಡೆ ಇರುತ್ತವೆ. – ಡ್ರೈಡನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬೇಸರವಿರಬಾರದು ಅವಸರ ಮಾಡಬಾರದು

ನಿಮ್ಮ ಪತ್ರಗಳು

ಮುರ್ಮುರ ಸಾಧನೆ ಮಹಿಳೆಯರಿಗೆ ಪ್ರೇರಣೆಯಾಗಲಿ

ಮಾನ್ಯರೆ,

ಮಹಿಳೆಯೆಂದರೆ ಅಬಲೆಯಲ್ಲ. ಮಹಿಳೆ ಪುರುಷರಿಗಿಂತ ಪ್ರತಿಯೊಂದು ವಿಷಯದಲ್ಲೂ ಹೆಚ್ಚು ಬಲಶಾಲಿಯಾಗಿರುತ್ತಾರೆ. ಚಾಣಕ್ಯನ ಪ್ರಕಾರ ಧೈರ್ಯದಲ್ಲಿ ಪುರುಷರಿಗೆ ಹೋಲಿಸಿದರೆ ಎರಡು ಪಟ್ಟು ಹೆಚ್ಚು ಮಹಿಳೆಯರು ಧೈರ್ಯವಂತರಾಗಿರುತ್ತಾರೆ. ನೋವು ಸಹಿಸುವ ಶಕ್ತಿ ಮಹಿಳೆಯರಿಗೆ ಹೆಚ್ಚಾಗಿರುತ್ತದೆ.



ಪ್ರಸ್ತುತ ಭಾರತದ ಹದಿನೈದನೇ ರಾಷ್ಟ್ರಪತಿಯಾಗಿ ಆಯ್ಕೆಯಾದ ದ್ರೌಪದಿ ಮುರ್ಮು ಅವರು ಜೂನ್ 20 1958 ರಲ್ಲಿ ಓಡಿಸ್ಸಾ ರಾಜ್ಯದ ಮಯುರುಭಂಜ್ ಜಿಲ್ಲೆಯ ರೈರಂಗ್‌ಪುರ ಪ್ರದೇಶದಲ್ಲಿ ಸಂತಾಲ್ ಬುಡಕಟ್ಟು ಕುಟುಂಬದಲ್ಲಿ ಜನಿಸಿದರು. ಪ್ರಸ್ತುತ ಭಾರತ ದೇಶದ ಪ್ರಥಮ ಪ್ರಜೆಯಾಗಿರುವುದು ಅವರ ಸಾಧನೆಗೆ ಸಾಕ್ಷಿಯಾಗಿದೆ.

ಸಾಧಿಸಲು ಛಲವಿದ್ದರೆ ಏನು ಬೇಕಾದರೂ ಸಾಧಿಸಬಹುದು. ಇಚ್ಛಾಶಕ್ತಿ, ಧೈರ್ಯವಿದ್ದರೆ ಸಂಪನ್ಮೂಲಗಳಿಲ್ಲದಿದ್ದರೂ ಸಾಧನೆ ಮಾಡಬಹುದಾಗಿದೆ. ದ್ರೌಪದಿ ಮುರ್ಮು ಅವರು 1997ರಲ್ಲಿ ರೈರಂಗ್‌ಪುರ್ ನಗರಸಭೆಯ ಕೌನ್ಸಿಲರ್ ಆಗಿ ವೃತ್ತಿ ಜೀವನ ಆರಂಭಿಸಿದರು.

2000 ಸಮಯದಲ್ಲಿ ರಾಜ್ಯ ಸರ್ಕಾರದಲ್ಲಿ ಸಚಿವೆಯಾಗಿ ಸೇವೆ ಸಲ್ಲಿಸಿದ್ದ ದ್ರೌಪದಿ ಮುರ್ಮು, 2015 ಜಾರ್ಖಂಡ್ ಸರ್ಕಾರದ ಗವರ್ನರ್ ಆಗಿ ಸೇವೆ ಸಲ್ಲಿಸಿದ್ದರು. ದ್ರೌಪದಿ ಮುರ್ಮು ಅವರು 2009 –2015ರ ನಡುವೆ ಪತಿ, ಇಬ್ಬರು ಮಕ್ಕಳು, ತಾಯಿ, ಸಹೋದರನನ್ನು ಕಳೆದುಕೊಂಡರೂ ಧೃತಿಗೆಡದೆ ಇವರ ಮಾನಸಿಕ ಧೈರ್ಯ ಭಾರತೀಯ ಮಹಿಳೆಯರಿಗೆ ಪ್ರೇರಣೆಯಾಗಲಿ.

ಬುಡಕಟ್ಟು ಮಹಿಳೆಯಾಗಿ ಇವರ ಸಾಧನೆ ಸದಾ ಸ್ಮರಣೀಯವಾಗಿರುತ್ತದೆ. ದ್ರೌಪದಿ ಮುರ್ಮು ರಾಷ್ಟ್ರಪತಿ ಸ್ಥಾನಕ್ಕೆ ಯಾವುದೇ ಪಕ್ಷಗಳಿಂದ ವಿರೋಧ ಹೆಚ್ಚು ಕಾಣದಿರುವುದಕ್ಕೆ ಪ್ರಮುಖ ಕಾರಣ ಅವರು ಬುಡಕಟ್ಟು ಮಹಿಳೆಯೆಂಬುದು. ರಾಷ್ಟ್ರಪತಿ ಚುನಾವಣೆಯಲ್ಲಿ 5121 ಮತ ಪಡೆದರು ಇದರ ಮೌಲ್ಯ 5,77, 777. ಪ್ರತಿ ಸಂಸದರ ಮತಗಳ ಮೌಲ್ಯ 700 ಅಗಿರುತ್ತದೆ. ದ್ರೌಪದಿ ಮುರ್ಮುರ ಸಾಧನೆ ಪ್ರತಿಯೊಬ್ಬರಿಗೂ ವಿಶೇಷವಾಗಿ ಮಹಿಳೆಯರಿಗೆ ಸ್ಫೂರ್ತಿಯಾಗಲೆಂದು, ದೇಶದ ಎಲ್ಲಾ ನಾಗರಿಕರ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.

ನರೇಗಾ ಕೂಲಿಗಿಂತಲೂ ಅತಿಥಿ ಶಿಕ್ಷಕರ ವೇತನ ಕಮ್ಮಿ

ಮಾನ್ಯರೇ

ರಾಜ್ಯದಲ್ಲಿ ನರೇಗಾ ಕೂಲಿಗಿಂತಲೂ ಕಡಿಮೆ ವೇತನಕ್ಕೆ ಅತಿಥಿ ಶಿಕ್ಷಕರು ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದೊಂದು ರೀತಿ ದಯನೀಯ ಪರಿಸ್ಥಿತಿ. ಇದನ್ನು ನೋಡಿದರೆ ಹಲವು ವರ್ಷ ಶ್ರಮಪಟ್ಟು ಓದಿ ಬಿ.ಎ, ಬಿ.ಇಡಿ ಪದವಿ ಪಡೆದು, ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸುವುದಕ್ಕಿಂತ ಯಾವುದೇ ಖರ್ಚು ವೆಚ್ಚವಿಲ್ಲದೆ ಕೂಲಿ ಮಾಡಿ ಜೀವನ ಮಾಡುವುದು ಲೇಸು. ಪ್ರಸ್ತುತ ನರೇಗಾ ಕೂಲಿ ದಿನವೊಂದಕ್ಕೆ 289 ರೂ. ನೀಡಲಾಗುತ್ತಿದೆ. ಆದರೆ ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸುವವರಿಗೆ ದಿನವೊಂದಕ್ಕೆ 250ರೂ ಮಾತ್ರ ನೀಡಲಾಗುತ್ತಿದೆ. ಇದು ಕನಿಷ್ಠ ವೇತನದ ಅರ್ಧದಷ್ಟು ಕೂಡ ಇಲ್ಲದಂತಾಗಿದೆ. ಕೇವಲ ರೂ.7500 ಗಳಿಗೆ ಕಾರ್ಯನಿರ್ವಹಿಸಿದರೆ ಜೀವನ ನಿರ್ವಹಣೆ ಹೇಗೆ ಎಂಬುದು ಶಿಕ್ಷಕರಿಗೆ ಎದುರಾಗುವ ಬಹುದೊಡ್ಡ ಆತಂಕವಾಗಿದೆ.

– ಪುಟ್ಟಸ್ವಾಮಿ ಹೆಚ್.ಎಂ, ಮಹಾರಾಜ ಕಾಲೇಜು, ಮೈಸೂರು

ರಸ್ತೆ ದುರಸ್ತಿ ಮಾಡಿ



ಮಾನ್ಯರೆ,

ಇದು ಮೈಸೂರಿನ ಯಡಹಳ್ಳಿ–ಆರ್.ಟಿ. ನಗರ ಸಂಪರ್ಕ ರಸ್ತೆ ಇದು ತುಂಬಾ ದುಸ್ಥಿತಿಯಲ್ಲಿದೆ. ಈ ರಸ್ತೆ ಬಿಟ್ಟರೆ ಈ ಭಾಗದ ಜನರಿಗೆ ಬೇರೆ ರಸ್ತೆ ಇಲ್ಲ. ದಿನನಿತ್ಯದ ಎಲ್ಲಾ ಅವಶ್ಯಕತೆಗಳನ್ನು ಇದೆ ರಸ್ತೆಯಲ್ಲಿ ಓಡಾಡಿ ಪೂರೈಸಿಕೊಳ್ಳಬೇಕಾಗಿದೆ. ದ್ವಿಚಕ್ರ ವಾಹನದಲ್ಲಿ ಈ ರಸ್ತೆಯಲ್ಲಿ ಓಡಾಡಿ ಬಿದ್ದವರಿಗೆ ಲೆಕ್ಕವಿಲ್ಲ. ಕಾಲು ಊನ ಆದವರು ಹಲವರು. ದಯವಿಟ್ಟು ಶಾಸಕರಾದ ಜಿ.ಟಿ. ದೇವೇಗೌಡರು, ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆಯ ದುರಸ್ತಿ ಮಾಡಬೇಕೆಂದು ಮನವಿ.

– ಯಡಹಳ್ಳಿ ಗ್ರಾಮಸ್ಥರು, ಮೈಸೂರು.

ಮೈಸೂರು ಏರ್‌ಪೋರ್ಟ್‌ಗೆ ನಾಲ್ವಡಿ ನಾಮಕರಣ ಸ್ವಾಗತಾರ್ಹ

ಮಾನ್ಯರೆ,



ಇತ್ತೀಚೆಗೆ ಸರ್ಕಾರವು ಮೈಸೂರು ವಿಮಾನ ನಿಲ್ದಾಣಕ್ಕೆ "ಆಧುನಿಕ ಮೈಸೂರಿನ ನಿರ್ಮಾತೃ" ಎಂದು ಕರೆಯಲ್ಪಡುವ ನಾಲ್ವಡಿ ಕೃಷ್ಣರಾಜರ ಹೆಸರಿಡಲು ತೀರ್ಮಾನಿಸಿರುವುದು ಸಂತಸದ ಸಂಗತಿಯಾಗಿದೆ, ಮೈಸೂರು ಸಂಸ್ಥಾನ ವಿಶ್ವಮಾನ್ಯವಾಗಿ ಸರ್ವಾಂಗೀಣ ಪ್ರಗತಿ ಹೊಂದಲು ಕಾರಣೀಭೂತರಾದ, ಅಭಿವೃದ್ಧಿಯ ಹರಿಕಾರರಾಗಿ ದೇಶದಲ್ಲಿ ಮಾದರಿ ಮಹಾರಾಜರಾಗಿ, ಮಾನವೀಯ ಹಾಗೂ ಸಾಮಾಜಿಕ ಹರಿಕಾರರಾಗಿ, ನಾಲ್ವಡಿ ಕೃಷ್ಣರಾಜರವರ ಸೇವಾ ಕಾರ್ಯಗಳು ಅವಿಸ್ಮರಣೀಯವಾಗಿದೆ. ದೇಶ ಮತ್ತು ರಾಜ್ಯಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅನನ್ಯ. ಅನೇಕ ಜನಪರ ಯೋಜನೆಗಳ ಮೂಲಕ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಕಾರಣರಾಗಿ, ಇಂದಿಗೂ ಅಚ್ಚಳಿಯದೆ ಜನಮಾನಸದಲ್ಲಿ ಉಳಿದಿದ್ದಾರೆ. ಇದುವರೆಗೆ 73 ವರ್ಷಗಳು ಕರ್ನಾಟಕವನ್ನಾಳಿದ ಮುಖ್ಯಮಂತ್ರಿಗಳ ಕೊಡುಗೆಗಳನ್ನು ಒಂದು ತಕ್ಕಡಿಗೆ ಹಾಗೂ 46 ವರ್ಷಗಳ ಕಾಲ ಆಡಳಿತದಲ್ಲಿ ನಾಲ್ವಡಿಯವರು ನೀಡಿದ ಕೊಡುಗೆಗಳನ್ನು ಇನ್ನೊಂದು ತಕ್ಕಡಿಗೆ ಹಾಕಿ ನೀವೇ ತುಲನೆ ಮಾಡಿದರೆ ಗೊತ್ತಾಗುತ್ತದೆ. ಮೈಸೂರು ಸಂಸ್ಥಾನದ ಅಮೋಘ ಕೊಡುಗೆ. ಶಿಕ್ಷಣ, ಕೃಷಿ, ನೀರಾವರಿ, ಕೈಗಾರಿಕೆ, ರೈಲ್ವೆ, ಬ್ಯಾಂಕ್, ದೂರದೃಷ್ಟಿಯ ಯೋಜನೆಗಳು ಸೇರಿದಂತೆ ಅಪಾರವಾದ ಕೊಡುಗೆಗಳನ್ನು ಸಮಾಜಕ್ಕೆ ನೀಡಿದ್ದಾರೆ. ಪ್ರಜಾಪ್ರಭುತ್ವ ಬಗ್ಗೆ ಅಪಾರವಾದ ನಂಬಿಕೆ ಇಟ್ಟು ಪ್ರಜೆಗಳ ಬಗ್ಗೆ ಕಾಳಜಿಯನ್ನು ಇಟ್ಟಿದ್ದರು. ಮೈಸೂರು ಸಂಸ್ಥಾನದ ಅಭಿವೃದ್ಧಿಯಲ್ಲಿ ಹೊಸ ಭಾಷ್ಯವನ್ನೇ ಬರೆದ, ಮೈಸೂರು ವಿಶ್ವ ಭೂಪಟದಲ್ಲಿ ಗುರುತಿಸಿಕೊಳ್ಳುವಂತೆ ಹಗಲಿರುಳೆನ್ನದೆ ಸಂಸ್ಥಾನಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು ಸಾಧನೆಗೈದ ಮಹಾಪ್ರಭುಗಳ ಹೆಸರನ್ನು ಮೈಸೂರು ವಿಮಾನ ನಿಲ್ದಾಣಕ್ಕೆ ನಾಮಕರಣ ಮಾಡಿರುವುದಕ್ಕೆ ಧನ್ಯವಾದಗಳು.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಸಾಕ್ಷರತೆ ಕಡಿಮೆ ಇದ್ದಾಗ ಸಾಮರಸ್ಯವಿತ್ತು: ಸಾಕ್ಷರತೆ ಹೆಚ್ಚಾದಾಗ ಸಾಮರಸ್ಯ ನಾಶವಾಯ್ತು!

ಶಿಕ್ಷಣ ಪಡೆದವರಲ್ಲೇ ಧರ್ಮ, ಜಾತಿಯ ಅಂಧತ್ವ ಹೆಚ್ಚಾಗಿದೆ: ಮಾಜಿ ಸಿಎಂ ಸಿದ್ದರಾಮಯ್ಯ ವಿಷಾದ

- ‘ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ’ ಗ್ರಂಥ ಬಿಡುಗಡೆ ಕಾರ್ಯಕ್ರಮದಲ್ಲಿ ಸಂವಾದ
- ಚಿಂತಕರು, ರೈತ ಮುಖಂಡರು, ಸಾರ್ವಜನಿಕರ ಪ್ರಶ್ನೆಗೆ ಸವಿಸ್ತಾರ ಉತ್ತರ
- ದೇಶದ ಸಮಸ್ಯೆಗಳ ಬಗ್ಗೆ ತಿಳಿಯುವ ಆಸಕ್ತಿ ಇದ್ದವರು ಅಂಬೇಡ್ಕರರ ಕೊನೆ ಭಾಷಣ ಓದಬೇಕು



ಮೈಸೂರು, ಜು.23(ಜಿಎ)– ಸ್ವಾತಂತ್ರ್ಯ ಬರುವ ಮುನ್ನ ದೇಶದಲ್ಲಿ ಸಾಕ್ಷರತೆ ಸಂಖ್ಯೆ ಶೇ.16ರಷ್ಟು ಇತ್ತು. ಆ ಸಂದರ್ಭದಲ್ಲಿ ಪ್ರತಿ ಹಳ್ಳಿಯಲ್ಲೂ ಸಾಮರಸ್ಯವಿತ್ತು ಆದರೆ, ಇಂದು ದೇಶದಲ್ಲಿ ಶೇ.78ರಷ್ಟು ಸಾಕ್ಷರತೆ ಇದ್ದರೂ ಸಾಮರಸ್ಯ ನಶಿಸುತ್ತಿದೆ ಇದರ ಅರ್ಥ ಶಿಕ್ಷಣ ಪಡೆದವರೂ ಧರ್ಮ, ಜಾತಿ ಎಂಬ ಅಂಧತ್ವಕ್ಕೆ ಒಳಗಾಗುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಷಾದಿಸಿದರು.

ಬೆಂಗಳೂರು ಜನಮನ ಪ್ರತಿಷ್ಠಾನದ ವತಿಯಿಂದ ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿದ್ದ ‘ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ’ ಗ್ರಂಥ ಬಿಡುಗಡೆ ಕಾರ್ಯಕ್ರಮ ಹಾಗೂ ನಂತರ ಸಾಹಿತಿಗಳು, ಚಿಂತಕರು, ರೈತ ಮುಖಂಡರು ಮತ್ತು ಸಾರ್ವಜನಿಕರೊಂದಿಗೆ ಸಂವಾದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ’ ಎಂಬುದು ಅಭಿನಂದನಾ ಗ್ರಂಥ ಅಲ್ಲ, ನಾನು ಸಿಎಂ ಆಗಿದ್ದಾಗ ಅಂದು ನಡೆಸಿದ ಆಡಳಿತ, ಕೈಗೊಂಡ ನಿರ್ಧಾರ, ನೀತಿಗಳ ಬಗ್ಗೆ 27 ಮಂದಿ ಚಿಂತಕರು ಮತ್ತು ಸಾಹಿತಿಗಳು ತಮ್ಮ ಲೇಖನಿಗಳ ಮೂಲಕ ವಿಶ್ಲೇಷಣೆ ಮಾಡಿದ್ದಾರೆ. ಯಾವ ಲೇಖಕರನ್ನು ನಾನು ಭೇಟಿ ಮಾಡಿಲ್ಲ, ನಮ್ಮ ಆಡಳಿತದ ಬಗೆಗಿನ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸಿದ್ದಾರೆ ಎಂದರು.

> ❝ ಎಲ್ಲಿ ಹೋದರೂ ನೀವು ಮುಂದಿನ ಮುಖ್ಯಮಂತ್ರಿಯಾಗಬೇಕು ಎಂದು ಜನ ಹೇಳ್ತಾರೆ ಮತ್ತೊಂದೆಡೆ ಬೇರೆಯೊಬ್ಬರು ಮುಖ್ಯಮಂತ್ರಿಯಾಗಬೇಕು ಎಂದು ಹೇಳುತ್ತಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷದಲ್ಲಿ ಸಿಎಂ ಆಯ್ಕೆಯನ್ನು ಹೊಸದಾಗಿ ಬರುವ ಶಾಸಕರು ಮಾಡಬೇಕು. ಅದನ್ನು ನಮ್ಮ ಹೈಕಮಾಂಡ್ ಒಪ್ಪಬೇಕು. ಅವರ ನಿರ್ಧಾರವೇ ಅಂತಿಮ. ಮೊದಲು ಚುನಾವಣೆಯ ಬಗ್ಗೆ ಚಿಂತಿಸೋಣ, ಅದು ನಂತರದ ವಿಚಾರ. –ಸಿದ್ದರಾಮಯ್ಯ

ಸಂವಿಧಾನವೇ ಶ್ರೇಷ್ಠ: ನಾನು ಪ್ರಜಾಪ್ರಭುತ್ವದಲ್ಲಿ ನಂಬಿಕೆ, ಸಂವಿಧಾನದ ಮೇಲೆ ಗೌರವ ಇರುವವನು. ದೇಶಕ್ಕೆ ಅಗತ್ಯವಿರುವ ಸಂವಿಧಾನವನ್ನು ಅಂಬೇಡ್ಕರ್ ನೇತೃತ್ವದಲ್ಲಿ ನೀಡಲಾಗಿದೆ. ಬೇರೆ ದೇಶಕ್ಕೆ ಹೋಲಿಸಿದರೆ ನಮ್ಮದು ವಿಭಿನ್ನ ದೇಶ. ಅನೇಕ ಜಾತಿ, ಧರ್ಮ ಸಂಸ್ಕೃತಿಗಳಿವೆ. ಸ್ವತಂತ್ರ ಬಂದಾಗ ದೇಶದ ಪರಿಸ್ಥಿತಿ ಬಗ್ಗೆ ಗಂಭೀರ ಚರ್ಚೆ ನಡೆದಿದೆ. ಆ ಮೂಲಕ ದೇಶಕ್ಕೆ ಬೇಕಾದಂತಹ ಸಂವಿಧಾನ, ಧ್ವಜ, ಏಕತೆ ಎಲ್ಲವನ್ನು ಚರ್ಚಿಸಿ ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ಸಂವಿಧಾನ ರೂಪಿಸಲಾಗಿದೆ. ಸಂವಿಧಾನ ರಚನೆಗೆ ಎಲ್ಲರೂ ಕೊಡುಗೆ ನೀಡಿದ್ದಾರೆ ಅಥವಾ ನೀಡಿಲ್ಲ ಎಂದು ನಾನು ಹೇಳಲ್ಲ. ಅಂಬೇಡ್ಕರ್ ಅವರು ಭಾರಿ ಪರಿಶ್ರಮ ಪಟ್ಟು ಸಂವಿಧಾನ ರಚಿಸಿದ್ದಾರೆ. ದೇಶ ಮತ್ತು ಸಮಸ್ಯೆಗಳ ಬಗ್ಗೆ ತಿಳಿಯುವ ಆಸಕ್ತಿ ಇರುವವರು ಅಂಬೇಡ್ಕರ್ ಅವರ ಕೊನೆ ಭಾಷಣ ಓದಬೇಕಿದೆ. ಇದು ಅವರ ಐತಿಹಾಸಿಕ ಭಾಷಣ, ನಾನು ಸಿಎಂ ಆಗಿದ್ದಾಗ ಅಂಬೇಡ್ಕರ್ ಭಾಷಣವನ್ನು ಕನ್ನಡಕ್ಕೆ ಅನುವಾದ ಮಾಡಿಸಿದ್ದೇನೆ. ಅದು ಸರಿ ಸುಮಾರು 10 ಸಂಪುಟಗಳಿದ್ದು, ಸಾಧ್ಯವಾದರೆ ವಿದ್ಯಾವಂತರು ಓದಬೇಕು ಎಂದು ತಿಳಿಸಿದರು.

ಈ ಹಿಂದೆ ಚುನಾವಣೆ ನಡೆದಾಗ ಜನರೇ ಹಣ ಮತ್ತು ಮತ ಎರಡು ನೀಡುತ್ತಿದ್ದರು. ಈಗ ಪರಿಸ್ಥಿತಿ ಹಾಗೆ ಇದ್ಯಾ? ಇದಕ್ಕೆ ರಾಜಕಾರಣಿಗಳ ಜೊತೆಗೆ ಯಾರು ಕಾರಣ. ಇಷ್ಟೆಲ್ಲಾ ಇರುವಾಗ ಸೈದ್ಧಾಂತಿಕ ರಾಜಕಾರಣ, ಪ್ರಾಮಾಣಿಕ ರಾಜಕಾರಣ ಹೇಗೆ ಸಾಧ್ಯ. ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಯಾರಿರುತ್ತಾರೆ? ಚುನಾವಣೆಗೆ ನಿಂತವರನ್ನು ಕೇಳಿ ಎಂದು ಪ್ರಾಮಾಣಿಕ ರಾಜಕಾರಣ ಕುರಿತು ಪ್ರಶ್ನೆ ಕೇಳಿದವರಿಗೆ ಉತ್ತರಿಸಿದರು.

ಇವರಿಗೆ ನಾವೇಕೆ ಮತ ಹಾಕಬೇಕು : ನಾವು ಏಕೆ ಮತ ಹಾಕಬೇಕು? ಹಾಕಿದರೆ ಅವರು ಬೇರೆ ಪಕ್ಷಗಳಿಗೆ ಓಡಿ ಹೋಗುತ್ತಾರೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಇತ್ತೀಚಿನ ರಾಜಕೀಯ ಹಾಳಾಗಿದೆ. ಅದು ಬದಲಾವಣೆ ಆಗಬೇಕು, ಇದು ನಿಜ. ಆದರೆ ಆಪರೇಷನ್ ಕಮಲ ನಡೀತಿದೆ, ಇದನ್ನು ಹುಟ್ಟು ಹಾಕಿದವರು ಯಾರು? ದುಡ್ ಕೊಟ್ಟು ಎಂಎಲ್‌ಎ ಖರೀದಿಸುವುದು ಆಪರೇಷನ್ ಕಮಲ. ರಾಜ್ಯದಲ್ಲಿ 17 ಆಪರೇಷನ್ ಕಮಲ ನಡೆಯಿತು. 2019ರಲ್ಲಿ 17 ಜನ ಆಪರೇಷನ್ ಕಮಲಕ್ಕೆ ಒಳಗಾದರು. ಅವರು ಏನೇ ಕಾರಣ ಕೊಡಬಹುದು. ಆದರೆ ಪಕ್ಷದ ಸಿದ್ಧಾಂತ, ಕಾರ್ಯಕ್ರಮ, ಜನರ ಮತ ಪಡೆದು ಗೆದ್ದು, ಬೇರೆ ಪಕ್ಷಕ್ಕೆ ಹೋಗುವುದು ಪ್ರಜಾಪ್ರಭುತ್ವ ನೀತಿಯೇ? ಮತ್ತೆ ಅವರಿಗೆ ಜನರು ಓಟ್ ಹಾಕುತ್ತಾರೆ ಏನ್ ಹೇಳೋದು? 15 ಮಂದಿಯಲ್ಲಿ 12 ಮಂದಿ ಗೆದ್ದರು ಏಕೆ? ಪ್ರಶ್ನೆ ಕೇಳಿದವರಿಗೆ ಮರು ಪ್ರಶ್ನೆ ಮಾಡಿದರು ಸಿದ್ದು.

ಗಾಂಧೀಜಿ ಬಗ್ಗೆಯೂ ಮಾತನಾಡುತ್ತಿದ್ದರು: ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಗಾಂಧೀಜಿ ಇದ್ದು, ಚುನಾವಣೆಗೆ ಸ್ಪರ್ಧಿಸಿದ್ದರೆ, ಜನ ದುಡ್ ಇಲ್ಲದಿದ್ದರೆ ಮನೆಯಲ್ಲಿರಬೇಕಿತ್ತು ಎನ್ನುತ್ತಿದ್ದರು. ಆದರೂ ನಾವು ನಿರಾಶಾವಾದಿಗಳಾಗಿ ವ್ಯವಸ್ಥೆ ಹಾಳಾಗಲು ಬಿಡಬಾರದು. ಸೈದ್ಧಾಂತಿಕ ಬದ್ಧತೆ ಎಲ್ಲರಲ್ಲೂ ಬರಬೇಕು. ಸಂವಿಧಾನ, ಪ್ರಜಾಪ್ರಭುತ್ವಕ್ಕೆ ಬದ್ಧರಾಗಿರಬೇಕು. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರು ಸಂವಿಧಾನ ಬದ್ಧವಾಗಿ ಆಡಳಿತ ಮಾಡಬೇಕು ಎಂದು ದುಡ್ಡಿನ ರಾಜಕಾರಣದ ಬಗ್ಗೆ ವಿವರಿಸಿದರು.

ಬಿಜೆಪಿಗೆ ಸಂವಿಧಾನದ ಮೇಲೆ ನಂಬಿಕೆ ಇಲ್ಲ: ಪ್ರತಿಯೊಬ್ಬರು ಸಂವಿಧಾನ ಓದಬೇಕು. ಬಿಜೆಪಿಯವರಿಗೆ ಸಂವಿಧಾನದ ಬಗ್ಗೆಯೇ ನಂಬಿಕೆ ಇಲ್ಲ. ಅವರ ಪ್ರಕಾರ ಒಂದು ಚಿಹ್ನೆ, ಒಂದು ಸಿದ್ಧಾಂತ, ಒಬ್ಬ ನಾಯಕ ಇರಬೇಕು. ನಮ್ಮ ಸಂವಿಧಾನದಲ್ಲಿ ಅವರು ಅಂದುಕೊಂಡಂತೆ ಇಲ್ಲ. ಸಂವಿಧಾನ ಯಾರ ಕೈಯ್ಯಲ್ಲಿ ಇರುತ್ತೆ ಅದು ಮುಖ್ಯ, ಸಂವಿಧಾನ ವಿರೋಧಿಗಳ ಕೈಯ್ಯಲ್ಲಿ ಇದ್ದರೆ ಅದರ ಉದ್ದೇಶ ಈಡೇರುತ್ತಾ? ಸಂವಿಧಾನ ಬದಲಿಸಬೇಕು ಎಂಬುದು ಅವರ ಮುಖ್ಯ ಉದ್ದೇಶವಾಗಿದೆ. ಆದರೆ, ಅದು ಸುಲಭವಲ್ಲ. ಇದು ಸಾಧ್ಯವಾಗಿದ್ದರೆ ವಾಜಪೇಯಿ ಕಾಲದಲ್ಲೇ ಬದಲಿಸುತ್ತಿದ್ದರು. ಈಗಂತೂ ಸಂವಿಧಾನವೇ ಇರುತ್ತಿರಲಿಲ್ಲ. ಸಮಾನತೆ, ಸಮ ಸಮಾಜ, ಅವರಿಗೆ ಒಪ್ಪಿಗೆ ಇಲ್ಲ. ಶ್ರೇಣೀಕೃತ ವ್ಯವಸ್ಥೆ ನಂಬಿದ್ದಾರೆ. ಹಾಗಾಗಿ ಅವರನ್ನು ಮನುವಾದಿಗಳು ಎನ್ನುವುದು. ಇದರಿಂದಲೇ ಶೋಷಣೆ ಮಾಡುತ್ತಾರೆ. ಅವರಿಗೆ ಮೇಲ್ಜಾತಿ ಮತ್ತು ಕೀಳ್ಜಾತಿಯ ಸಮಾಜ ಇರಬೇಕು ಎಂದು ಆಶಯ ಪಡುತ್ತಾರೆ. ದೇವನೂರು ಮಹದೇವ ಅವರ ಪುಸ್ತಕದಲ್ಲಿ ಆರ್‌ಎಸ್‌ಎಸ್ ಹೆಡಗೇವಾರ್ ಅವರ ಭಾಷಣ ಮತ್ತು ಆರ್‌ಎಸ್‌ಎಸ್‌ನ ಒಳ ಅಜೆಂಡಗಳ ಬಗ್ಗೆ ಬರೆಯಲಾಗಿದೆ ಎಲ್ಲರೂ ಅದನ್ನು ಓದಿ. ಈಗಾಗಲೇ 90 ಸಾವಿರಕ್ಕೂ ಅಧಿಕ ಪ್ರತಿಗಳು ಮಾರಾಟವಾಗಿವೆ ಎಂದರು.

ಯಾರನ್ನಾದರೂ ರಬ್ಬರ್ ಸ್ಟಾಂಪ್ ಮಾಡ್ತಾರೆ: ಬುಡಕಟ್ಟು ಜನಾಂಗದ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಮಾಡಿದ್ದೇವೆ. ನೀವು ನಮಗೆ ಸಮಾನತೆ ಪಾಠ ಹೇಳುತ್ತೀರಾ ಎಂದು ಪ್ರಶ್ನಿಸುತ್ತಾರೆ. ಆರ್‌ಎಸ್‌ಎಸ್ ಸ್ಥಾಪನೆ 1925ರಲ್ಲಿ ಆಗಿದೆ. ಅಲ್ಲಿಂದ ಇಲ್ಲಿವರೆಗೂ ಸಹಸಂಚಾಲಕರಾಗಿ ಮೇಲು ಜಾತಿಯವರು ಬಿಟ್ಟು ಬೇರೆ ಯಾರಾಗಿದ್ದಾರೆ ತೋರಿಸಲಿ. ನಾನು ಇದನ್ನು ಕೇಳಿದರೆ ಅವರಿಗೆ ಉಸಿರೇ ಇಲ್ಲ. ರಬ್ಬರ್ ಸ್ಟ್ಯಾಂಪ್ ಆಗಿ ಯಾರನ್ನು ಬೇಕಾದರೂ ಮಾಡುತ್ತಾರೆ ಮುಖ್ಯಮಂತ್ರಿ ಬೊಮ್ಮಾಯಿ ಸಹ ಆರ್‌ಎಸ್‌ಎಸ್ ಕೈಗೊಂಬೆ, ಅವರ ಸೂತ್ರ ಆರ್‌ಎಸ್‌ಎಸ್ ಕೈಯ್ಯಲ್ಲಿದೆ. ಅವರು ಹೇಳಿದಂತೆ ಇವರು ಕೇಳೋದು ಎಂದರು.

ದಲಿತರಿಗೆ ಹಣ ಮೀಸಲಿಟ್ಟಿಲ್ಲ: ದಲಿತ ಸಮುದಾಯದ ಎಡ ಮತ್ತು ಬಲ ವರ್ಗದವರನ್ನು ಒಗ್ಗೂಡಿಸಿ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅಂಬೇಡ್ಕರ್ ಅವರು ಎಡ–ಬಲ ಎಂದು ಎಲ್ಲೂ ಹೇಳಿಲ್ಲ. ಅಸ್ಪೃಶ್ಯತೆ ನಿವಾರಣೆಗೆ ಹೋರಾಡಿದರು. ರಾಜಕೀಯ ಬೆಳೆದಂತೆ ಅವರ ವೈಯಕ್ತಿಕ ಲಾಭಕ್ಕೆ ಇದನ್ನು ಮಾಡಿಕೊಂಡರು. ಆಂಧ್ರ ಹೊರತಾಗಿ ಇಡೀ ದೇಶದಲ್ಲಿ ಪರಿಶಿಷ್ಟ ಜಾತಿಗೆ ಜನಸಂಖ್ಯೆ ಆಧಾರದಲ್ಲಿ ಹಣ ಖರ್ಚು ಮಾಡಬೇಕೆಂದು ನಮ್ಮ ಸರ್ಕಾರದಲ್ಲಿ ಕಾನೂನು ಮಾಡಲಾಯಿತು. ಹೀಗಾಗಿ ನಮ್ಮ ಸರ್ಕಾರದಲ್ಲಿ 88 ಸಾವಿರ ಕೋಟಿ ಖರ್ಚು ಮಾಡಿದ್ದೇವೆ, ಅದಕ್ಕೂ ಮುನ್ನ 27 ಸಾವಿರ ಕೋಟಿ ಖರ್ಚು ಮಾಡಿದ್ದರು. ಈಗಿನ ಸರ್ಕಾರದಲ್ಲಿ SCP/TCP ಗಾಗಿ 40 ಸಾವಿರ ಕೋಟಿಗೂ ಅಧಿಕ ಮೊತ್ತ ಇಡಬೇಕಿತ್ತು, ಈಗ 22.23 ಕೋಟಿ ಇದೆ. ಇದನ್ನೇಕೆ ಪ್ರಶ್ನಿಸುತ್ತಿಲ್ಲ, ಬಿಜೆಪಿಯಲ್ಲಿರುವ ಈ ಸಮುದಾಯದ ಶಾಸಕರು, ಸಂಸದರು ಏಕೆ ದನಿ ಎತ್ತುತ್ತಿಲ್ಲ. ಹೀಗಿರುವಾಗ ಬದಲಾವಣೆ ಹೇಗೆ ಸಾಧ್ಯ ಹೇಳಿ? ಎಂದರು.

ನಾನು ಅನ್ನಭಾಗ್ಯ, ಮೀಸಲಾತಿ, ಮಂಡಲ್ ಕಮಿಷನ್ ತಂದಾಗ ವಿರೋಧಿಸಿದ್ದು ಯಾರು. ಬಿಜೆಪಿ ಮೀಸಲಾತಿ ಪರ ಇಲ್ಲ. ಹೀಗಾಗಿ ಖಾಸಗೀಕರಣ ಮಾಡಿದ್ದಾರೆ. ಎಲ್ಲವನ್ನು ಖಾಸಗೀಕರಣ ಮಾಡಿರುವ ಪರಿಣಾಮ ದೇಶದಲ್ಲಿ ನಿರುದ್ಯೋಗ ವ್ಯಾಪಕವಾಗಿ ಬೆಳೆಯುತ್ತಿದೆ. ಕಾರಣ ಕೇಳಿದರೆ ಕೊರೊನಾ ನೆಪ ಹೇಳುತ್ತಾರೆ. ಮೇಕ್ ಇನ್ ಇಂಡಿಯಾ ಎಂದರಲ್ಲಾ ಇದು ಆಗಿದ್ಯಾ? ಇಂದು ರಫ್ತಿಗಿಂತ ಆಮದೇ ಜಾಸ್ತಿ ಇದೆ. ಮೇಕ್ ಇನ್ ಇಂಡಿಯಾಗೆ ಅರ್ಥ ಎಲ್ಲಿದೆ? ಭಾವನಾತ್ಮಕ ವಿಚಾರ ಹೇಳಿ ದಿಕ್ಕು ತಪ್ಪಿಸುತ್ತಾರೆ, ಅದರಂತೆ 2019ರಲ್ಲಿ ಪುಲ್ವಾಮಾ ಮತ್ತು ಇತ್ತೀಚೆಗೆ ಕಾಶ್ಮೀರಿ ಫೈಲ್ ಚಿತ್ರಗಳ ಮೂಲಕ ಯುವಕರಿಗೆ ವಿಷ ತುಂಬುವ ಕೆಲಸ ಮಾಡುತ್ತಿದ್ದಾರೆ. ಎಲ್ಲದರಲ್ಲೂ ಕೇಸರೀಕರಣ ಮಾಡಲು ಹೊರಟಿದ್ದಾರೆ. ಇದರ ಬಗ್ಗೆ ಎಚ್ಚರ ವಹಿಸದಿದ್ದರೆ ಶೋಷಣೆ ಮಾಡುತ್ತಾರೆ ಎಂದು ಸಿದ್ದರಾಮಯ್ಯ ಸಂವಾದದ ಉದ್ದಕ್ಕೂ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದರು. ಸಂವಾದದಲ್ಲಿ ಮಂಡ್ಯ, ಮದ್ದೂರು, ಚಿತ್ರದುರ್ಗ, ಬಾಗಲಕೋಟೆ, ಬಾದಾಮಿ, ಕೊಡಗು, ಬೆಂಗಳೂರು ಸೇರಿದಂತೆ ಮೈಸೂರಿನ ಸುತ್ತಮುತ್ತಲಿನ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಿ ರಾಜಕೀಯ ಮತ್ತು ವಿವಿಧ ಕ್ಷೇತ್ರಗಳ ಸಮಸ್ಯೆ ಕುರಿತು ಪ್ರಶ್ನೆಗಳಿಗೆ ಸಿದ್ದರಾಮಯ್ಯ ಅವರು ಸಹ ಸವಿಸ್ತಾರವಾಗಿ ಉತ್ತರಿಸಿದರು.



ಮೈಸೂರು ಮಹಾನಗರಪಾಲಿಕೆಯ ಕಾಂಗ್ರೆಸ್ ಸದಸ್ಯರು, ಸಿದ್ದರಾಮಯ್ಯ ಅವರಿಗೆ ಬೆಳ್ಳಿ ಕಿರೀಟ ತೊಡಿಸಿ, ಬೆಳ್ಳಿ ಚೌಕಟ್ಟಿನ ಸ್ಮರಣಿಕೆ ನೀಡಿ, ಅಭಿನಂದಿಸಿದರು.

ಈ ಕಾರಣದಿಂದ ಚಾಮುಂಡೇಶ್ವರಿಯಲ್ಲಿ ಸೋಲು...!

ಸದಾಶಿವ ಆಯೋಗದ ವರದಿಯನ್ನು ನೀವು ಜಾರಿ ಮಾಡಬಹುದಿತ್ತು ಎಂದು ಪ್ರಶ್ನಿಸಿದವರಿಗೆ ಸಿದ್ದರಾಮಯ್ಯ ಮರು ಪ್ರಶ್ನೆ ಹಾಕಿದರು. ಸದಾಶಿವ ಆಯೋಗದ ವರದಿಯನ್ನು ನಾನು ಕೇಂದ್ರಕ್ಕೆ ಸಲ್ಲಿಸಲಿಲ್ಲ ಎಂದು ಅಂದು ನನ್ನ ವಿರುದ್ಧ ಅನೇಕ ಪ್ರತಿಭಟನೆಗಳು ನಡೆದಿದ್ದವು, ಆದರೆ ಈ ವರದಿ ಜಾರಿಗೆ ಬರುವಂತೆ ಈಗಿನವರು ಯಾರು ಕೇಳಿದ್ದಾರೆ. ಆದರೂ ಅವರಿಗೂ ನೀವು ಜೈಕಾರ ಹಾಕುತ್ತೀರಾ, ಅದು ತಪ್ಪಲ್ಲ. ನಿಮ್ಮವರನ್ನು ನೀವು ಗುರುತಿಸಬೇಕು. ಹಾಗಂತ ತಪ್ಪು ಮಾಡಿದರು ಏಕೆ ಸುಮ್ಮನಿರುತ್ತೀರಾ. ಈಗೇಕೆ ಪ್ರತಿಭಟನೆಗಳು ನಡೆಯುತ್ತಿಲ್ಲ. ಇದನ್ನೆಲ್ಲಾ ನೋಡಿದರೆ ಜನರಿಗೆ ಸರಿ/ತಪ್ಪಿನ ತೀರ್ಮಾನ ಮಾಡುವ ಶಕ್ತಿ ಇಲ್ಲ ಅನ್ನಿಸುತ್ತದೆ. ನನಗೆ 2018ರಲ್ಲಿ ಹಿನ್ನಡೆ ಆಗಲು ಇದು ಕಾರಣ. ಅಹಿಂಸ ಎಂದುಕೊಂಡು ಕೆಲವರು ಬಂದಿದ್ದರು. ಅವರೆಲ್ಲಾ ನಮ್ಮ ವೋಟ್ ಬೇಡವೇ ಎಂದು ಪ್ರಶ್ನೆ ಮಾಡಿದರು. ನಾನು ಸಂವಿಧಾನದ ಪ್ರಕಾರ ಮಾಡಿದ್ದೇನೆ ಎಂದಿದ್ದೆ. ನಾವು ಸೋಲಿಸುತ್ತೇವೆ ಎಂದಿದ್ದರು. ದೇಶದ ಯಾವುದೇ ರಾಜ್ಯ ಈ ಕಾನೂನು ಮಾಡಿಲ್ಲ. ನನ್ನ ಸರ್ಕಾರ ಮಾಡಿತು. ಅವರು ನನ್ನನ್ನು ಸೋಲಿಸಿದರು. ಮೋದಿ ಅವರು ಮೇಲ್ಜಾತಿಯ ಜನರಿಗೆ 10% ಮೀಸಲಾತಿ ತರಲು ಮುಂದಾದರು. ಇದಕ್ಕೆ ನಾನು ವಿರೋಧ ಮಾಡಿದೆ. ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಬೇಕು ಎಂದು ಸಂವಿಧಾನದ ಆರ್ಟಿಕಲ್ 15/16 ಹೇಳುತ್ತವೆ. ಆದರೂ ಏಕೆ ಸುಮ್ಮನ್ನಿದ್ದೀರಾ. ಮೋದಿ ಇದನ್ನು ಮಾಡಿ ‘ನಾನಲ್ಲ ಗಾಂಧಾರಿ’ ಎಂಬಂತೆ ಸುಮ್ಮನಾಗಿ ಬಿಟ್ಟರು. ಆದರೂ ನೀವ್ಯಾರು ಪ್ರಶ್ನಿಸಲಿಲ್ಲ. ಎಂದರು.


ಸಿದ್ದು ಸಿದ್ಧಾಂತಕ್ಕೆ ಖರ್ಗೆ ಸರ್ಟಿಫಿಕೇಟ್...

ಮೈಸೂರು: ಯಾರಿಗೆ ಸಮಾಜದ ಏಳ್ಗೆ ಬಗ್ಗೆ ಆಸಕ್ತಿ ಇರುತ್ತದೆಯೋ ಅವರಿಂದ ಮಾತ್ರ ಜನಪರ ಕೆಲಸಗಳನ್ನು ಮಾಡಲು ಸಾಧ್ಯ. ಆ ಕೆಲಸವನ್ನು ಮಾಜಿ ಸಿಎಂ ಸಿದ್ದರಾಮಯ್ಯ ಮಾಡಿದ್ದಾರೆ ಎಂದು ರಾಜ್ಯಸಭೆ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಸಿದ್ದರಾಮಯ್ಯ ಅವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

‘ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ’ ಗ್ರಂಥ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಿದ್ದರಾಮಯ್ಯ ತಮಗೆ ಸಿಕ್ಕಿದ ಆಡಳಿತ ಅವಕಾಶದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಆಹಾರ ಸುರಕ್ಷತಾ ಕಾಯ್ದೆ ಬಂದ ನಂತರ ‘ಅನ್ನಭಾಗ್ಯ’ ಜಾರಿಗೊಳಿಸಿ ಬಡಜನರು, ಕೂಲಿ ಕಾರ್ಮಿಕರಿಗೆ ಉಚಿತವಾಗಿ ಅಕ್ಕಿ ನೀಡುವ ಕೆಲಸ ಮಾಡಿದರು. ಅನೇಕ ಜನಪರ ಕಾರ್ಯಕ್ರಮಗಳನ್ನು ನೀಡಿದರು. ನೀರಾವರಿಗೂ ಸಾಕಷ್ಟು ಅನುದಾನ ನೀಡಿದರು ಎಂದರು. ಅವರ ಜನಪರ ಆಡಳಿತದ ಕಾರಣಕ್ಕಾಗಿ ಪಕ್ಷ ಅವರ ಹಿಂದೆ ನಿಂತಿದ್ದರಿಂದ ಅವರಿಗೆ ಮತ್ತಷ್ಟು ಧೈರ್ಯ ಬಂತು. ಶಾಸಕರ ಬಲ ಇಲ್ಲದಿದ್ದರೆ ಯಾವ ಕೆಲಸವನ್ನೂ ಮಾಡಲಾಗುವುದಿಲ್ಲ. ಎಲ್ಲಾ ಶಾಸಕರನ್ನು ವಿಶ್ವಾಸಕ್ಕೆ ಪಡೆದು ಕೆಲಸ ಮಾಡಿದರು. ಸಂವಿಧಾನದ ಆಶಯಗಳ ಪ್ರಕಾರವೇ ಅವರು ಆಡಳಿತ ನಡೆಸಿದರು. ಸಂವಿಧಾನಕ್ಕೆ ವಿರುದ್ಧವಾಗಿರುವುದನ್ನು ಎಂದಿಗೂ ಅವರು ಮಾಡುವುದಿಲ್ಲ. ಅಂಥವರು ಮಾಡುವ ಕಾರ್ಯಕ್ರಮಗಳಿಗೆ ನಾವು ಬೆಂಬಲಿಸಬೇಕು ಎಂದು ಅಭಿಪ್ರಾಯಪಟ್ಟರು. ಆರಂಭದಲ್ಲಿ ಹಾಸ್ಯ ಧಾಟಿಯಲ್ಲೇ ಭಾಷಣ ಆರಂಭಿಸಿದ ಖರ್ಗೆ, ನನಗೆ ಕಾರ್ಯಕ್ರಮಕ್ಕೆ ಬರುವಂತೆ ಸಿದ್ದರಾಮಯ್ಯ ಆದೇಶ ನೀಡಿದ್ದರಿಂದ ಬಂದೆ ಎಂದು ಮಾತು ಆರಂಭಿಸಿದರು.

ನಾನು ಸಿದ್ದರಾಮಯ್ಯ ಅವರನ್ನು ಮೆಚ್ಚಿಸಲಿಕ್ಕಾಗಿಯೋ ಅಥವಾ ಸಂತೋಷಪಡಿಸಲಿಕ್ಕಾಗಿಯೋ ಬಂದವನಲ್ಲ. ಅವರ ಸೈದ್ಧಾಂತಿಕ ನಿಲುವು ಉತ್ತಮವಾಗಿದೆ. ಹಾಗಾಗಿ ನಾನು ಇಲ್ಲಿಗೆ ಬಂದಿದ್ದೇನೆ. ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸಿದ್ದರಾಮಯ್ಯನವರ ಕೊಡುಗೆ ಮತ್ತು ಸಾಧನೆಗಳನ್ನು ಎತ್ತಿ ಹಿಡಿಯಲು ಈ ಕಾರ್ಯಕ್ರಮಕ್ಕೆ ಬಂದಿದ್ದಾಗಿ ತಿಳಿಸಿದರು.

ಕೋಟಿಗಟ್ಟಲೆ ಬಡವರಿಗೆ ಅನ್ನ ನೀಡುವ ಉದ್ದೇಶದಿಂದ ಅನ್ನಭಾಗ್ಯ ಯೋಜನೆ ಸಿದ್ದರಾಮಯ್ಯ ಸರ್ಕಾರ ಕೈಗೊಂಡಿರುವ ಮಹತ್ವದ ನಿರ್ಧಾರಗಳಲ್ಲಿ ಒಂದಾಗಿದೆ ಎಂದು ಪ್ರತಿಪಾದಿಸಿದ ಅವರು, ಬಡವರ ಬಗ್ಗೆ ನಿಜವಾದ ಕಾಳಜಿ ಇರುವವರು ಮಾತ್ರ ಇಂತಹ ಕಾರ್ಯಕ್ರಮಗಳನ್ನು ಘೋಷಿಸಲು ಸಾಧ್ಯ.



ಅವರಿಗೆ ರೈತ ಸಮುದಾಯದ ಬಗ್ಗೆ ಅಪಾರ ಕಾಳಜಿ ಇದ್ದಿದ್ದರಿಂದಲೇ ಸಿದ್ದರಾಮಯ್ಯ ಪ್ರಮುಖ ನೀರಾವರಿ ಯೋಜನೆಗಳಿಗೆ ಭಾರಿ ಪ್ರಮಾಣದ ಅನುದಾನವನ್ನು ಮಂಜೂರು ಮಾಡಿದ್ದರು ಎಂದರು.

ಸಂವಿಧಾನ ರಕ್ಷಣೆ ನಮ್ಮ ಜವಾಬ್ದಾರಿ: ಸಂವಿಧಾನ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಅದನ್ನು ರಕ್ಷಿಸಬೇಕಾಗಿದೆ. ನಾವಿಲ್ಲಿ ರಾಜಕಾರಣ ಮಾಡುತ್ತಿದ್ದೇವೆಯೇ ಹೊರತು ಯಾವ ಧರ್ಮದ ಪ್ರಚಾರವನ್ನೂ ಮಾಡುತ್ತಿಲ್ಲ. ಪ್ರಜಾಪ್ರಭುತ್ವಕ್ಕೆ ಗೌರವ ನೀಡುತ್ತೇವೆ. ಆದರೂ ಜನರು ಬಿಜೆಪಿಯನ್ನೇ ಅಧಿಕಾರಕ್ಕೆ ತರುತ್ತೀರಿ. ಸಾವಿರಾರು ವರ್ಷಗಳಿಂದ ಶೂದ್ರ ಸಮಾಜಕ್ಕೆ ಸ್ಥಾನವಿಲ್ಲ. ಯಾರು ಸಾವಿರಾರು ವರ್ಷಗಳಿಂತ ತುಳಿಯುತ್ತಿದ್ದಾರೋ ಅವರನ್ನೆ ಬೆಂಬಲಿಸುತ್ತೀರಿ ಎಂದು ಖರ್ಗೆ ಜನರತ್ತ ಬೊಟ್ಟು ಮಾಡಿ ತೋರಿಸಿದರು. ನಮಗೆ ಜಾತಿ ಬಗ್ಗೆ ಪ್ರೀತಿ ಇಲ್ಲ, ಸಿದ್ಧಾಂತದ ಬಗ್ಗೆ ಹೆಚ್ಚು ಒಲವು. ಯಾರು ಸಿದ್ಧಾಂತ ಇಟ್ಟುಕೊಂಡು ನಂಬಿಕೆಯಿಂದ ಕೆಲಸ ಮಾಡುತ್ತಾರೋ ಅವರನ್ನು ಬೆಂಬಲಿಸಿ ಎಂದು ಜನರಿಗೆ ಕರೆ ನೀಡಿದರು.

ದೇಶದಲ್ಲಿ 26 ಲಕ್ಷ ಉದ್ಯೋಗ ಖಾಲಿ ಇದೆ. ಆದರೆ ಯವುದೋ ಕಾರಣ ಹೇಳಿ ಅವುಗಳನ್ನು ಭರ್ತಿ ಮಾಡಿಲ್ಲ ಎಂದು ಮೋದಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಖರ್ಗೆ, ಅಧಿಕಾರದಲ್ಲಿದ್ದಾಗ ಸಾಮಾನ್ಯ ಜನರ ಕಲ್ಯಾಣ ಮತ್ತು ಯೋಗ ಕ್ಷೇಮಕ್ಕಾಗಿ ಕೆಲಸ ಮಾಡದ ಚುನಾಯಿತ ಪ್ರತಿನಿಧಿಗಳನ್ನು ಜನರು ಬಿಡುವುದಿಲ್ಲ. ಇದೆಲ್ಲವನ್ನು ಜನರು ಗಮನಿಸುತ್ತಿದ್ದು, ಮುಂದೆ ಭಾರೀ ಬೆಲೆ ತೆರಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕಾಂಗ್ರೆಸ್ ಉತ್ತಮ ಆಡಳಿತ ನೀಡಿದೆ. ಮುಂದೆಯೂ ನೀಡುವ ಶಕ್ತಿಯೂ ಇದೆ ಎಂದ ಅವರು, ಉದಾರವಾಗಿದ್ದವರೆಲ್ಲರೂ ಸಿದ್ದರಾಮಯ್ಯರ ಜೊತೆಗೇ ಇದ್ದರು. ಸಿದ್ದರಾಮಯ್ಯರಿಂದ ಕೋಟಿ ಕೋಟಿ ಅನುದಾನ ಮಂಜೂರು ಮಾಡಿಸಿಕೊಂಡವರು, ಈಗ 5 ರೂ.ಗೆ ಅಲ್ಲಿಗೆ ಹೋಗಿ ಬೀಳುತ್ತಿದ್ದಾರೆ ಎಂದು ವ್ಯಂಗ್ಯವಾಗಿ ಹೇಳಿದರು.

ಮೌಲಿಕ ಪರಾಮರ್ಶನ ಗ್ರಂಥ: ಪುಸ್ತಕ ಕುರಿತು ಸುತ್ತೂರು ಶ್ರೀಗಳು ಅಭಿಮತ

ಮೈಸೂರು, ಜು.23(ಆರ್‌ಕೆಬಿ)– ಜನಮನ ಪ್ರತಿಷ್ಠಾನ ಹೊರತಂದಿರುವ ‘ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ’ ಪುಸ್ತಕವು ಮೌಲಿಕ ಪರಾಮರ್ಶನ ಗ್ರಂಥ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಗ್ರಂಥ ಬಿಡುಗಡೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಗ್ರಂಥದಲ್ಲಿ ಅನೇಕ ಲೇಖಕರು ಸಿದ್ದರಾಮಯ್ಯರ ಆಡಳಿತದ ಬಗ್ಗೆ ವಿಮರ್ಶೆ ಮಾಡಿ ಬರೆದಿದ್ದಾರೆ. ರಾಜ್ಯದ ರಾಜಕೀಯ ಕ್ಷೇತ್ರದಲ್ಲಿ ಜನಪ್ರಿಯ ವ್ಯಕ್ತಿಗಳಲ್ಲಿ ಸಿದ್ದರಾಮಯ್ಯ ಕೂಡ ಒಬ್ಬರು. ಅವರು ಸ್ನೇಹ ಜೀವಿ, ಸಂಘ ಜೀವಿ. ಜನಸಾಮಾನ್ಯರ ಜತೆ ಬದುಕನ್ನು ರೂಪಿಸಿಕೊಂಡವರು. ರಾಷ್ಟ್ರೀಯ ಪಕ್ಷವೊಂದರಲ್ಲಿ ಮುಖ್ಯಮಂತ್ರಿಯಾಗಿ ಸಿಕ್ಕಿದ ಆಡಳಿತವನ್ನು ಸ್ವತಂತ್ರವಾಗಿ ನಿರ್ವಹಿಸುವ ಅವಕಾಶ ಸಿಕ್ಕಿದ್ದು ಬಹುಶಃ ಸಿದ್ದರಾಮಯ್ಯ ಅವರಿಗೆ ಮಾತ್ರ ಎಂದು ಅಭಿಪ್ರಾಯಪಟ್ಟರು.

ಸಾಮಾನ್ಯ ಹಳ್ಳಿಯಲ್ಲಿ ಹುಟ್ಟಿ, ಬಾಲ್ಯದಲ್ಲಿಯೇ ಮರಳಿನ ಮೇಲೆ ಅಕ್ಷರ ಬರೆದವರು ಇಡೀ ರಾಜ್ಯದ ಚುಕ್ಕಾಣಿ ಹಿಡಿದವರು. ಯಾರೇ ಮಾತನಾಡಿದರೂ ಇಂದು ಡಿ.ದೇವರಾಜ ಅರಸು ಅವರನ್ನು ಪ್ರಸ್ತಾಪಿಸದೆ ಮಾತನಾಡಲು ಸಾಧ್ಯವೇ ಇಲ್ಲ. ಅದೇ ಹಾದಿಯಲ್ಲಿ ಸಾಗಿರುವ ಸಿದ್ದರಾಮಯ್ಯ, ಜನರ ನಾಡಿಮಿಡಿತ, ಸಂಕಷ್ಟಗಳನ್ನು ಅರಿತು, ಅನ್ನಭಾಗ್ಯ ಘೋಷಣೆ ಮಾಡಿದಾಗ ಇಡೀ ಕರ್ನಾಟಕದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಅನ್ನಭಾಗ್ಯ ಬದುಕಿನ ಸೌಭಾಗ್ಯ ಎಂದು ಜನರು ಸಂತಸ ಪಟ್ಟರು. ಯಾವುದೇ ಯೋಜನೆ ಇರಲಿ ಅದು ಸಾಮಾನ್ಯ ಜನರಿಗೆ ಎಷ್ಟರ ಮಟ್ಟಿಗೆ ಅನುಕೂಲವಾಯಿತು ಎಂಬುದು ಮುಖ್ಯ ಎಂದರು. ಏನೇ ಅಡೆತಡೆ ಇದ್ದರೂ ಅದು ಜನಪರವಾಗಿದ್ದರೆ ಅದನ್ನು ಮಾಡಲೇಬೇಕೆಂದು ಜಾರಿ ಮಾಡಿದವರು. ಸದೃಢ, ಸುಭೀಕ್ಷ ಆಡಳಿತ ನೀಡಿದವರು. ಅಂಥ ನಾಯಕರ ಆಡಳಿತದ ಬಗ್ಗೆ ಯಾವ ಹೊಗಳಿಕೆಯೂ ಇಲ್ಲದ ವಿಮರ್ಶಾತ್ಮಕ ಗ್ರಂಥ ಇದಾಗಿದೆ. ದಾವಣಗೆರೆಯಲ್ಲಿ ಮುಂದಿನ ತಿಂಗಳು ನಡೆಯುವ ಅವರ ಹುಟ್ಟುಹಬ್ಬ ಕಾರ್ಯಕ್ರಮದ ಪೂರ್ವ ಈ ಕಾರ್ಯಕ್ರಮ ಎಂದರು.

ಸಿದ್ದರಾಮಯ್ಯರಂಥ ರಾಜಕಾರಣಿಯನ್ನು ನೀಡಿದ ಮೈಸೂರಿಗರಿಗೆ ಧನ್ಯವಾದ: ಬಿ.ಎಲ್.ಶಂಕರ್

ಅಧ್ಯಕ್ಷತೆ ವಹಿಸಿದ್ದ ವಿಧಾನಪರಿಷತ್ತಿನ ಮಾಜಿ ಸಭಾಪತಿ ಡಾ.ಬಿ.ಎಲ್.ಶಂಕರ್ ಮಾತನಾಡಿ, ಕೇವಲ 5ನೇ ತರಗತಿ ಓದಲಾಗದೆ ದನ ಕಾಯುತ್ತಾ, ಸಿಕ್ಕಿದಲ್ಲಿ ಮರಳಿನಲ್ಲಿ ಅಕ್ಷರಗಳನ್ನು ಬರೆಯುತ್ತಿದ್ದ ಸಿದ್ದರಾಮಯ್ಯ ಮುಂದೆ ಇಡೀ ಕರ್ನಾಟಕದ ರಾಜಕಾರಣಕ್ಕೆ ಹೆಚ್ಚು ಅವಶ್ಯ ಎನ್ನುವಂತಾದರು. ಅವರಿಲ್ಲದೆ ಕರ್ನಾಟಕದ ರಾಜಕಾರಣ ಪರಿಪೂರ್ಣವಾಗದು ಎಂದು ತೋರಿಸಿಕೊಟ್ಟರು. ಅವರಿಗೆ ಇಂತಹ ಅವಕಾಶ ಸಿಕ್ಕಿದೆ ಎಂದರೆ ಅದು ಪ್ರಜಾಪ್ರಭುತ್ವ ನೀಡಿದ ಅವಕಾಶ. ಅಂತಹ ರಾಜಕಾರಣಿಯನ್ನು ನೀಡಿದ ಮೈಸೂರು ಜನರಿಗೆ ಧನ್ಯವಾದಗಳು ಎಂದು ಹೇಳಿದರು.

ಸಿದ್ದರಾಮಯ್ಯರ ಪ್ರತಿ ಹೆಜ್ಜೆಯೂ ಹೋರಾಟವೇ ಆಗಿದೆ. ಅಹಿಂದ ಸಂಘಟಿಸಿ, ಅದರ ಪರಿಣಾಮಗಳನ್ನು ಲೆಕ್ಕಿಸದೆ ತೀರ್ಮಾನಗಳನ್ನು ತೆಗೆದುಕೊಂಡರು. ಅವರ ಕೆಲವು ರಾಜಕೀಯ ನಿರ್ಣಯ, ನಿಲುವುಗಳಿಂದಾಗಿ 2018ರಲ್ಲಿ ಸಿದ್ದರಾಮಯ್ಯ ಕಷ್ಟ ಅನುಭವಿಸಬೇಕಾಯಿತು. ಕೆಲವು ಬಾರಿ ನಿಷ್ಠೂರ ತೀರ್ಮಾನಗಳು ಜನರಿಗೆ ತಡವಾಗಿ ಅರಿವಾಗುತ್ತದೆ ಎಂದರು. ಗುಣ ತಿಳಿಯಬೇಕಾದರೆ ಅಧಿಕಾರ ಕೊಟ್ಟು ನೋಡು ಎಂಬ ಅಬ್ರಹಾಂ ಲಿಂಕನ್‌ನ ಹೇಳಿಕೆಯನ್ನು ಪ್ರಸ್ತಾಪಿಸಿದ ಅವರು, ಅದು ಸಿದ್ದರಾಮಯ್ಯ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅನ್ವಯವಾಗುತ್ತದೆ. ಬುದ್ಧ, ಲೋಹಿಯಾ ಹಾದಿಯಲ್ಲಿ ಸಾಗಿದವರು ಜನರ ಕೆಲಸ ಮಾಡುತ್ತಾರೆ. ಅದರಲ್ಲಿ ಸಿದ್ದರಾಮಯ್ಯ ರಾಜ್ಯದ ಜನರ ಒಳಿತಿಗಾಗಿ ಕೆಲಸ ಮಾಡಿದ್ದಾರೆ. ತನ್ನಂತಹ ಸಹಸ್ರಾರು ನಾಯಕರನ್ನು ಹುಟ್ಟು ಹಾಕುವವರೇ ನಿಜವಾದ ನಾಯಕರು. ರಾಮಕೃಷ್ಣ ಹೆಗಡೆಯವರು ನಮ್ಮೆಲ್ಲರನ್ನು ಗುರುತಿಸಿ, ಅವಕಾಶ ಕೊಟ್ಟಿದ್ದರಿಂದಲೇ ನಾವಿಂದು ನಿಮ್ಮೆದುರು ನಿಲ್ಲುವಂತಾಗಿದೆ. ಅದೇ ರೀತಿ ಡಿ.ದೇವರಾಜ ಅರಸು ಅವರ ಹಾದಿಯಲ್ಲಿ ಸಾಗಿರುವ ಸಿದ್ದರಾಮಯ್ಯ ಅವರು ಗಟ್ಟಿ ನಾಯಕರನ್ನು ಗುರುತಿಸಿ, ಅವರಿಗೆ ನಾಯಕತ್ವ ಗುಣಗಳನ್ನು ನೀಡಿ, ಬೆಳೆಸಬೇಕು ಎಂದು ಮನವಿ ಮಾಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹವಾಮಾನ ವೈಪರಿತ್ಯ ಅನಾಹುತಕ್ಕೆ ದಾರಿ...!

ಆರ್.ಪವನ್‌ಕುಮಾರ್
ಮೊ. 9945842882

ಮಳೆ ಎಂದರೆ ಸಾಕು ಹೆದರುವ ನಗರ ಪ್ರದೇಶದ ಮಂದಿ ಇದರ ಸಹವಾಸ ಸಾಕು ಸಾಕೆಂದೇ ಕೈ ಮುಗಿಯುತ್ತಾರೆ. ಏಕೆಂದರೆ ಅಷ್ಟು ಆಧುನಿಕವಾಗಿ ಬೆಳೆದು, ವಿಸ್ತಾರಗೊಂಡು ಎಂಥವರನ್ನು ತನ್ನಡೆ ಸೆಳೆಯುವ ನಗರಕ್ಕೆ ಎದುರಿಂದ, ಮೂರು ತಾಸುಗಳ ಬಿರುಸು ಮಳೆಯ ತಡೆದುಕೊಳ್ಳುವ ಶಕ್ತಿಯೇ ಇಲ್ಲ. ಇದಕ್ಕೆ ಕಾರಣಗಳು ಎಲ್ಲರಿಗೂ ತಿಳಿದಿರುವುದೇ. ಆದರೆ, ಹವಾಮಾನ ವೈಪರಿತ್ಯದಂತಹ ಘಟನೆಗಳಿಗೆ ಈ ನಗರಗಳ ಕೊಡುಗೆಯೇನು ಕಮ್ಮಿಯೆಂದು ಭಾವಿಸುವಂತಿಲ್ಲ. ಅದರ ಮಲಿನಯುಕ್ತವೇ ಸುಂದರ ವಾತಾವರಣವನ್ನು ಸಾಕಷ್ಟು ಹದಗೆಡಿಸುತ್ತದೆ. ಮನುಷ್ಯ ಚಟುವಟಿಕೆಗಳಿಗೆ ಹೆಚ್ಚಿದಷ್ಟು ಜವಾಬ್ದಾರಿಗಳೆಲ್ಲವು ತನ್ನಿಂದ ತಾನೇ ಸರಿಯುವಂತೆ ಬೆಳೆದು ನಿಂತ ನಗರಗಳೆಲ್ಲವು ಹವಾಮಾನವೆಂಬುದನ್ನು ಮರೆತು ಬಿಟ್ಟಿವೆ. ಹಾಗೇ ತನಗೂ ಅದಕ್ಕೂ ಸಂಬಂಧವಿಲ್ಲವೆನ್ನುವಂತೆ ವರ್ತಿಸುತ್ತವೆ. ಇವುಗಳು ದೊಡ್ಡ ಮಟ್ಟದಲ್ಲಿ ಉಗುಳುವ ವಾಯುಮಾಲಿನ್ಯ ಇತರೆ ಎಲ್ಲವು ಸದ್ದಿಲ್ಲದೆ ವಾತಾವರಣಕ್ಕೆ ಸೇರಿ ಪ್ರತಿಕೂಲ ಪರಿಸ್ಥಿತಿಯ ಸೃಷ್ಟಿಸುತ್ತದೆ. ಕೊನೆಗೆ ಇದರ ಪರಿಣಾಮಗಳು ಎಲ್ಲೋ, ಯಾರ ಮೇಲೋ ಆಗುಬಹುದೆಂಬ ಲೆಕ್ಕಾಚಾರ ತಲೆ ಕೆಳಗಾಗುವಂತೆ ವೈಪರಿತ್ಯಗಳು ಬಂದೆರಗುತ್ತಿವೆ.


ಹವಾಮಾನ ವೈಪರಿತ್ಯ ಇಂದು ಬಹು ದೊಡ್ಡ ಜಾಗತಿಕ ಸಮಸ್ಯೆಯಾಗಿದೆ. ಅದರ ದುಷ್ಪರಿಣಾಮಗಳು ಎಲ್ಲೆಡೆಯು ಕಾಣಿಸಿಕೊಳ್ಳುತ್ತಿದ್ದು, ಈ ಕುರಿತು ಗಂಭೀರ ಚಿಂತನೆಯ ಅವಶ್ಯಕತೆಯಿದೆ. ಬಿಸಿಲು, ಮಳೆ, ಚಳಿಯಲ್ಲಿ ಊಹಿಸಲು ಅಸಾಧ್ಯವಾದ ಮಾರ್ಪಾಟುಗಳು ಉಂಟಾಗಿದ್ದು, ಹೇಗೆಂಬುದಕ್ಕೆ ಕಾರಣ ಕಂಡುಕೊಳ್ಳಬೇಕು. ಈ ಕಾರಣದ ಜೊತೆಗೆ ಸಮಸ್ಯೆಯ ಪರಿಹಾರಕ್ಕೆ ಹಲವು ಮಾನದಂಡಗಳ ಅನುಸರಿಸುವುದು ಮುಖ್ಯ.

ವಾತಾವರಣವೆಂದ ಎಲ್ಲಿಯೋ ಏನೋ ಎಂದು ಭಾವಿಸಿರುವ ನಮಗೆ ಅದು ನಮ್ಮನ್ನು ಸೇರಿದಂತೆ ಇಡೀ ಭೂಮಿಯನ್ನೆ ಆವರಿಸಿಕೊಂಡಿರುವ ರೀತಿಯನ್ನು ಮೊದಲು ಅರಿತುಕೊಳ್ಳಬೇಕು. ಇಲ್ಲವಾದರೆ ಮುಂದಿನ ದಿನಗಳು ತುಂಬಾ ಘೋರವಾಗಿ ನಮ್ಮನ್ನು ತತ್ತರಿಸುವಂತೆ ಮಾಡುತ್ತವೆ. ವಿಶ್ವ ಮಟ್ಟದಲ್ಲಿ ನುರಿತ ತಜ್ಞರು ಸೇರಿ ನಡೆಸಿದ ಅನೇಕ ಚರ್ಚೆ, ಸಭೆ, ಕಾರ್ಯಕ್ರಮಗಳೆಲ್ಲವು ಈ ಹವಾಮಾನ ವೈಪರಿತ್ಯದ ಬಗ್ಗೆ ಎಚ್ಚರಿಕೆ ನೀಡುತ್ತ ಬಂದಿವೆಯಾದರು, ಅನುಸರಿಸಬೇಕಾದ ಕ್ರಮಗಳ ಮೇಲಿನ ಅಸಡ್ಡೆ ಮಾತ್ರ ಹೋಗಿಲ್ಲ. ಇದಕ್ಕೆಲ್ಲಾ ಕಾರಣವಾದ ಅಂಶಗಳನ್ನು ಪಟ್ಟಿ ಮಾಡಿ, ಮುಂಜಾಗ್ರತಾ ಕ್ರಮಗಳನ್ನು ಮುಸಲು ಕೇಳಿಕೊಂಡು ಅದು ಗೋಣಾಡಿಸುವಂತೆ ತೋರುತ್ತದೆ. ಏಕೆಂದರೆ ಈ ಕಟ್ಟುನಿಟ್ಟಿನ ಕ್ರಮಕ್ಕೆ ಯಾರೊಬ್ಬರು ಮುಂದಾಗದಂತಿಲ್ಲ. ಹಾಗೆ ಈ ಸಮಸ್ಯೆಗಳು ಬೆಳೆದು ಗಂಭೀರವಾಗುವವರೆಗ ತೆಗೆದುಕೊಳ್ಳಬೇಕಾದ ಕ್ರಮಗಳೆಲ್ಲವು ಬರೀಯ ಹಾಳೆಗಳ ಮೇಲೆ ಅಷ್ಟೇ ಇರುತ್ತವೆ ಎನ್ನಿಸುತ್ತದೆ.

ಸದ್ಯಕ್ಕೆ ಮಳೆಗಾಲ ಪ್ರಾರಂಭವಾಗಿ ಚುರುಕುಗೊಂಡಿದ್ದು, ಬಿಸಿಲು, ಚಳಿಗಿಂತ ಇದರ ಅಬ್ಬರ ಹೆಚ್ಚಾಗಿದೆ. ಇದರ ಹಿನ್ನಲೆಯಲ್ಲೇ ನಾವು ಬದಲಾದ ಮಳೆಯ ವರ್ತನೆಯನ್ನು ಹವಾಮಾನ ವೈಪರಿತ್ಯದೊಂದು ಹೇಳುತ್ತ ಅದು ಸುರಿಯುತ್ತಿರುವ ರೀತಿಯಿಂದ ಸ್ಪಷ್ಟವಾಗುತ್ತಿರುವ ಬಹುತೇಕ ಅನಾಹುತಗಳಿಗೆ ಯಾರನ್ನು ಹೊಣೆ ಮಾಡುವುದು ಅಷ್ಟು ಸುಲಭವಲ್ಲ.

ಈ ದಿನಗಳಲ್ಲಿ ನಮಗೆ ಎಲ್ಲ ಮಳೆಯಿಂದ ಸಂಭವಿಸುವ ಅವಘಡಗಳು ಕೇಳಿ ಬಂದರು ಸಾಕು ಇದಕ್ಕೆ ಮೂಲ ಕಾರಣವಾಗಿ ಹವಾಮಾನ ವೈಪರೀತ್ಯದ ಪರಿಣಾಮವೆಂಬ ಪದ ಕಿವಿಗೆ ಬಿದ್ದೆ ಬೀಳುತ್ತದೆ. ಇದರ ದೆಸೆಯಿಂದಲೇ ಮಳೆ, ಗಾಳಿಗಳು ವಿಕೋಪಕ್ಕೆ ತಿರುಗಿ ಯಾವ ಮುನ್ಸೂಚನೆ ನೀಡದೆ ಒಂದೇ ಭಾರಿಗೆ ಅಬ್ಬರಿಸಿ ಬಿಡುತ್ತವೆ. ಇವು ಹೀಗೆ ಅಬ್ಬರಿಸಿದರೆ ನಮ್ಮ ಸುತ್ತಲಿನ ವಾತಾವರಣದ ಕತೆಯನ್ನು ಕೇಳುವಂತಿಲ್ಲ. ನಾವು ಇದನ್ನು ಪ್ರತಿನಿತ್ಯ ಟಿವಿ, ಪ್ರತಿಕೆಗಳಲ್ಲಿ ನೋಡುತ್ತಲೆ ಇರುತ್ತೇವೆ. ಈ ಮಳೆ ಸೃಷ್ಟಿಸುವ ಅವಾಂತರಗಳು ಒಂದೆರಡಲ್ಲ. ಇದರಲ್ಲಿ ಮೊದಲಿಗೆ ನಗರ ಪ್ರದೇಶಗಳಂತೂ ಇದರ ಹೊಡೆತಕ್ಕೆ ಸಾಕಾಗಿರುತ್ತವೆ. ಇಲ್ಲಿ ಈ ಮಟ್ಟದ ಮಳೆ ಬಿದ್ದರೆ ಪ್ರಯೋಜನವಿಲ್ಲವೆಂದು ಯಾರು ಎಷ್ಟು ಹೇಳಿಕೊಂಡರು ಅಷ್ಟೇ. ಮಳೆ ಮಾತ್ರ ಅದನ್ನು ಪರಿಗಣಿಸುವುದೇ ಇಲ್ಲ. ತನಗೆ ಆಗುವಷ್ಟು ಸುರಿದು ಹೋಗುತ್ತದೆ. ಬಿದ್ದ ಈ ನೀರು ಮಾತ್ರ ಹರಿಯಲು ಜಾಗವಿಲ್ಲದೆ ಎಲ್ಲವನ್ನು ಏಕ ಮಾಡುತ್ತ ನಡೆಯುತ್ತದೆ.





ಇದು ನಗರ ಪ್ರದೇಶದಲ್ಲಿ ಒಂದು ರೀತಿಯ ಬವಣೆಯಾದರೆ ಗ್ರಾಮೀಣ ಪ್ರದೇಶ ಮತ್ತು ಅರಣ್ಯ ಪ್ರದೇಶಗಳ ಸ್ಥಿತಿ ಕೊಂಚ ಬೇರೆ ಅಷ್ಟೆ. ಈಗಾಗಲೇ ಅಲ್ಲಿ ಶುರುವಾಗಿರುವ ಮಾನವ ಚಟುವಟಿಕೆಗಳು ಅತಿಕ್ರಮೇಣವಾಗಿ ಪ್ರವೇಶ ಮಾಡುವುದರ ಜೊತೆಗೆ ದಟ್ಟ ಕಾಡು, ಗುಡ್ಡಗಳ ಸವರಿ ಪ್ರಕೃತಿಯ ಅಸಮತೋಲನಕ್ಕೆ ನಾಂದಿ ಹಾಡಿದೆ. ಮಿತಿಮೀರಿದ ದುರಾಸೆಯ ಫಲವಾಗಿ ಅಕ್ರಮ ಕಾರ್ಯಗಳ ಆರಂಭಿಸಿ ಪಾಲಿಸಬೇಕಾದ ಅಷ್ಟು ನಿಯಮಗಳನ್ನು ಗಾಳಿಗೆ ತೂರಿಬಿಟ್ಟಿವೆ. ಹೀಗೆ ನಿರಂತರವಾಗಿ ಬೇರೆಬೇರೆ ಹೆಸರಿನಲ್ಲಿ ನಡೆಸಿದ ದುಷ್ಕೃತ್ಯದ ಫಲಿತಾಂಶಕ್ಕೆ ಹೆಚ್ಚು ವರ್ಷಗಳು ಕಾಯುವಂತಿಲ್ಲ. ಅದು ನಿಧಾನವಾಗಿ ಒಂದೊಂದಾಗಿ ಕಣ್ಮುಂದೆ ಘಟಿಸುತ್ತಿದೆ. ನಾವು ಗಮನಿಸುವುದಾದರೆ ಮಳೆಗಾಲ ಪ್ರಾರಂಭವಾಗಿ ಚುರುಕು ಪಡೆಯುತ್ತಲೇ ಒಂದೆಡೆ ಭಾರೀ ಮಳೆಯಾದರೆ, ಇನ್ನೊಂದೆಡೆ ಸಾಧಾರಣ ಅಥವಾ ಅದಕ್ಕೂ ಕಡಿಮೆ ಮಳೆಯಾಗುವುದನ್ನು ನೋಡುತ್ತಿದ್ದೇವೆ.

ಈ ಅಸಮತೋಲನ ಹೇಗೆಂದು ಯೋಚಿಸಿದರೆ ಅದಕ್ಕೆ ಕಾರಣವಾದ ಎಲ್ಲಾ ಸಾಕ್ಷಿಗಳು ಎದುರಿವೆ. ಮಳೆಗೆ ಕಾರಣವಾಗುದು ಕಾಡು, ಬೆಟ್ಟ ಗುಡ್ಡ ಪ್ರದೇಶಗಳೆಲ್ಲವು ನಿಧಾನವಾಗಿ ಜನಸಂಖ್ಯೆ ಏರಿದಂತೆ ಮನುಷ್ಯರ ಅವಶ್ಯಕತೆಯ ಪೂರೈಸಲು ಆಕ್ರಮಿತವಾಗುತ್ತಿವೆ. ಎಷ್ಟೇ ಮಳೆ ಸುರಿದರು ಅದನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯಿದ್ದ ಅರಣ್ಯ, ಮಣ್ಣು, ನೀರಿನ ಮೂಲಗಳೆಲ್ಲವು ಸ್ವರೂಪ ಬದಲಿಸಿಕೊಂಡಿದ್ದು, ತೀರ ತೆಳುವಾದ ಕಾರಣ ನೀರು ವ್ಯರ್ಥವಾಗುತ್ತಿದೆ. ನಾವು ಗಮನಿಸುವುದಾದರೆ ಪಶ್ಚಿಮ ಘಟ್ಟದ ಭಾಗಗಳಲ್ಲಿ ಅಭಿವೃದ್ಧಿ ಮತ್ತು ಅನುಕೂಲದ ಹೆಸರಿನಲ್ಲಿ ಹೊಸ ಅವಕಾಶಗಳಿಗೆ ದಾರಿ ಮಾಡಿಕೊಡಲು ಕಾಡುಗಳು ಒಂದು ಪ್ರಮಾಣದಲ್ಲಿ ನಶಿಸುತ್ತಿರುವ ಕಾರಣವೇನೋ. ಅಲ್ಲಿ ಹಿಂದಿಗಿಂತ ಕಡಿಮೆ ಪ್ರಮಾಣದ ಮಳೆಯಾಗುತ್ತಿದ್ದರೆ, ಇತ್ತ ಪೂರ್ಣ ಬಯಲು ಸೀಮೆಯಂತಹ ಭಾಗಗಳಲ್ಲಿ ನಿರೀಕ್ಷೆಗೂ ಮೀರಿದ ದೊಡ್ಡ ಮಟ್ಟದ ಮಳೆ ಸುರಿದು ಅಲ್ಲಿನ ಜನಜೀವನವನ್ನೆ ತತ್ತರಿಸುವಂತೆ ಮಾಡಿದೆ.

ಹೆಚ್ಚು ಮಳೆಯಾಗುವ ಪ್ರದೇಶಗಳ ಕೆಳಭಾಗಕ್ಕೆ ಕಟ್ಟಿದ ಅಣೆಕಟ್ಟುಗಳು ತುಂಬಿ ನಂತರ ಬಂದ ಹೆಚ್ಚುವರಿ ನೀರನ್ನು ಹೊರಗೆ ಹರಿಸಲು ಶುರುಮಾಡುತ್ತವೆ. ಇದರಿಂದ ಅಣೆಕಟ್ಟಿನ ಮುಂದಿನ ಎಲ್ಲವೂ ಮುಳುಗಡೆಯ ಪ್ರದೇಶವಾಗಿ ನೀರು ಹೆಚ್ಚಾದರೆ ಊರುಗಳನ್ನೆ ಮುಳುಗಿಸಿಕೊಳ್ಳುತ್ತಿದೆ. ಹೀಗೆ ಹಳ್ಳಿ, ಊರುಗಳು ಮುಳುಗಿ ಎಷ್ಟೋ ಜನರ ಬದುಕು ಬೀದಿಗೆ ಬಿದ್ದಿರುವುದನ್ನು ಕಾಣುತ್ತಿದ್ದೇವೆ. ಇದೆಲ್ಲಾ ಮಳೆಯ ಅತಿವೃಷ್ಟಿಯ ಫಲ.

ಹಾಗೆ ಹೆಚ್ಚಾದ ಮಳೆ, ಗಾಳಿಯ ಹೊಡೆತಕ್ಕೆ ಯಾವ ಕಾಲದಿಂದಲೋ ಸಮೃದ್ಧವಾಗಿ, ನಿರಾತಂಕವಾಗಿದ್ದ ದಟ್ಟ ಹಸಿರಿನ ಬೆಟ್ಟ, ಗುಡ್ಡ ಪ್ರದೇಶಗಳು ಸಹಿತ ಇಂದಿನ ಮಳೆಯನ್ನು ಸಹಿಸಲಾರದೆ ಒಮ್ಮೆಗೆ ಕುಸಿದು ಬೀಳುತ್ತಿವೆ. ಇವುಗಳ ಕುಸಿತಕ್ಕೆ ಕೆಳಗಿನ ಪ್ರದೇಶದ ಮನೆ, ತೋಟ, ಗದ್ದೆಗಳೆಲ್ಲವು ಸಂಪೂರ್ಣ ಕೊಚ್ಚಿ ಹೋಗಿ ನಾಶವಾಗುತ್ತಿದೆ. ಅದೆಷ್ಟೋ ವರ್ಷಗಳಿಂದ ಬಾಳಿ ಬದುಕಿದ ಮನೆ, ತೋಟ, ಜೀವನ ಕಳೆದುಕೊಂಡುವವರ ಬದುಕು ಅಸನೀಯ.

ಮಳೆಯ ಈ ವರ್ತನೆಯನ್ನು ಯಾರಿಗೂ ಊಹಿಸಲೂ ಸಾಧ್ಯವಿಲ್ಲ. ಅಷ್ಟರಮಟ್ಟಿಗೆ ಅದರಲ್ಲಿ ಬದಲಾವಣೆಯಾಗಿ ಸುರಿದರೆ ನಿರಂತರವಾಗಿ ಸುರಿಯುತ್ತ ಎಲ್ಲವನ್ನು ತನ್ನ ಮುಷ್ಠಿಗೆ ತೆಗೆದುಕೊಂಡು ಜೀವ ಹಿಂಡುತ್ತಿದೆ. ಅಂತೇ ಹಿಂದಿನ ವರ್ಷಗಳಲ್ಲಿ ತಾನು ಸುರಿದು ಬರೆದ ದಾಖಲೆಗಳನ್ನು ತಾನೇ ಮತ್ತೊಮ್ಮೆ ಮುರಿದು ಹೊಸ ದಾಖಲೆ ಸೃಷ್ಟಿಸುತ್ತಿದೆ. ಮಳೆಯ ಈ ಲಕ್ಷಣಕ್ಕೆ ಕಾರಣ ಕೂಡ ಎಲ್ಲರಿಗೂ ಎದ್ದು ಕಾಣುವಂತದ್ದೆ, ಮಳೆಗೆ ಮೂಲವಾಗಿರುವ ಕಾಡುಗಳನ್ನೆ ಮನುಷ್ಯ ಒತ್ತುವರಿ ಮಾಡಿ ಆರ್ಥಿಕ ಚಟುವಟಿಕೆಗಳ ಆರಂಭಿಸಿದ ತರುವಾಯ ಒಂದೊಂದೇ ಇಂಥಾ ಸಮಸ್ಯೆಗಳು ಭುಗಿಲೇಳ ತೊಡಗಿವೆ. ಕೆಲವರ ಹಿತಾಸಕ್ತಿಗಾಗಿ ಇಡೀ ಪ್ರಕೃತಿಯನ್ನೆ ಹಾಳಗೆಡವಲೆತ್ನಿಸುತ್ತಿರುವ ಪರಿಣಾಮ ಹವಾಮಾನದಲ್ಲಿ ಭಾರೀ ಬದಲಾವಣೆಗಳಾಗಿದೆ. ಆ ಬದಲಾವಣೆಯ ಪರಿಣಾಮ ಈ ದಿನಗಳ ಧಾರಾಕಾರ ಮಳೆ ಎಂಬುದು ತಿಳಿದವರ ಮಾತು. ಇದು ಸತ್ಯವೂ ಹೌದು.

ಭೂಮಿಯನ್ನು ಇನ್ನಿಲ್ಲದಂತೆ ಸುತ್ತುವರಿದ ಅನೇಕ ಸಮಸ್ಯೆಗಳು ತಾರಕಕ್ಕೇರುತ್ತಲೇ ಪರಿಸರವನ್ನು ಹಾಳು ಮಾಡುತ್ತಿವೆ. ಇನ್ನೂ ಹವಾಮಾನ ವರದಿಯನ್ನಂತೂ ಕೇಳುವಂತಿಲ್ಲ. ಅದು ವಾಯುಭಾರ ಕುಸಿತದಿಂದ ಆಗುವ ಚಂಡಮಾರುತ, ಸೈಕ್ಲೋನ್‌ಗಳ ಬಗ್ಗೆ ವರ್ಷದ ಬಹುತೇಕ ತಿಂಗಳು ಸೂಚನೆ ಕೊಡುವಂತಾಗಿಬಿಟ್ಟಿದ್ದೆ. ಇತ್ತೀಚಿನ ವರ್ಷಗಳ ಮಳೆಗಾಲ ಮತ್ತು ಮಳೆ ಮೊದಲಿನಂತಿಲ್ಲ. ಅದನ್ನು ಸೂಕ್ಷ್ಮವಾಗಿ ಗಮನಿಸಿದರೆ ಎಂಥಹವರಿಗೂ ತಿಳಿಯುತ್ತದೆ. ಇದಕ್ಕೆಲ್ಲಾ ಕಾರಣಗಳಷ್ಟೇ ಕೆಲವು ಸುಧಾರಿಸುವ ಪರಿಹಾರಗಳಿದ್ದು, ಅದನ್ನು ಕಠಿಣವಾಗಿ ಜಾರಿಗೆ ತಂದು ಪಾಲಿಸದೆ ಹೋದರೆ ಈ ಹವಾಮಾನ ವೈಪರಿತ್ಯವೆಂಬುದು ಪ್ರತಿ ವರ್ಷ ಸಾಮಾನ್ಯವಾಗಿ ಬಳಸುವ ಪದವೆಂದು ಅನ್ನಿಸಿಬಿಡುತ್ತದೆ. ಮುಂದೆ ಈ ಸಮಸ್ಯೆ ಭೀಕರವಾಗಿ ಸೃಷ್ಟಿಸುವ ಅವಂತಾರಗಳಿಗೂ ಇಲ್ಲಿಂದಲೇ ಮುನ್ನುಡಿ ಬರೆದಂತೆ ಆಗುತ್ತದೆ. ಇದನ್ನು ತಪ್ಪಿಸುವ ಸಲುವಾಗಿಯಾದರು ಹವಾಮಾನ ವೈಪರಿತ್ಯದಂತಹ ಬದಲಾವಣೆಗಳನ್ನು ಗಂಭೀರವಾಗಿ ಪರಿಗಣಿಸಬೇಕು. ನಮ್ಮ ಪಾಲಿಗೆ ಸದ್ಯಕ್ಕೆ ಇರುವುದೊಂದೇ ಭೂಮಿಯನ್ನು ಬದುಕಲು ಯೋಗ್ಯವಾಗಿರುವಂತೆ ಕಾಪಾಡಿಕೊಳ್ಳಬೇಕು.

ವಾರಭವಿಷ್ಯ

24.7.2022 ರಿಂದ 30.7.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ಕಟಕ, ಚಂದ್ರ–ವೃಷಭ, ಮಿಥುನ, ಕಟಕ, ಸಿಂಹ, ಕುಜ–ಮೇಷ, ಬುಧ–ಕಟಕ, ಗುರು–ಮೀನ, ಶುಕ್ರ–ಮಿಥುನ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾಮ ಮಾರ್ಗದಿಂದ ಧನಲಾಭ, ಸಂಪತ್ತು, ಸಂಪಾದನೆ. ತೀಕ್ಷ್ಣ ಸ್ವಭಾವದಿಂದ ಕಾರ್ಯಗೇಡು, ಭೂ ವಿವಾದಗಳು ನ್ಯಾಯಾಲಯಕ್ಕೆ ಹೋಗುವುದು, ಆದಾಯದ ಜೊತೆಗೆ ಖರ್ಚುಗಳೂ ಹೆಚ್ಚಾಗುವುದು. ಮಾತಿನ ತೂಕ ತಪ್ಪಿದಲ್ಲಿ ಕಾರ್ಯಗೇಡು, ಭೂ ಆಸ್ತಿ ಖರೀದಿಗೆ ಮುನ್ನ ದಾಖಲೆಗಳನ್ನು ಪರಿಶೀಲಿಸಿ ಮುಂದುವರೆಯಿರಿ. ಹಿತ ಶತ್ರುಗಳಿಂದ ಎಚ್ಚರವಿರಿ. ಶತ್ರುಗಳ ಉಪಟಳದಿಂದ ಕಂಗಾಲಾಗುವಿರಿ.
– ಶ್ರೀ ನೃಸಿಂಹ ಆರಾಧನೆ, ಶುಭಸಂಖ್ಯೆ–1.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದ ಆದಿಗೆ ಯಾವುದೂ ನೀವಂದುಕೊಂಡಂತೆ ಸಾಗದೆ ಮನಸ್ಸಿಗೆ ಬೇಸರವಾಗುವುದು. ಕಾಲ–ಕರ್ಮ ಕಾರಣಗಳು ಕೂಡಿ ಬರುವವರೆಗೆ ಕಾಯಲೇಬೇಕು. ರಾಹು–ಕೇತುಗಳು ಅಶುಭ ಭ್ರಮಣೆಯಲ್ಲಿರುವ ಕಾರಣ ಕೌಟುಂಬಿಕ ತ್ರಾಸಗಳು ಕಾಡುತ್ತವೆ. ವಾರಾಂತ್ಯಕ್ಕೆ ಲಾಭಸ್ಥಾನಕ್ಕೆ ಬರುವ ಚಂದ್ರನಿಂದ ಮುಖದಲ್ಲಿ ಮಂದಹಾಸ ಮೂಡುವುದು. ಅಲಂಕಾರಿಕ ವಸ್ತು ಖರೀದಿ, ಕ್ರೀಡೆಯಲ್ಲಿ ಜಯ.
– ಶ್ರೀ ರಾಹು–ಕೇತು ಸ್ತೋತ್ರ ಪಠಿಸಿ, ಶುಭಸಂಖ್ಯೆ–2.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಉಚ್ಚಚಂದ್ರನಿಂದ ಈ ವಾರದಲ್ಲಿ ಆದಾಯ ಚೆನ್ನಾಗಿದೆ. ವಸ್ತ್ರ, ರೆಡಿಮೇಡ್ ಗಾರ್ಮೆಂಟ್ಸ್, ಕ್ಷೀರ ಜನಿತ ವ್ಯಾಪಾರಿಗಳಿಗೆ ಉತ್ತಮ ಆದಾಯವಾಗಲಿದೆ. ಪ್ರೀತಿ–ಪ್ರಣಯ ವಿಷಯಗಳು ಶುಭಾಂತ್ಯವಾಗುವ ಸಾಧ್ಯತೆ ಇದೆ. ಗುರುಕೃಪೆಯಿಂದ ನಿವೇಶನ, ಆಸ್ತಿ ಖರೀದಿಸುವ ಯೋಗವಿದೆ. ವ್ಯಾಪಾರದಲ್ಲಿ ಹೊಸ ಯೋಜನೆಗಳ ಸೇರ್ಪಡೆ. ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಯೋಗ. ಅಗ್ನಿ, ವಿದ್ಯುತ್ ಅಪಘಾತಗಳಿಂದ ಎಚ್ಚರವಿರಿ.
– ಶ್ರೀದೇವೀ ಸ್ತುತಿ, ಶುಭಸಂಖ್ಯೆ–3.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ)
ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ವಿದ್ಯಾರ್ಥಿಗಳು ಚುರುಕುತನ ತೋರುವರು. ಉದ್ಯಮಪತಿಗಳಿಗೆ ನೌಕರ ವರ್ಗದವರ ಸಹಕಾರದಿಂದ ಉತ್ತಮ ಧನಲಾಭವಾಗುವುದು. ಆಸ್ತಿ ವಿಚಾರಗಳಲ್ಲಿ ಉಂಟಾಗಿದ್ದ ವಿವಾದಗಳು ನಿವಾರಣೆ ಆಗುವುದು. ಹಳೆಯ ಕಾಯಿಲೆ ಉಪಶಮನವಾಗುವುದು. ರೈತಾಪಿ ಜನರಿಗೆ ಉತ್ತಮ ಫಸಲು ಹಾಗೂ ಬೆಲೆ ದೊರಕುವುದು. ಸಣ್ಣ ಮಟ್ಟ ಅಪಘಾತಗಳಿಂದ ಜಾಗೃತರಾಗಿರಿ.
– ಶ್ರೀ ಗಣಪತಿ ಸೇವೆ, ಶುಭಸಂಖ್ಯೆ–7.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದಾರಂಭಕ್ಕೆ ಚಂದ್ರಗ್ರಹದ ಶುಭ ಸಂಚಾರದಿಂದ ಜನಸೇವಾ ಕೆಲಸಗಳಿಂದ ಗೌರವಾರ್ಜನೆ. ಆಸ್ತಿ ಸಂಪಾದನೆಯಲ್ಲಿ ಹಿತೈಷಿಗಳ ಸಹಕಾರ ದೊರೆಯುವುದು. ನಿಮ್ಮ ಬುದ್ಧಿ ಕುಶಲತೆ ಉತ್ತಮ ಮಟ್ಟದಾಗಿರುತ್ತದೆ. ವಕ್ರೀಭಾವದಿಂದ ಅಷ್ಟಮಕ್ಕೆ ಬಂದಿರುವ ಶನಿದೇವನಿಂದ ನ್ಯಾಯಾಲಯ ವಿಚಾರಗಳಲ್ಲಿ ಹಿನ್ನಡೆ ಉಂಟಾಗುವುದು. ಸ್ಥಿರತೆ ಇಲ್ಲದ ನಿರ್ಧಾರಗಳಿಂದ ಮಹತ್ವದ ಕೆಲಸಗಳು ಮಂದಗತಿಯಲ್ಲಿ ಸಾಗುವುದು.
– ಶ್ರೀ ಶ್ರೀನಿವಾಸಸ್ವಾಮಿ ಉಪಾಸನೆ, ಶುಭಸಂಖ್ಯೆ–6.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಚಂದ್ರಗ್ರಹದ ಶುಭ ಗೋಚರದ ಫಲವಾಗಿ ಸ್ವ ಸಾಮರ್ಥ್ಯದಿಂದ ಉನ್ನತ ಸ್ಥಾನ ಪ್ರಾಪ್ತಿಯಾಗುವುದು. ಅಧಿಕಾರಿಗಳ ಸಹಕಾರದಿಂದ ಕಾರ್ಯ ಸಾಧನೆಯಾಗುವುದು. ಶುಕ್ರನ ಸಂಚಲನವೂ ಶುಭವಿದ್ದು, ಮನೆಗೆ ನವೀನ ಐಶಾರಾಮಿ ವಸ್ತುಗಳು ಬರುವುದು. ಸ್ತ್ರೀಯರೊಬ್ಬರ ಸಹಾಯದಿಂದ ನಿಮ್ಮ ಸ್ಥಾನ–ಮಾನಗಳಲ್ಲಿ ಹೆಚ್ಚಳವಾಗುವುದು. ನ್ಯಾಯಾಲಯ ವಿಷಯಗಳು ನಿಮಗೆ ವ್ಯತಿರಿಕ್ತವಾಗಬಹುದು.
–ಶ್ರೀ ಔದುಂಬರ ವೃಕ್ಷ ಪ್ರದಕ್ಷಿಣೆ, ಶುಭಸಂಖ್ಯೆ–4.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)
ಸಪ್ತಾಹದ ಆದಿಗೆ ಸಂದರ್ಭೋಚಿತವಾದ ಮಾತಿನಿಂದ ಕಾರ್ಯಸಾಧನೆ. ಬೃಹಸ್ಪತಿಯ ಕೃಪೆಯಿಂದ ಧನ–ಧಾನ್ಯ ಲಾಭ, ಸುಖ ಭೋಜನ, ಹಲವರಿಗೆ ಪುತ್ರ ಸಂತಾನದ ಸಂತಸ. ಸಾರ್ವಜನಿಕ ಕ್ಷೇತ್ರದಲ್ಲಿ ಗೌರವ ಪ್ರಾಪ್ತಿ. ವಿದ್ಯಾ ಪ್ರಸಂಗಗಳಲ್ಲಿ ಪ್ರಶಸ್ತಿ ಪ್ರಾಪ್ತಿ, ಧಾರ್ಮಿಕ ಉತ್ಸವಗಳಲ್ಲಿ ಭಾಗಿ, ದಾನ ಧರ್ಮ ಪ್ರವೃತ್ತಿ, ಹಲವರಿಗೆ ಸಾಗರೋಲ್ಲಂಘನ ಯೋಗ, ಸಂದರ್ಶನದಲ್ಲಿ ಯಶಸ್ಸು.
– ಶ್ರೀ ಸಪ್ತಮಾತೃಕಾದೇವಿ ದರ್ಶನ, ಶುಭಸಂಖ್ಯೆ–5.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಪ್ರಯತ್ನ ಮಾಡದೇ ಕೇವಲ ಆಸೆಪಟ್ಟರೆ ಯಾವುದೂ ಸಿಗುವುದಿಲ್ಲ. 'ವಿಫಲತೆಯೇ ಸಫಲತೆಯ ಸೋಪಾನ' ಕೈಕಟ್ಟಿ ಕೂರದಿರಿ. ಸರ್ಕಾರಿ ಕೆಲಸಗಳು ನಿಮ್ಮ ಅನುಕೂಲಕ್ಕೆ ತಕ್ಕಂತೆ ಆಗುವುದು. ಉದ್ಯೋಗ ವ್ಯಾಪಾರಗಳು ಲಾಭದಾಯಕವಾಗಿ ನಡೆದರೂ ಕೆಲವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾದೀತು. ನಿಂತು ಹೋಗಿದ್ದ ಕೆಲಸಗಳು ಮರು ಚಾಲನೆಗೊಳ್ಳುವುದು. ಸತಿ–ಪತಿಯರ ವಿರಸ ತುಂಬ ಸಮಯ ಇರದು.
– ಶ್ರೀ ಸತ್ಯನಾರಾಯಣ ಸ್ವಾಮಿ ವ್ರತ ಕಥೆ ಓದಿ, ಶುಭಸಂಖ್ಯೆ–3.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಚಂದ್ರಗ್ರಹ ಕೃಪೆಯಿಂದ ನಿಮ್ಮ ಸ್ವಂತ ಕೆಲಸಗಳನ್ನು ಆಜ್ಞಾಪೂರ್ವಕವಾಗಿ ಪೂರೈಸಿಕೊಳ್ಳುವಿರಿ. ಮಖ ನಕ್ಷತ್ರದವರಿಗೆ ಉನ್ನತ ವ್ಯಕ್ತಿಗಳ ಒಡನಾಟ ಹಾಗೂ ಸರ್ಕಾರಿ ನೌಕರರಿಗೆ ಪದೋನ್ನತಿ. ಅಷ್ಟಮ ಗುರುವಿನ ಕಾರಣ ಪ್ರಯತ್ನ ಪೂರ್ವಕವಾಗಿ ಮಾಡಿದ ಕೆಲಸಗಳು ನಿಧಾನಗತಿಯಲ್ಲಿ ಸಾಗುವುದು. ಅಣ್ಣ–ತಮ್ಮಂದಿರಲ್ಲಿ ಒಡಕು ಬಾರದಂತೆ ನಡೆದುಕೊಳ್ಳಿ. ಅನ್ಯಥಾ ಮಾನಸಿಕ ಕಿರಿಕಿರಿ.
– ಶ್ರೀ ಸತ್ಯನಾರಾಯಣ ಸ್ವಾಮಿ ದರ್ಶನ, ಶುಭಸಂಖ್ಯೆ–8.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಆಗುವುದಕ್ಕೆ ಸಾಧ್ಯವೇ ಇಲ್ಲ ಎಂದು ನೀವು ಅಂದುಕೊಂಡಿರುವುದು ಒಮ್ಮೊಮ್ಮೆ ಆಗಿ ಬಿಡುತ್ತದೆ. ಹೀಗಾಗಲು ಗುರು–ಶನಿಗ್ರಹಗಳ ವಿರುದ್ಧ ಪ್ರಭಾವವೇ ಕಾರಣ. ವ್ಯಾಪಾರ ಉದ್ಯೋಗಗಳಲ್ಲಿ ಲಾಭವನ್ನು ನಿರೀಕ್ಷಿಸಬಹುದು. ಶಿಕ್ಷಣ ಕ್ಷೇತ್ರದವರಿಗೆ ಸರ್ಕಾರದಿಂದ ಗೌರವ ಪ್ರಾಪ್ತಿ, ಸ್ಥಿರಾಸ್ತಿ ಮಾರಾಟದಿಂದ ಉತ್ತಮ ಲಾಭವಾಗುವುದು. ಗುರುಜನರ ಆಶೀರ್ವಾದ ದೊರೆಯುವುದು. ವಾಹನ ಅಜಾಗರೂಕತೆಯಿಂದ ಚಲಿಸದಿರಿ.
– ಶ್ರೀ ವೆಂಕಟೇಶ್ವರನಿಗೆ ತುಳಸಿ ಸಮರ್ಪಣೆ, ಶುಭಸಂಖ್ಯೆ–5.


ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಿವಿಧ ಮೂಲಗಳಿಂದ ಹಣ ದೊರೆತು ಕಾರ್ಯಾನುಕೂಲವಾಗಲಿದೆ. 'ಸಜ್ಜನರ ಸಂಗ ಹೆಜ್ಜೇನು ಸವಿದಂತೆ' ಎಂಬ ಗಾದೆಯಂತೆ ಹಿರಿಯರ ಭೇಟಿಯಿಂದ ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ಗುರು ಕೃಪೆಯ ಫಲವಾಗಿ ಹಳೆ ಸಾಲಗಳಿಂದ ಮುಕ್ತಿ ದೊರಕೀತು. ಆರೋಗ್ಯದಲ್ಲಿಯೂ ಸುಧಾರಣೆಯನ್ನು ಕಾಣುವಿರಿ. ಕಾನೂನು ತಜ್ಞರ ಸಲಹೆಯಂತೆ ಆಸ್ತಿ ವಿಲೇವಾರಿ ಮಾಡಿ ಅನ್ಯಥಾ ನಷ್ಟವನ್ನು ಅನುಭವಿಸುವಿರಿ.
– ಶ್ರೀ ಅಶ್ವತ್ಥ ವೃಕ್ಷ ಪ್ರದಕ್ಷಿಣೆ, ಶುಭಸಂಖ್ಯೆ–9.

ಮೀನ (ದಿ.ದು.ಖ.ಝ.ಥ.ದೆ.ದೊ.ಚ.ಚಿ)
'ಶಕ್ತಿಗಿಂತ ಯುಕ್ತಿ ಮೇಲು', ಯಾರ ಮೇಲೆ ಯಾವ ತಂತ್ರ ಕೆಲಸ ಮಾಡುತ್ತದೆ ಎಂದು ತಿಳಿದು ವ್ಯವಹರಿಸುವಿರಿ. ವಕ್ರಿಯಾಗಿ ಲಾಭ ಸ್ಥಾನಕ್ಕೆ ಹೋದ ಶನಿದೇವನಿಂದ ಸಾಲಮುಕ್ತರಾಗುವ ಸಾಧ್ಯತೆ ಇದೆ. ಎಣ್ಣೆ ಕಾಳು, ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಾಗುವುದು. ಆದಾಯಕ್ಕಿಂತ ಖರ್ಚು ಜಾಸ್ತಿಯಾಗುವುದು. ಕೈ ಹಿಡಿದು ಖರ್ಚು ಮಾಡಿ. ಶೀತ–ಕಫ ಕಾಯಿಲೆ ಕಾಡಿಸಬಹುದು.
– ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ, ಶುಭಸಂಖ್ಯೆ–8.

ಮಕ್ಕಳ ಚಿತ್ರ ಕಥೆ

'ಈ ಚಿತ್ರದ ಬೆಲೆ, ಕೋಟಿ ರೂಪಾಯಿಗೂ ಅಧಿಕ...!'

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ನೀತಿ: 'ಒಬ್ಬ ಉಪಾಧ್ಯಾಯರ 45 ನಿಮಿಷಗಳ ಪಾಠ, ತಂದೆ ತಾಯಿಯರು ಕಲಿಸಿದ ಸಂಸ್ಕೃತಿ, ಸದ್ಗುರುಗಳ ಜ್ಞಾನ ಬೋಧನೆಗಳ ಹಿಂದೆಯೂ ಕೂಡ ಅವರ ಜೀವನ ಎಷ್ಟೋ ವರ್ಷಗಳ ಕಠಿಣ ಸಾಧನೆ ಇರುತ್ತದೆ. ಅವುಗಳೂ ಕೂಡ ರವಿವರ್ಮನ ಚಿತ್ರಗಳಂತೆ ಊಹೆಗೂ ನಿಲುಕದಷ್ಟು ಬೆಲೆಬಾಳುವವು...!'

ಹಾರಂಗಿ ಉದ್ಯಾನವನಕ್ಕೆ ನುಗ್ಗಿದ ಕಾಡಾನೆ

ಭಯದಿಂದ ದಿಕ್ಕಾಪಾಲಾಗಿ ಓಡಿದ ಪ್ರವಾಸಿಗರು



ಕುಶಾಲನಗರ,ಜು.23– ಹಾರಂಗಿ ಜಲಾಶಯದ ಉದ್ಯಾನವನವನ್ನು ಪ್ರವಾಸಿಗರು ವೀಕ್ಷಿಸುತ್ತಿದ್ದ ವೇಳೆ ಕಾಡಾನೆ ನುಗ್ಗಿ ಕೆಲ ಕಾಲ ಆತಂಕ ಸೃಷ್ಟಿಸಿದ ಘಟನೆ ಶನಿವಾರ ಸಂಭವಿಸಿದೆ.

ಆನೆ ನುಗ್ಗುತ್ತಿದ್ದಂತೆ ಆತಂಕಗೊಂಡ ಪ್ರವಾಸಿಗರು ದಿಕ್ಕಾಪಾಲಾಗಿ ಓಡಿದರು. ಈ ವೇಳೆ ಕೂಗಾಟ, ಚೀರಾಟ ಕೇಳಿ ಬಂದಿತಲ್ಲದೆ, ಒಂದು ರೀತಿಯ ಗೊಂದಲದ ವಾತಾವರಣ ಉಂಟಾಯಿತು. ಆನೆ ಅತ್ತಿಂದಿತ್ತ ಓಡಾಡಿತೇ ಹೊರತು ಯಾರ ಮೇಲೂ ದಾಳಿ ನಡೆಸಲಿಲ್ಲ. ಇದರಿಂದ ಭಾರೀ ಅನಾಹುತವೊಂದು ತಪ್ಪಿದ್ದು, ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರವಾಸಿಗರನ್ನು ಉದ್ಯಾನವನದ ಕೊಠಡಿಯಲ್ಲಿ ಕುಳ್ಳಿರಿಸಿ ವಿಶ್ರಾಂತಿ ಪಡೆಯಲು ಅವಕಾಶ ಮಾಡಿಕೊಟ್ಟರು.

ಹೇಗೆ ಬಂದಿತು. ಎಲ್ಲಿಂದ ಬಂದಿತು ಎಂದು ತಿಳಿದು ಬಂದಿಲ್ಲವಾದರೂ ಆನೆಕಟ್ಟೆಗೆ ಹೊಂದಿಕೊಂಡಂತಿರುವ ಅತ್ತೂರು ಮೀಸಲು ಅರಣ್ಯದಿಂದ ಬಂದಿರಬಹುದು ಎಂದು ಶಂಕಿಸಲಾಗಿದೆ. ಹಾರಂಗಿ ಜಲಾಶಯ ತುಂಬಿ ಹರಿಯುತ್ತಿದ್ದು, ಅದರ ಸೊಬಗನ್ನು ವೀಕ್ಷಿಸಲು ಪ್ರವಾಸಿಗರು ಬಂದಿದ್ದರಲ್ಲದೆ, ಈ ವೇಳೆ ಪಕ್ಕದಲ್ಲೇ ಇರುವ ಹಾರಂಗಿ ಉದ್ಯಾನವನ ವೀಕ್ಷಣೆಗೆ ಮುಂದಾಗಿದ್ದಾಗ ಈ ಘಟನೆ ನಡೆಯಿತು. ಇಂದು 4ನೇ ಶನಿವಾರವಾದ್ದರಿಂದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು.

ಆನೆಕಟ್ಟೆ ಆವರಣದಲ್ಲಿನ ಗೇಟ್ ಒದ್ದು, ಹೊರ ಬಂದ ಕಾಡಾನೆ ಗ್ರಾಮದೊಳಗಿನಿಂದ ಹಾದು ಸಮೀಪದ ಅರಣ್ಯ ಪ್ರದೇಶದತ್ತ ತೆರಳಿದೆ. ಈ ಕಾಡಾನೆ ಸಕಲೇಶಪುರ ವ್ಯಾಪ್ತಿಯಲ್ಲಿ ದಾಂಧಲೆ ನಡೆಸುತ್ತಿದ್ದ ಕಾರಣ 1 ವರ್ಷದ ಹಿಂದೆ ಹಿಡಿದು ರೇಡಿಯೋ ಕಾಲರ್ ಅಳವಡಿಸಿ ಬಿಡಲಾಗಿತ್ತು ಎಂದು ತಿಳಿದುಬಂದಿದೆ.


ಗಾಂಜಾ ಬೆಳೆ ಸಹಿತ ಆರೋಪಿ ಬಂಧನ

ಶ್ರೀಮಂಗಲ, ಜು.23– ಶ್ರೀಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯ ಕೋಣಗೇರಿ ಗ್ರಾಮದ ಎಂ.ಪೊನ್ನಣ್ಣ ಅವರ ಕಾಫಿ ತೋಟದಲ್ಲಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆದಿದ್ದು, ಆರೋಪಿ ಪೊನ್ನಣ್ಣ ಅವರನ್ನು ಪೊಲೀಸರು ಬಂಧಿಸಿ ಗಾಂಜಾ ಗಿಡ ವಶಪಡಿಸಿಕೊಂಡಿದ್ದಾರೆ. ಪೊಲೀಸ್ ಅಧೀಕ್ಷಕ ಕ್ಯಾಮಲಚೀರ ಎ.ಅಯ್ಯಪ್ಪ ನಿರ್ದೇಶನದಂತೆ ವಿರಾಜಪೇಟೆ ಪೊಲೀಸ್ ಉಪ ಅಧೀಕ್ಷಕ ನಿರಂಜನ್ ರಾಜೇ ಅರಸ್ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಯಿತು.

ಭಾರೀ ಜಲಸ್ಫೋಟಕ್ಕೆ ಕುಸಿದ ಬೆಟ್ಟ

ಮತ್ತಷ್ಟು ಭೂ ಕುಸಿತ ಸಾಧ್ಯತೆ, ಆತಂಕದಲ್ಲಿ ನಿವಾಸಿಗಳು

ಸ್ಥಳಕ್ಕೆ ಶಾಸಕ ಕೆ.ಜಿ. ಬೋಪಯ್ಯ, ಕಂದಾಯ ಅಧಿಕಾರಿಗಳ ಭೇಟಿ





ಮಡಿಕೇರಿ, ಜು.23– ನಿಶಾನಿ ಬೆಟ್ಟದಲ್ಲಿ ಭಾರೀ ಬಿರುಕುಗಳು ಮೂಡಿ ಕುಸಿಯುವ ಆತಂಕ ಕಾಡುತ್ತಿರುವ ನಡುವೆಯೇ ಮದೆನಾಡು–ಜೋಡುಪಾಲ ನಡುವಿನ ಕೊಪ್ಪಟ್ಟ ಕಿರಿಕಿಲ್ ಎಂಬ ಪ್ರದೇಶದಲ್ಲಿರುವ ಸೀಮೆ ಹುಲ್ಲು ಕಜೆ ಬೆಟ್ಟದಲ್ಲಿ ಭಾರೀ ಜಲಸ್ಫೋಟ ಸಂಭವಿಸಿ ಬೆಟ್ಟ ಕುಸಿದಿರುವ ಘಟನೆ ನಡೆದಿದೆ.

ಜೋಡುಪಾಲದಿಂದ 6 ಕಿಮೀ ಒಳಗಿನ ಬೆಟ್ಟ ಪ್ರದೇಶವಾದ ಕೊಪ್ಪಟ್ಟ ಕಿರಿಕಿಲ್ ಎಂಬಲ್ಲಿ ಶುಕ್ರವಾರ ಮುಂಜಾನೆ 2 ಗಂಟೆ 30 ನಿಮಿಷದ ವೇಳೆ ಭಾರೀ ಶಬ್ದದೊಂದಿಗೆ ಜಲಸ್ಫೋಟವಾಗಿ ಬೆಟ್ಟ ಕುಸಿದು ಬಿದ್ದಿದೆ. ಕಣಿವೆ ಮಾದರಿಯಲ್ಲಿ ಭೂ ಕುಸಿದಿದ್ದು, ಅಂದಾಜು 4 ಕಿ.ಮೀ.ವರೆಗೆ ಲೋಡ್‌ಗಟ್ಟಲೆ ಮಣ್ಣು ಕೊಚ್ಚಿ ಹೋಗಿದೆ. ಜನ ವಸತಿ ಇಲ್ಲದ ಕಾರಣ ಯಾವುದೇ ಹಾನಿ ಸಂಭವಿಸಿಲ್ಲ.

ಜಲಸ್ಫೋಟವಾಗಿ ಸುಮಾರು 1 ಎಕರೆ ಬೆಟ್ಟ ಕೆಳಭಾಗದಲ್ಲಿ ಹರಿಯುತ್ತಿರುವ ನದಿಗೆ ಬಿದ್ದಿರುವ ಕಾರಣ ಮಣ್ಣು ನೀರು ಮಿಶ್ರಗೊಂಡು ಕೆಸರಿನ ರಾಡಿಯಾಗಿ ಹರಿಯುತ್ತಿದೆ. ನದಿ ನೀರು ಕೆಸರಿನ ರಾಡಿಯಾಗಿ ಹರಿಯುತ್ತಿರುವ ಕಾರಣ ಭೂ ಕುಸಿತ ಘಟನೆ ಬೆಳಕಿಗೆ ಬಂದಿದೆ. ಮಾಹಿತಿ ತಿಳಿದು ಮದೆನಾಡು ಗ್ರಾಮ ಲೆಕ್ಕಿಗ ರಮೇಶ್ ಎಂಬವರು ಸ್ಥಳೀಯರ ಸಹಾಯದಿಂದ ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಬೆಟ್ಟ ಕುಸಿತವಾಗಿರುವ ಪ್ರದೇಶದಲ್ಲಿ ದಟ್ಟ ಮಂಜು ಮಿಶ್ರವಾಗಿ ಸಾಧಾರಣ ಮಳೆ ಸುರಿಯುತ್ತಿರುವ ಕಾರಣ ಭೂಮಿ ಬಿರುಕು ಬಿಟ್ಟ ಸ್ಥಳಗಳಿಗೆ ತೆರಳಲು ಸಾಧ್ಯವಾಗಿಲ್ಲ.

ಮತ್ತಷ್ಟು ಭೂಕುಸಿತ ಸಾಧ್ಯತೆ: ಜೋಡುಪಾಲ 2018ರ ಪ್ರಾಕೃತಿಕ ವಿಕೋಪಕ್ಕೆ ಸಾಕ್ಷಿಯಾದ ಗ್ರಾಮವಾಗಿದ್ದು, ಅಂದು ಜೋಡುಪಾಲ ವ್ಯಾಪ್ತಿಯ 'ಬಾರಿಯಂಡ' ಎಂಬ ಬೆಟ್ಟ ಪ್ರದೇಶದಲ್ಲಿ ಜಲ ಸ್ಫೋಟದೊಂದಿಗೆ ಭಾರೀ ಭೂ ಕುಸಿತವಾಗಿತ್ತು. ಆ ಸಂದರ್ಭ ಅಂದಾಜು 5 ಎಕರೆ ಬೆಟ್ಟ ಕೊಚ್ಚಿ ಬಂದು ಜೋಡುಪಾಲ ಗ್ರಾಮವನ್ನೇ ತ್ರಿಶಂಕು ಸ್ಥಿತಿಗೆ ತಳ್ಳಿತ್ತು. ಮಾತ್ರವಲ್ಲದೇ ಹತ್ತಾರು ಮನೆಗಳು, ಕಾಫಿ, ಅಡಿಕೆ, ಕೋಕೋ ತೋಟಗಳು ಸಂಪೂರ್ಣ ನಾಶವಾಗಿತ್ತು.

ಇದೀಗ 2018ರಲ್ಲಿ ಭೂ ಕುಸಿತ ಸಂಭವಿಸಿದ ಪ್ರದೇಶದ ಪಕ್ಕದಲ್ಲೇ ಜಲಸ್ಫೋಟ ಸಂಭವಿಸಿರುವುದು ಆತಂಕ ಹುಟ್ಟಿಸಿದೆ. ಸ್ಥಳದಲ್ಲಿ ಬಿರುಕುಗಳು ಕೂಡ ಮೂಡಿದ್ದು, ಮಳೆ ಮುಂದುವರೆದಲ್ಲಿ ಮತ್ತಷ್ಟು ಭೂ ಕುಸಿಯುವ ಎಲ್ಲಾ ಸಾಧ್ಯತೆಗಳಿವೆ. 2018ರ ಭೂ ಕುಸಿತದ ಬಳಿಕ 5 ಎಕರೆ ಬೆಟ್ಟ ಪ್ರದೇಶ ಮತ್ತಷ್ಟು ಕೆಳಭಾಗಕ್ಕೆ ತಗ್ಗಲ್ಪಟ್ಟಿದ್ದು, ಭೂ ಕುಸಿತ ಘಟಿಸುವ ಸಾಧ್ಯತೆ ಇದೆ. ಆ ಬೆಟ್ಟ ಕುಸಿತದಲ್ಲಿ ಮದೆನಾಡು–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಮೇಲೆ ಭಾರೀ ಪ್ರಮಾಣದಲ್ಲಿ ಮಣ್ಣಿನ ರಾಶಿಯೇ ಬೀಳಲಿದೆ ಎಂದು ಅಲ್ಲಿನ ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ. ಘಟನಾ ಸ್ಥಳದ ಸುತ್ತ ಮುತ್ತಲ ಪ್ರದೇಶದಲ್ಲಿ ಜನವಸತಿ ಇಲ್ಲದ ಹಿನ್ನೆಲೆಯಲ್ಲಿ ಪ್ರಾಣಾಪಾಯದ ಭೀತಿ ಇಲ್ಲ ಎಂದು ಗ್ರಾಮಸ್ಥರು ಹೇಳಿದ್ದಾರೆ.

ಸ್ಥಳಕ್ಕೆ ಶಾಸಕರ ಭೇಟಿ: ಮದೆನಾಡು ಕೊಪ್ಪಟ್ಟ ಗ್ರಾಮಕ್ಕೆ ಶಾಸಕ ಕೆ.ಜಿ.ಬೋಪಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಂದಾಯ ಇಲಾಖೆ ಅಧಿಕಾರಿಗಳು ಘಟನೆಯ ಕುರಿತು ಶಾಸಕರಿಗೆ ವಿವರಿಸಿದರು. ಭೂ ಕುಸಿತ ಮತ್ತು ಸಂಭಾವ್ಯ ಅಪಾಯ ಎದುರಾಗುವ ಕುರಿತು ಶಾಸಕರು ಮಾಹಿತಿ ಪಡೆದರು. ಭೂ ಕುಸಿತವಾಗುವ ಸಾಧ್ಯತೆ ಇರುವ ಪ್ರದೇಶದಲ್ಲಿ ಜನ ವಸತಿ ಇಲ್ಲದಿರುವ ಕುರಿತು ಅಧಿಕಾರಿಗಳು ವಿವರಿಸಿದರು. ಅಗತ್ಯವಿದ್ದಲ್ಲಿ ಜನರನ್ನು ಮುಂಜಾಗೃತಾ ಕ್ರಮವಾಗಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಬಳಿಕ ಮಳೆಯಿಂದ ಹಾನಿಗೊಳಗಾದ ಮದೆನಾಡು ನಿವಾಸಿ ಮಣಿ ಅವರ ಮನೆಗೆ ತೆರಳಿದ ಶಾಸಕ ಬೋಪಯ್ಯ, ಹಾನಿಯ ಕುರಿತು ಪರಿಶೀಲನೆ ನಡೆಸಿದರು.

ಕಗ್ಗೋಡ್ಲುವಿನಲ್ಲಿ ಅದ್ಧೂರಿ ಕೆಸರು ಗದ್ದೆ ಕ್ರೀಡಾಕೂಟ



ಮಡಿಕೇರಿ,ಜು.23– ಕಳೆದ 3 ವರ್ಷಗಳಿಂದ ಪ್ರಾಕೃತಿಕ ವಿಕೋಪ, ಕೊರೊನಾ ಕಾರಣಗಳಿಂದ ಸ್ಥಗಿತಗೊಂಡಿದ್ದ 30ನೇ ವರ್ಷದ ರಾಜ್ಯ ಮಟ್ಟದ ಕೆಸರು ಗದ್ದೆ ಕ್ರೀಡಾಕೂಟ ಕಗ್ಗೋಡ್ಲು ಗ್ರಾಮದಲ್ಲಿ ಅದ್ಧೂರಿಯಾಗಿ ನಡೆಯಿತು. ಶಾಸಕ ಅಪ್ಪಚ್ಚು ರಂಜನ್ ವಾಲಿಬಾಲ್ ಪಂದ್ಯಾವಳಿಗೆ ವಿದ್ಯುತ್ ಚಾಲನೆ ನೀಡುವ ಮೂಲಕ ಕೆಸರು ಗದ್ದೆ ಕ್ರೀಡಾಕೂಟವನ್ನು ಉದ್ಘಾಟಿಸಿದರು.

ಸಂಸ್ಕೃತಿಯ ಪ್ರತೀಕ: ಕೊಡಗು ಜಿಲ್ಲೆ ಕೃಷಿ ಪ್ರಧಾನವಾದ ಜಿಲ್ಲೆಯಾಗಿದ್ದು, ಪೂರ್ವಿಕರ ಕಾಲದಿಂದಲೇ ಭತ್ತದ ನಾಟಿ ಕಾರ್ಯ ಮುಕ್ತಾಯದ ಸಂದರ್ಭ ಕೆಸರು ಗದ್ದೆ ಕ್ರೀಡಾಕೂಟ ಆಯೋಜಿಸಿಕೊಂಡು ಬರಲಾಗುತ್ತಿದೆ. ಇದು ಕೊಡಗಿನ ಕೃಷಿ ಮತ್ತು ಸಂಸ್ಕೃತಿಯ ಪ್ರತೀಕವೂ ಆಗಿದೆ. ಇಂತಹ ಸಂಸ್ಕೃತಿಯನ್ನು ಯುವ ಪೀಳಿಗೆ ಉಳಿಸಿ ಬೆಳೆಸಬೇಕೆಂದು ಶಾಸಕರು ಕರೆ ನೀಡಿದರು.

ಇಂದು ದೊಡ್ಡ ದೊಡ್ಡ ಕಂಪೆನಿಗಳು 'ಮಡ್ ಥೆರಪಿ' ಹೆಸರಲ್ಲಿ ಚಿಕಿತ್ಸೆ ನೀಡುತ್ತಿವೆ. ಆದರೆ ಕೊಡಗಿನ ಕೃಷಿಕರು ಅನಾದಿ ಕಾಲದಲ್ಲೇ 'ಮಡ್ ಥೆರಪಿ' ಕಂಡು ಹಿಡಿದಿದ್ದಾರೆ. ಕೆಸರಿನ ಗದ್ದೆಯಲ್ಲಿ ಓಟ, ಹಗ್ಗಜಗ್ಗಾಟ ಸೇರಿದಂತೆ ವಿವಿಧ ಗ್ರಾಮೀಣ ಕ್ರೀಡಾ ಕೂಟ ಆಯೋಜಿಸಿದರೆ ದೈಹಿಕ ಆರೋಗ್ಯಕ್ಕೂ ಸಹಕಾರಿಯಾಗುತ್ತದೆ ಎಂದು ಹೇಳಿದರು.

ಬಳಿಕ ವಾಲಿಬಾಲ್, ಹಗ್ಗಜಗ್ಗಾಟ, ಥ್ರೋ ಬಾಲ್ ಪಂದ್ಯಾವಳಿಗಳು ನಡೆದವು. ಸಾರ್ವಜನಿಕ ಪುರುಷ, ಮಹಿಳೆಯರು, ಶಾಲಾ ಕಾಲೇಜುಗಳ ಮಕ್ಕಳು, ವಿವಿಧ ಕ್ರೀಡಾ ಕೂಟಗಳಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಮಡಿಕೇರಿ, ಸೋಮವಾರಪೇಟೆ, ಕೊಡ್ಲಿಪೇಟೆ, ಪೊನ್ನಂಪೇಟೆ, ವಿರಾಜಪೇಟೆ ಸೇರಿದಂತೆ ಹಾಸನ, ಸುಳ್ಯ ತಾಲೂಕುಗಳಿಂದ ಕ್ರೀಡಾಪಟುಗಳು ಮತ್ತು ಕ್ರೀಡಾ ತಂಡಗಳು ರಾಜ್ಯ ಮಟ್ಟದ ಕೆಸರು ಗದ್ದೆ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದವು.

ಮಕ್ಕಳ ಸಂಭ್ರಮ: ಸದಾ ಕಾಲ ಶಾಲಾ ಸಮವಸ್ತ್ರದಲ್ಲಿ ಶಾಲಾ ಮೈದಾನಗಳಲ್ಲಿ ಆಟವಾಡುತ್ತಿದ್ದ ಮಕ್ಕಳು ಕೆಸರು ಗದ್ದೆಯಲ್ಲಿ ಮಿಂದೆದ್ದು, ಸಂಭ್ರಮಿಸಿದರು. ಕೆಸರಿನ ಗದ್ದೆಯಲ್ಲಿ ಓಡಿ ಅನುಭವ ಇಲ್ಲದಿದ್ದರೂ ಮುಕ್ತ ಓಟ ಸ್ಪರ್ಧೆಯಲ್ಲಿ ಪಾಲ್ಗೊಂಡು ಗುರಿ ಮುಟ್ಟುವ ತವಕದಲ್ಲಿ ಗದ್ದೆ ಮಧ್ಯೆದಲ್ಲೇ ಹಲವಾರು ಮಕ್ಕಳು ಮುಗ್ಗರಿಸಿ ಬಿದ್ದರೆ, ಮತ್ತೆ ಕೆಲವು ಮಕ್ಕಳು ನಿಗದಿತ ಗುರಿ ಸಾಧಿಸಿದರು. ಕೆಸರಿನ ಗದ್ದೆಯಲ್ಲಿ ಬಿದ್ದೆದ್ದು, ಮಕ್ಕಳು ಸಂಭ್ರಮಿಸುತ್ತಿದ್ದರೆ, ನೋಡುಗರು ಚಪ್ಪಾಳೆ, ಸೀಟಿ ಹೊಡೆಯುವ ಮೂಲಕ ಮಕ್ಕಳನ್ನು ಪ್ರೋತ್ಸಾಹಿಸಿದರು. ಮಕ್ಕಳ ಓಟದ ಸ್ಪರ್ಧೆ ನೋಡುಗರಿಗೆ ಮುದ ನೀಡಿತು. ವಿವಿಧ ವಯೋಮಾನದ ವಿಭಾಗದಲ್ಲಿ ಓಟದ ಸ್ಪರ್ಧೆಗಳನ್ನು ವ್ಯವಸ್ಥಿತವಾಗಿ ಆಯೋಜಿಸಲಾಗಿತ್ತು.

ಮಹಿಳಾ ಮೋರ್ಚಾ ಮನಸ್ಸು ಮಾಡಿದರೆ ಜಿಲ್ಲೆ ಬಿಜೆಪಿ ಭದ್ರಕೋಟೆ

ಶಾಸಕ ಎನ್.ಮಹೇಶ್ ವಿಶ್ವಾಸ



ಚಾಮರಾಜನಗರ, ಜು.23–ಬಿಜೆಪಿ ಮಹಿಳಾ ಮೋರ್ಚಾದ ಕಾರ್ಯಕರ್ತರು ಮನಸ್ಸು ಮಾಡಿ ಪಕ್ಷ ಸಂಘಟಿಸಿದರೆ ಜಿಲ್ಲೆಯ ನಾಲ್ಕು ವಿಧಾನ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಲಿದ್ದು, ಜಿಲ್ಲೆ ಬಿಜೆಪಿಯ ಭದ್ರಕೋಟೆಯಾಗಲಿದೆ ಎಂದು ಮಾಜಿ ಸಚಿವರೂ ಆದ ಕೊಳ್ಳೇಗಾಲ ಶಾಸಕ ಎನ್.ಮಹೇಶ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಖಾಸಗಿ ಕಲ್ಯಾಣ ಮಂಟಪದಲ್ಲಿ ನಡೆದ ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾ ಪ್ರಶಿಕ್ಷಣ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಬಿಜೆಪಿ ಮೊದಲನೆಯ ಘೋಷಣೆ ಭಾರತ್ ಮಾತಾಕಿ ಜೈ, ಭಾರತಮಾತೆಯ ಒಂದೊಂದು ರಕ್ತದ ಕಣಕಣಗಳು ಪ್ರತಿಯೊಬ್ಬ ಮಹಿಳೆಯಾಗಿದ್ದು, ಮಹಿಳೆಯ ರಕ್ತದ ಕಣಕಣಗಳಲ್ಲಿ ಭಾರತ ಮಾತೆ ಇದ್ದಾರೆ. ಪಕ್ಷದ ಎಲ್ಲಾ ಮಹಿಳಾ ಸದಸ್ಯರು ಮನಸ್ಸು ಮಾಡಿ ಮಹಿಳಾ ಮತದಾರರನ್ನು ಜಾಗೃತಿಗೊಳಿಸಿದರೆ ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳಲ್ಲೂ ಬಿಜೆಪಿ ಗೆಲ್ಲುತ್ತದೆ. ರಾಜ್ಯದಲ್ಲಿ ಸರ್ಕಾರ ರಚಿಸಲು ಬೇಕಿರುವ 113 ಸಂಖ್ಯೆಯನ್ನು ದಾಟುವುದು ನಿಶ್ಚಿತ. ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲಲು ಕಂಕಣ ಬದ್ಧರಾಗಿ ದುಡಿಯೋಣ. 2023ಕ್ಕೆ ರಾಜ್ಯದಲ್ಲಿ ಮತ್ತೆ ಬಿಜೆಪಿ ನೇತೃತ್ವದ ಸರ್ಕಾರವನ್ನು ಅಧಿಕಾರಕ್ಕೇರಿಸೋಣ. ಆ ನಿಟ್ಟಿನಲ್ಲಿ ಬಿಜೆಪಿ ಮಹಿಳಾ ಜಿಲ್ಲಾ ಪ್ರಶಿಕ್ಷಣ ವರ್ಗ ಯಶಸ್ವಿಯಾಗಲಿ ಎಂದು ಆಶಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಆರ್.ಸುಂದರ್ ಪ್ರಾಸ್ತಾವಿಕವಾಗಿ ಮಾತನಾಡಿ, ಬಿಜೆಪಿ ಸಿದ್ಧಾಂತವನ್ನಿಟ್ಟುಕೊಂಡು ತಳಮಟ್ಟದಿಂದ ಪಕ್ಷ ಸಂಘಟನೆ ಮಾಡುತ್ತಿದೆ. ಪ್ರಶಿಕ್ಷಣದ ಮೂಲಕ ಪಕ್ಷದ ತತ್ವ–ಸಿದ್ಧಾಂತಗಳನ್ನು ಕಾರ್ಯಕರ್ತರಲ್ಲಿ ಜಾಗೃತಗೊಳಿಸುತ್ತಿದೆ. ಎಲ್ಲರೂ ಪಕ್ಷದ ವಿಚಾರಧಾರೆಗಳನ್ನು ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಿಬಿರದಲ್ಲಿ ಭಾಗವಹಿಸಿರುವ ಮಹಿಳಾ ಮೋರ್ಚಾದ ಪದಾಧಿಕಾರಿಗಳು, ಕಾರ್ಯಕರ್ತರು ದೇಶಸೇವೆಯ ಭಾವನೆಯನಿಟ್ಟುಕೊಂಡು ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಜನತೆ ತಿಳಿಸಿಕೊಡುವ ಮೂಲಕ ಮಹಿಳಾ ಮೋರ್ಚಾವನ್ನು ಬಲಿಷ್ಠಗೊಳಿಸಲು ಶ್ರಮಿಸಬೇಕಿದೆ ಎಂದರು.

ಜಿಲ್ಲಾ ಮಹಿಳಾ ಮೋರ್ಚಾದ ಅಧ್ಯಕ್ಷೆ ಸುಧಾ ಮಲ್ಲಣ ಮಾತನಾಡಿ, ಮೌಲ್ಯಾಧಾರಿತ ರಾಜಕಾರಣದಲ್ಲಿ ಬಿಜೆಪಿ ಯಶಸ್ಸು ಕಂಡಿದ್ದು, ಜಗತ್ತಿನ ಅತೀ ದೊಡ್ಡ ಪಕ್ಷವಾಗಿ ಬೆಳೆದಿದೆ. ಸರ್ವವ್ಯಾಪಿ, ಸರ್ವಸ್ಪರ್ಶಿ ಸಮಾಜದ ಮತಗಳನ್ನು ಪಡೆದುಕೊಂಡಿರುವ ಬಿಜೆಪಿ ಇಂದು ದೇಶ, ರಾಜ್ಯದಲ್ಲಿ ಅಧಿಕಾರ ಹಿಡಿದಿದೆ. ಆಗಾಗಿ ಪಕ್ಷದ ಧ್ಯೇಯೋದ್ದೇಶಗಳು, ಸರ್ಕಾರ ಯೋಜನೆಗಳನ್ನು ಜನಸಾಮಾನ್ಯರಲ್ಲಿ ತಿಳಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕಿ ಪರಿಮಳಾ ನಾಗಪ್ಪ, ಚೂಡಾ ಅಧ್ಯಕ್ಷ ಕುಲಗಾಣ ಶಾಂತಮೂರ್ತಿ, ನಗರಸಭಾ ಅಧ್ಯಕ್ಷೆ ಆಶಾ ನಟರಾಜು, ಹಾಸನ ಜಿಲ್ಲಾ ಪ್ರಭಾರಿ ನಿಜಗುಣ ರಾಜು, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನಾಗಶ್ರೀ, ನಾರಾಯಣ್ ಪ್ರಸಾದ್, ಉಪಾಧ್ಯಕ್ಷ ದತ್ತೇಶ್ ಕುಮಾರ್, ಮಹಿಳಾ ಮೋರ್ಚಾದ ರಾಜ್ಯ ಪ್ರಭಾರಿ ಭಾರತಿ ಪಶುಪತಿ, ಪ್ರಧಾನ ಕಾರ್ಯದರ್ಶಿ ಕಮಲಮ್ಮ, ಜಿಲ್ಲಾ ಉಪಾಧ್ಯಕ್ಷೆ ಮಂಗಳಮ್ಮ, ಸಂಚಾಲಕಿ ಸರೋಜ ಸಿದ್ದರಾಜು, ನಗರಸಭಾ ಸದಸ್ಯೆ ಮಮತಾ ಬಾಲಸುಬ್ರಹ್ಮಣ್ಯ ಇತರರಿದ್ದರು.

5.5 ಲಕ್ಷ ರೂ. ಮೌಲ್ಯದ ಚಿನ್ನಾಭರಣ ದೋಚಿದ್ದ ಕಳ್ಳನ ಸೆರೆ



ಕೊಳ್ಳೇಗಾಲ, ಜು.23–ತಾಲೂಕಿನ ಯಡಕುರಿಯ ಗ್ರಾಮದ ಮನೆಯೊಂದರಲ್ಲಿ 5.5 ಲಕ್ಷ ರೂ. ಮೌಲ್ಯದ 108 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿದ್ದ ಆರೋಪಿಯನ್ನು 24 ಗಂಟೆಯಲ್ಲೇ ಬಂಧಿಸುವಲ್ಲಿ ಗ್ರಾಮಾಂತರ ಠಾಣಾ ಪೊಲೀಸರು ಯಶಸ್ವಿಯಾಗಿದ್ದಾರೆ.

ಯಡಕುರಿಯ ಗ್ರಾಮದ ಮಂಜುನಾಥ್ ಅಲಿಯಾಸ್ ಮಂಜು (ಶಿಂಡ–29) ಬಂಧಿತ ಆರೋಪಿ. ಈತ ಜು.22ರಂದು ಆದೇ ಗ್ರಾಮದ ಬಸವರಾಜಪ್ಪ ಅವರ ಮನೆಯಲ್ಲಿ ಯಾರು ಇಲ್ಲದ ವೇಳೆ ಮೇಲ್ಛಾವಣಿಯ ಮೇಸ್ ತಳ್ಳಿ, ಒಳಗಿಳಿದು ಮನೆಯಲ್ಲಿಟ್ಟಿದ್ದ 108 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿದ್ದ. ಈ ಸಂಬಂಧ ಮನೆ ಮಾಲೀಕರಾದ ರಾಜಮ್ಮ ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಿದ್ದರು.

ಡಿವೈಎಸ್ಪಿ ನಾಗರಾಜು, ವೃತ್ತ ನಿರೀಕ್ಷಕ ಶಿವರಾಜ ಮುದೋಳ ಮಾರ್ಗದರ್ಶನದಲ್ಲಿ ಪ್ರಕರಣ ಭೇದಿಸಲು ಅಪರಾಧ ವಿಭಾಗದ ವೀರಣ್ಣಾರಾಧ್ಯ, ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ್ ಅವರ ತಂಡ ರಚಿಸಲಾಗಿತ್ತು. ಜು.23ರಂದು ಬೆಳಗ್ಗೆ ಗಸ್ತಿನಲ್ಲಿದ್ದ ತನಿಖಾ ತಂಡ ಅನುಮಾನದ ಮೇರೆಗೆ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ತಪ್ಪೊಪ್ಪಿಕೊಂಡಿದ್ದಾನೆ. ತಕ್ಷಣ ಆರೋಪಿಯನ್ನು ಬಂಧಿಸಿ ಚಿನ್ನಾಭರಣ ವಶಕ್ಕೆ ಪಡೆದಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿ ಗುರುಸ್ವಾಮಿ, ಅನಿಲ್, ರವಿ, ಬಸವರಾಜು ಭಾಗವಹಿಸಿದ್ದರು.

ಜಮೀನಿಗೆ ನುಗ್ಗಿದ ನೀರು; ಬೆಳೆ ನಷ್ಟದ ಆತಂಕದಲ್ಲಿ ರೈತರು



ಚಾಮರಾಜನಗರ,ಜು.23–ಸತತ ಮಳೆ ಹಾಗೂ ಸುವರ್ಣಾವತಿ ಜಲಾಶಯದ ಹೆಚ್ಚುವರಿ ನೀರಿನಿಂದ ತಾಲೂಕಿನ ದೊಡ್ಡಮೋಳೆ, ಡೊಳ್ಳಿಪುರ, ಕಾನಿಕರೆ ಗ್ರಾಮಗಳ ಜಮೀನುಗಳು ಜಲಾವೃತವಾಗಿವೆ.

15 ದಿನಗಳಿಂದ ಸುರಿದ ನಿರಂತರ ಮಳೆ ಜೊತೆಗೆ ಸುವರ್ಣಾವತಿ ಜಲಾಶಯದಲ್ಲಿ ಹೆಚ್ಚುವರಿ ಸಂಗ್ರಹವಾದ ನೀರನ್ನು ಹೊರಬಿಟ್ಟ ಪರಿಣಾಮ ಈ ಭಾಗದ ಜಮೀನುಗಳಿಗೆ ನೀರು ನುಗ್ಗಿದೆ. ಜಮೀನುಗಳಲ್ಲಿ ಬೆಳೆದಿದ್ದ ಬಾಳೆ, ಅಡಿಕೆ ಸಸಿ, ಟೊಮೆಟೋ, ಕೋಸು ಜಲಾವೃತವಾಗಿದ್ದು, ಬೆಳೆ ಕೊಳೆಯುವ ಹಂತದಲ್ಲಿದೆ. ಸಾಲ–ಸೋಲ ಮಾಡಿ ಬೆಳೆದ ಬೆಳೆ ನೀರು ಪಾಲಾಗಿದ್ದು, ಸಂಬಂಧಪಟ್ಟ ಇಲಾಖೆಯವರು ಸ್ಥಳಕ್ಕೆ ಆಗಮಿಸಿ ನಷ್ಟದ ಅಂದಾಜು ಪರಿಶೀಲಿಸಿ ಪರಿಹಾರ ಕೊಡಿಸಬೇಕು ಹಾಗೂ ಜಲಾಶಯದಿಂದ ಹೊರಬಿಡಲಾಗುವ ಹೆಚ್ಚುವರಿ ನೀರು ರೈತರ ಜಮೀನುಗಳಿಗೆ ನುಗ್ಗದಂತೆ ಜಿಲ್ಲಾಡಳಿತ ಶಾಶ್ವತ ಪರಿಹಾರ ಕೈಗೊಳ್ಳಬೇಕು ಎಂದು ದೊಡ್ಡಮೋಳೆ ಗ್ರಾಮದ ರೈತ ದೊರೆಸ್ವಾಮಿ ಆಗ್ರಹಿಸಿದ್ದಾರೆ.

ಚಾಮುಂಡೇಶ್ವರಿ ಅದ್ಧೂರಿ ಉತ್ಸವ



ಗುಂಡ್ಲುಪೇಟೆ, ಜು.23–ಪಟ್ಟಣದಲ್ಲಿರುವ ಶ್ರೀ ಭಾವಸಾರ ಕ್ಷತ್ರೀಂಯ ಮಂಡಳಿಯಿಂದ ಆಷಾಢದ ಕೊನೆ ಶುಕ್ರವಾರದ ಅಂಗವಾಗಿ ಆಯೋಜಿಸಿದ್ದ ಶ್ರೀ ಚಾಮುಂಡೇಶ್ವರಿ ದೇವಿಯ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು.

ಪಟ್ಟಣದ ಕೆಆರ್‌ಸಿ ರಸ್ತೆಯಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಕಡೇ ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ಚಾಮುಂಡಿ ಮಾತೆಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಬಳಿಕ ಅಲಂಕೃತ ಬೆಳ್ಳಿ ರಥದಲ್ಲಿ ದೇವಿಯ ವಿಗ್ರಹವನಿಟ್ಟು, ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು.

ನಂತರ ದೇವಾಲಯದಲ್ಲಿ ವಿಶೇಷ ಪೂಜೆ ಪ್ರಾರ್ಥನೆ ಹಾಗೂ ನೈವೇದ್ಯ ಅರ್ಪಣೆ ಮಾಡಲಾಯಿತು. ಪಟ್ಟಣದ ವಿವಿಧ ಬಡಾವಣೆಯ ಭಕ್ತರು ದೇವಿಯ ದರ್ಶನ ಪಡೆದರು. ಈ ವೇಳೆ ಭಾವಸಾರ ಕ್ಷತ್ರೀಂಯ ಮಂಡಳಿಯ ಪದಾಧಿಕಾರಿಗಳು, ಸಮುದಾಯದ ಹಿರಿಯರು, ಯುವಕರು ಭಾಗವಹಿಸಿದ್ದರು.

ಆಷಾಢ ಶುಕ್ರವಾರದ ಪೂಜೆ



ಯಳಂದೂರು, ಜು.23–ಪಟ್ಟಣದ ಗೌರೇಶ್ವರ ಪಾರ್ವತಾಂಬೆ ಹಾಗೂ ತಾಲೂಕಿನ ಮದ್ದೂರಿನ ಸುವರ್ಣಾವತಿ ನದಿ ದಡದಲ್ಲಿರುವ ಮಹಾಲಕ್ಷ್ಮಿ ದೇಗುಲದಲ್ಲಿ ಆಷಾಢ ಮಾಸದ ಕೊನೆಯ ಶುಕ್ರವಾರ ವಿಶೇಷ ಪೂಜೆ ಸಲ್ಲಿಸಲಾಯಿತು.

ಅರ್ಚಕ ಚಂದ್ರಮೌಳಿ ದೀಕ್ಷೀತ್ ನೇತೃತ್ವದಲ್ಲಿ ಬೆಳಗ್ಗೆಯಿಂದಲೇ ಪಟ್ಟಣದ ಗೌರೇಶ್ವರ ದೇಗುಲದಲ್ಲಿ ವಿಭೂತಿ ಅಲಂಕಾರ ಹಾಗೂ ಪಾರ್ವತಾಂಬೆಗೆ ವಿಶೇಷ ಪುಷ್ಪಾಲಂಕಾರ, ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯ ನೆರವೇರಿತು. ತಾಲೂಕಿನ ವಿವಿಧ ಗ್ರಾಮಗಳಿಂದ ಬಂದಿದ್ದ ನೂರಾರು ಭಕ್ತರು ಸರತಿಯಲ್ಲಿ ನಿಂತು ದೇವಿಯ ದರ್ಶನ ಪಡೆದರು.

5 ಕೋಟಿ ವೆಚ್ಚದ ರಸ್ತೆ ಕಾಮಗಾರಿಗೆ ಸಿಎಸ್‌ಪಿ ಭೂಮಿಪೂಜೆ



ಕೆಆರ್‌ಎಸ್ ಜಲಾಶಯದ ಸುರಕ್ಷತೆ ನಮಗೆ ಮುಖ್ಯವಾಗಿದೆ. ನಾನು ಸಚಿವನಾಗಿದ್ದ ಸಂದರ್ಭದಲ್ಲಿಯೇ ಕನ್ನಂಬಾಡಿ ಕಟ್ಟೆ ವಿಚಾರ ಬಂದ ತಕ್ಷಣ 144 ಸೆಕ್ಷನ್ ಜಾರಿಗೊಳಿಸಿ ಗಣಿಗಾರಿಕೆ ನಿಲ್ಲಿಸಿದ್ದೆ. ಈ ಬಗ್ಗೆ ಸರ್ಕಾರ ತೀರ್ಮಾನ ಮಾಡಬೇಕು. ಕೆಆರ್‌ಎಸ್ ಜಲಾಶಯಕ್ಕೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ಜವಾಬ್ದಾರಿ ವಹಿಸಬೇಕು. ಟ್ರಯಲ್ ಬ್ಲಾಸ್ಟಿಂಗ್ ವರದಿ ವ್ಯತಿರಿಕ್ತವಾಗಿ ಬಂದ ತಕ್ಷಣ ಗಣಿಗಾರಿಕೆ ಅವಕಾಶಕೊಡಬೇಕು ಎಂದೇನಿಲ್ಲ. ಈ ಬಗ್ಗೆ ಸರ್ಕಾರ ತೀರ್ಮಾನ ಮಾಡಬೇಕು

–ಸಿ.ಎಸ್.ಪುಟ್ಟರಾಜು, ಶಾಸಕರು.

ಪಾಂಡವಪುರ, ಜು.23– ತಾಲೂಕಿನ ನಾರಾಯಣಪುರ ಗ್ರಾಮದಲ್ಲಿ 5 ಕೋಟಿ ರೂ. ವೆಚ್ಚದಡಿ ನಾರಾಯಣಪುರ–ಎರೆಗೌಡನಹಳ್ಳಿ ಹಾಗೂ ನೀಲನಹಳ್ಳಿ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ನಾರಾಯಣಪುರದಿಂದ ಎರೆಗೌಡನಹಳ್ಳಿ ಗ್ರಾಮಕ್ಕೆ ಸಂಪರ್ಕ ರಸ್ತೆಯೂ ಹದಗೆಟ್ಟಿತ್ತು. ಈ ಹಿನ್ನೆಲೆಯಲ್ಲಿ ಎಸ್‌ಹೆಚ್‌ಡಿಪಿ ಯೋಜನೆಯಡಿ 5 ಕೋಟಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡಿಸಲಾಗಿದ್ದು, ನಾರಾಯಣಪುರ–ಎರೆಗೌಡನಹಳ್ಳಿ ಹಾಗೂ ನೀಲನಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ನವೀನ ಯೋಗಶೆಟ್ಟಿ, ಉಪಾಧ್ಯಕ್ಷೆ ಮಂಗಳ ಪ್ರಕಾಶ್, ಸದಸ್ಯರಾದ ಪವಿತ್ರಾ, ಧನಲಕ್ಷ್ಮೀ, ಪ್ರಮೀಳಾ, ಶಿವಶಂಕರ್, ಪ್ರಕಾಶ್, ಆನಂದ್, ನಾಗರಾಜು, ಶಶಿಕಲಾ, ಸುಶೀಲಮ್ಮ, ಗೋಪಾಲ್, ಮುಖಂಡರಾದ ಕುಮಾರ್, ಬಲರಾಮು, ಕೆಂಪರಾಜು, ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ ಯೋಗನರಸಿಂಹೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ಸುಂದ್ರಣ್ಣ ಸೇರಿದಂತೆ ಹಲವರು ಇದ್ದರು.

ಪಿಇಎಸ್ ಕಾನೂನು ಕಾಲೇಜಿನಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮ



ಮಂಡ್ಯ ಜು.23– ನಗರದ ಪಿಇಎಸ್ ಕಾನೂನು ಕಾಲೇಜಿನಲ್ಲಿ ಶನಿವಾರ ಕಾನೂನು ವಿಶ್ವವಿದ್ಯಾಲಯ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಕಾನೂನು ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಕಾಲೇಜಿನಿಂದ ನಡೆದ ಪರಿಸರ ಜಾಗೃತಿ ಕಾರ್ಯಕ್ರಮವನ್ನು ನಿವೃತ್ತ ಮುಖ್ಯ ಪರಿಸರ ಅಧಿಕಾರಿ ಡಾ.ಕುಮಾರಸ್ವಾಮಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 1974ರಲ್ಲಿ ಜಾರಿಗೊಳಿಸಿದ ಕಾನೂನಿನ ಪ್ರಕಾರ ದೇಶದ ಯಾವುದೇ ಜಲ ಮೂಲಗಳನ್ನು ಕಲುಷಿತಗೊಳಿಸಬಾರದು. ಆದರೆ, ಸ್ಥಳೀಯ ಸಂಸ್ಥೆಗಳಿಂದ ಜಲ ಮೂಲಗಳು ಕಲುಷಿತವಾಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಕನಕಪುರ ಸೇರಿದಂತೆ ರಾಜ್ಯದ ಸುಮಾರು 14 ಕಡೆಗಳಲ್ಲಿ ಕಲುಷಿತ ನೀರನ್ನು ನದಿಗೆ ಬಿಡಲಾಗುತ್ತಿದೆ ಕಲಂ 25ರನ್ವಯ ಜಲಮಾಲಿನ್ಯ ನಿಷೇಧಿಸಲಾಗಿದೆ. ಆದರೆ, ಉಪಯೋಗಿಸಿದ ನೀರನ್ನು ಚರಂಡಿಗಳಿಂದ ಸಣ್ಣ–ಪುಟ್ಟ ಕಾಲುವೆಗಳು, ಕೆರೆಗಳು, ಹಳ್ಳಗಳ ಮೂಲಕ ನದಿಗೆ ಕಲುಷಿತ ನೀರು ಹೋಗುವಂತೆ ಮಾಡಿದ್ದೇವೆ. ಇದು ಜಲ ಮಾಲಿನ್ಯಕ್ಕೆ ಮುಖ್ಯ ಕಾರಣವಾಗಿದೆ ಎಂದು ಹೇಳಿದರು.

ಪ್ರತೀ ಹಂತದಲ್ಲೂ ಜಲ ಕಾಯ್ದೆ ಅನುಷ್ಠಾನಗೊಳಿಸಬೇಕು. ಪರಿಸರ ಮಾಲಿನ್ಯ ಮಂಡಳಿಯವರಿಗೆ ಅನುಷ್ಠಾನದ ಅಧಿಕಾರ ನೀಡಲಾಗಿದೆ. ಹಾಗಾಗಿ, ಕಾರ್ಖಾನೆ ಸೇರಿದಂತೆ ಇತರೆ ಘಟಕಗಳ ಸ್ಥಾಪನೆಗೆ ಪರಿಸರ ಮಾಲಿನ್ಯ ಮಂಡಳಿಯ ಅನುಮತಿ ಕಡ್ಡಾಯವಾಗಿಬೇಕಾಗಿದೆ. ಮಿತಿಗಿಂತ ಹೆಚ್ಚಿನ ಮಾಲಿನ್ಯ ಆಗದಂತೆ ಪರಿಸರ ಮಾಲಿನ್ಯ ಮಂಡಳಿ ಷರತ್ತು ವಿಧಿಸಿ ಅನುಮತಿ ನೀಡುತ್ತದೆ. ಆದರೆ, ಕೆಲವು ಮಂಡಳಿ ವಿಧಿಸಿದ ಷರತ್ತನ್ನೂ ಮೀರಿ ಮಾಲಿನ್ಯ ಉಂಟು ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ ಎಂದು ವಿಷಾದಿಸಿದರು.

ಸಮಾರಂಭದಲ್ಲಿ ಉಪ ಪರಿಸರ ಅಧಿಕಾರಿ ಭವ್ಯಾ, ಪ್ರಾಂಶುಪಾಲ ಡಾ.ಜೆ.ಯೋಗೇಶ್, ಪ್ರಾಧ್ಯಾಪಕರಾದ ಸುಭಾಷ್, ಎಂ.ಪಿ. ಪ್ರಮೋದ್, ಜಂಯುಕುಮಾರ್, ಯಮುನಾವತಿ ಇತರರಿದ್ದರು.

ಜು.26 ರಂದು ಟೈಲರ್ಸ್ ಅಸೋಸಿಯೇಷನ್‌ನಿಂದ ಪ್ರತಿಭಟನೆ

ಮಂಡ್ಯ, ಜು.23– ಆರೋಗ್ಯ ವಿಮೆ, ಪಿಂಚಣಿ, ಭವಿಷ್ಯನಿಧಿ ನೀಡಿಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜು.26 ರಂದು ಮಂಡ್ಯದಲ್ಲಿ ಟೈಲರ್ಸ್ ಅಸೋಸಿಯೇಷನ್ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಟೈಲರ್ಸ್ ಅಸೋಸಿಯೇಷನ್ ನಗರ ಘಟಕದ ಅಧ್ಯಕ್ಷ ಟಿ.ಎನ್.ಹರ್ಷ ಪೇಟ್ಕರ್ ತಿಳಿಸಿದರು.

ಅಂದು ಬೆಳಗ್ಗೆ ನಗರದ ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ ಸಮಾವೇಶಗೊಂಡು ಬಳಿಕ ಮೈಸೂರು–ಬೆಂಗಳೂರು ಹೆದ್ದಾರಿ ಮೂಲಕ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕರ್ನಾಟಕ ರಾಜ್ಯದಲ್ಲಿ ಹೊಲಿಗೆ ಕೆಲಸದಿಂದ ಜೀವನ ಸಾಗಿಸುತ್ತಿರುವ ಸುಮಾರು 10 ಲಕ್ಷಕ್ಕೂ ಹೆಚ್ಚು ಜನರಿಗೆ ಭದ್ರತೆ ಒದಗಿಸಲು ಟೈಲರ್ಸ್ ಕ್ಷೇಮ ನಿಧಿ ಮಂಡಳಿಯನ್ನು ರಚಿಸುವಂತೆ ಕಳೆದ 23 ವರ್ಷಗಳಿಂದ ಮನವಿ ಸಲ್ಲಿಸಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದರೂ ಯಾವುದೇ ಸೌಲಭ್ಯ ನೀಡಿಲ್ಲ. ಆದ್ದರಿಂದ ಈ ಹೋರಾಟ ಅನಿವಾರ್ಯವಾಗಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಪ್ರಧಾನಿ ನರೇಂದ್ರಮೋದಿ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಏಕಾಗ್ರತೆ, ಸತತ ಪರಿಶ್ರಮದಿಂದ ಗುರಿ ಸಾಧಿಸಲು ಸಲಹೆ



ಕೆ.ಆರ್.ಪೇಟೆ, ಜು.23– ವಿದ್ಯಾರ್ಥಿಗಳು ಏಕಾಗ್ರತೆ ಹಾಗೂ ಸತತ ಪರಿಶ್ರಮದಿಂದ ವ್ಯಾಸಂಗ ಮಾಡಿ ಗುರಿ ಸಾಧಿಸಬೇಕು ಎಂದು ಪುರಸಭೆ ಸದಸ್ಯ ಸಂತೋಷ್ ಕುಮಾರ್ ಸಲಹೆ ನೀಡಿದರು.

ಪಟ್ಟಣದ ಜಯಮ್ಮ ಶಿವಲಿಂಗೇಗೌಡ ಸಮುದಾಯ ಭವನದಲ್ಲಿ ಶನಿವಾರ ಆಚಾರ್ಯ ವಿದ್ಯಾಶಾಲೆಯಿಂದ ಆಯೋಜಿಸಿದ್ದ ವಿದ್ಯಾರ್ಥಿಗಳ ನಾಯಕತ್ವ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಬಾಲ್ಯದಿಂದಲೇ ಉತ್ತಮವಾದ ಶಿಸ್ತು, ಸಂಯಮ ಹಾಗೂ ಸಂಸ್ಕಾರವನ್ನು ತುಂಬಿ ಮಾನವೀಯ ಮೌಲ್ಯಗಳನ್ನು ಉತ್ತೇಜಿಸಿ ನಾಯಕತ್ವ ಗುಣಗಳನ್ನು ವೃದ್ಧಿಸಲು ನಾಯಕತ್ವ ಪದಗ್ರಹಣ ಸಮಾರಂಭ ನೆರವಾಗಿದೆ. ಪೋಷಕರು ತಮ್ಮ ಮಕ್ಕಳಿಗಾಗಿ ಆಸ್ತಿ ಹಣ ಸಂಪಾದನೆ ಮಾಡದೇ ಮಕ್ಕಳಿಗೆ ಶಿಕ್ಷಣದ ಜ್ಞಾನದ ಸಂಸ್ಕಾರವನ್ನು ಕೊಡಿಸಿ ಮಕ್ಕಳನ್ನೇ ಸಮಾಜಕ್ಕೆ ಆಸ್ತಿಯನ್ನಾಗಿ ಕೊಡುಗೆ ನೀಡಬೇಕು ಎಂದರು.

ಕೆ.ಆರ್.ಪೇಟೆ ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಎಂ.ಕೆ.ದೀಪಕ್ ಮಾತನಾಡಿ, ಮಕ್ಕಳಿಗೆ ಗುರುಕುಲದ ಮಾದರಿಯಲ್ಲಿ ಗುಣಮಟ್ಟದ ಶಿಕ್ಷಣವನ್ನು ತಾಲೂಕಿನ ಗ್ರಾಮೀಣ ಪ್ರದೇಶ ಸೇರಿದಂತೆ ಪಟ್ಟಣದ ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಆಚಾರ್ಯ ವಿದ್ಯಾಶಾಲೆಯು ಮಕ್ಕಳ ವ್ಯಕ್ತಿತ್ವದ ವಿಕಾಸಕ್ಕೆ ಕಾರಣವಾಗಿದೆ ಎಂದರು. ಆಚಾರ್ಯ ವಿದ್ಯಾಶಾಲೆಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಚಿತ್ರನಟ ಜಿ.ಅರವಿಂದ್, ಕಾರ್ಯದರ್ಶಿ ವೀಣಾಅರವಿಂದ್, ಶಾಲೆಯ ಟ್ರಸ್ಟಿ ಸಿಂಧೂ, ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಣ ಸಂಯೋಜಕ ವೇಣುಗೋಪಾಲ್, ಪುರಸಭೆ ಸದಸ್ಯ ಕೆ.ಆರ್.ನೀಲಕಂಠ, ಉದ್ಯಮಿ ಕೆ.ಪಿ.ಜಯಂತ್, ಪ್ರಾಂಶುಪಾಲರಾದ ಹುದಾಫಾತಿಮಾ, ಆಡಳಿತಾಧಿಕಾರಿ ತಬ್ರೇಜ್ ನದೀಮ್, ಶಾಲೆಯ ವ್ಯವಸ್ಥಾಪಕ ಕೆ.ಎಸ್.ನಾಗೇಶ್‌ಬಾಬು ಇದ್ದರು.

ಕೆಆರ್‌ಎಸ್‌ನ ಹೊರ ಹರಿವು ಇಳಿಕೆ



ಶನಿವಾರ ಮಧ್ಯಾಹ್ನ ಕೆಆರ್‌ಎಸ್ ಜಲಾಶಯದ 5 ಗೇಟ್‌ನಲ್ಲಷ್ಟೇ ನೀರನ್ನು ಹೊರ ಬಿಡಲಾಗಿದೆ.

ಶ್ರೀರಂಗಪಟ್ಟಣ, ಜು.23– ಕೊಡಗು ಸೇರಿದಂತೆ ಕಾವೇರಿ ನದಿ ವ್ಯಾಪ್ತಿಯ ಪ್ರದೇಶಗಳಲ್ಲಿ ಮಳೆ ಪ್ರಮಾಣ ಕಡಿಯಾಗಿರುವುದರಿಂದ ಜಲಾಶಯಕ್ಕೆ ಹರಿದು ಬರುತ್ತಿರುವ ಒಳ ಹರಿವಿನ ಪ್ರಮಾಣ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಜಲಾಶಯದ ಹೊರಹರಿವು ಇಳಿಕೆ ಮಾಡಲಾಗಿದೆ.

ಕಳೆದೊಂದು ವಾರದಿಂದ 50ರಿಂದ 85 ಸಾವಿರಕ್ಕೂ ಅಧಿಕ ಕ್ಯೂಸೆಕ್ ನೀರನ್ನು ಜಲಾಶಯದಿಂದ ಹೊರ ಬಿಡಲಾಗುತಿತ್ತು ಪ್ರಸ್ತುತ ಜಲಾಶಯದ ಒಳ ಹರಿವು 16,279 ಕ್ಯೂಸೆಕ್ ಬರುತ್ತಿರುವುದರಿಂದ 19,597 ಕ್ಯೂಸೆಕ್ ನೀರನ್ನು ಮಾತ್ರ ಹೊರ ಬಿಡಲಾಗುತ್ತಿದ್ದು, ನಾಳೆ ಅಥವಾ ನಾಳಿದ್ದು ಹೊರ ಹರಿವಿನ ಪ್ರಮಾಣವನ್ನು ಮತ್ತಷ್ಟು ಕಡಿಮೆಗೊಳಿಸಲಾಗುವುದು ಎಂದು ಕಾವೇರಿ ನೀರಾವರಿ ನಿಗಮದ ಇಂಜಿನಿಯರ್ ತಿಳಿಸಿದರು. ಪ್ರಸ್ತುತ 124.46 ಅಡಿಗಳಷ್ಟು ಜಲಾಶಯ ಭರ್ತಿಯಾಗಿದ್ದು, 48.977 ಟಿಎಂಸಿ ನೀರು ಸಂಗ್ರಹವಾಗಿದೆ. ನದಿಗೆ 17,987 ಕ್ಯೂಸೆಕ್ ಹಾಗೂ ನಾಲೆಗೆ 1,610 ಕ್ಯೂಸೆಕ್ ನೀರನ್ನು ಬಿಡಲಾಗುತ್ತಿದೆ.

ಮೈಸೂರು ಮಿತ್ರ

ಭಾನುವಾರ 24 ಜುಲೈ 2022

ಜು.27, ಕೋ.ಚೆನ್ನಬಸಪ್ಪ ಜನ್ಮ ಶತಮಾನೋತ್ಸವ



ಕೋ. ಚೆನ್ನಬಸವಪ್ಪ

ಮೈಸೂರು, ಜು.23(ಪಿಎಂ)– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ–ಜಿಲ್ಲಾ ಘಟಕದ ವತಿಯಿಂದ ಜು.27ರಂದು ಸ್ವಾತಂತ್ರ್ಯ ಹೋರಾಟಗಾರ, ಸಾಹಿತಿ ಹಾಗೂ ನ್ಯಾಯಾಧೀಶರೂ ಆಗಿದ್ದ ಕೋ. ಚೆನ್ನಬಸಪ್ಪನವರ ಜನ್ಮಶತಮಾನೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪರಿಷತ್ತಿನ ನಗರಾಧ್ಯಕ್ಷ ಮ.ಗು. ಸದಾನಂದಯ್ಯ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಕೋ.ಚೆನ್ನಬಸಪ್ಪನವರ ಜನ್ಮಶತಮಾನೋತ್ಸವ ಸಮಿತಿ ಸಹಯೋಗದೊಂದಿಗೆ ಅಂದು ಬೆಳಗ್ಗೆ 11ಕ್ಕೆ ಮೈಸೂರಿನ ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜಿನ ಸಭಾಂಗಣದಲ್ಲಿ ಜನ್ಮಶತಮಾನೋತ್ಸವ ಕಾರ್ಯಕ್ರಮ ನಡೆಯಲಿದೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ ಉದ್ಘಾಟಿಸುವರು ಎಂದು ಹೇಳಿದರು.

ಜನ್ಮಶತಮಾನೋತ್ಸವ ಸಮಿತಿ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಆಶಯ ಭಾಷಣ ಮಾಡುವರು. ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಅಧ್ಯಕ್ಷತೆ ವಹಿಸುವರು. 'ಪ್ರಗತಿಶೀಲ ಬರಹಗಾರರಾಗಿ ಕೋ.ಚೆ.' ಕುರಿತು ಆಕಾಶವಾಣಿ ಮಾಜಿ ನಿರ್ದೇಶಕ ಬಸವರಾಜ ಸಾದರ, 'ಕೋ.ಚೆ. ಅವರ ಸಾಹಿತ್ಯ' ಕುರಿತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ನಿರ್ದೇಶಕ ಡಾ.ಎನ್.ಎಂ. ತಳವಾರ್ ವಿಷಯ ಮಂಡಿಸಲಿದ್ದಾರೆ. ಕೋ.ಚೆನ್ನಬಸಪ್ಪ ಅವರ ಪುತ್ರ ಡಾ.ಕೆ.ಸಿ.ಗುರುದೇವ, ಅಳಿಯ ಕೆ.ಐ.ಗುದಗಿಯವರು ಉಪಸ್ಥಿತರಿರುವರು. ಇದಕ್ಕೂ ಮುನ್ನ ಬೆಳಗ್ಗೆ 10.30ಕ್ಕೆ ನಾದಹಂಸಿನಿ ಭಜನಾ ಸಂಘದವರಿಂದ ವಚನ ಗಾಯನ ನಡೆಯಲಿದೆ ಎಂದರು.

ರಸಗೊಬ್ಬರ ಅಕ್ರಮ ದಾಸ್ತಾನು

ಗೋಡೌನ್ ಸಹಿತ ಜಪ್ತಿ: ಓರ್ವನ ವಿರುದ್ಧ ಪ್ರಕರಣ ದಾಖಲು

ಹನೂರು, ಜು.23–ಜಮೀನಿನ ಗೋಡೌನ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 10.75 ಮೆಟ್ರಿಕ್ ಟನ್ ರಸಗೊಬ್ಬರವನ್ನು ಕೃಷಿ ಇಲಾಖೆ ಅಧಿಕಾರಿ ಗಳು ವಶಪಡಿಸಿಕೊಂಡಿದ್ದು, ಈ ಸಂಬಂಧ ಹನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮವಾಗಿ ರಸಗೊಬ್ಬರ ಸಂಗ್ರಹಿಸಿಡಲಾಗಿದೆ ಎಂಬ ಖಚಿತ ಮಾಹಿತಿ ಮೇರೆಗೆ ಸಹಾಯಕ ಕೃಷಿ ನಿರ್ದೇಶಕಿ ಸುಂದರಮ್ಮ ಅವರು ಹನೂರು ಕೃಷಿ ಅಧಿಕಾರಿ ರಘುವೀರ್, ಲೊಕ್ಕನಹಳ್ಳಿ ಕೃಷಿ ಅಧಿಕಾರಿ ವೆಂಕಟನಾಯಕ್, ಕೊಳ್ಳೇಗಾಲ ಕೃಷಿ ಇಲಾಖೆ ತಾಂತ್ರಿಕ ಅಧಿಕಾರಿ ಎನ್.ದೊರೈರಾಜ್ ಹಾಗೂ ಹನೂರು ಠಾಣೆ ಪೊಲೀಸರೊಡಗೂಡಿ ಚಿಕ್ಕಮಾಲಾಪುರ ಗ್ರಾಮದ ನಂಜುಂಡ ಎಂಬು ವರ ಜಮೀನಿನಲ್ಲಿದ್ದ ಗೋಡೌನ್ ಮೇಲೆ ಜು.21 ರಂದು ಮಧ್ಯಾಹ್ನ ದಾಳಿ ನಡೆಸಿದ್ದಾರೆ.

ಜಮೀನು ಮಾಲೀಕ ನಂಜುಂಡ ಅವರನ್ನು ಪ್ರಶ್ನಿಸಿದಾಗ ಅವರು ತಾವು ಗೋಡೌನ್ ಅನ್ನು ಲೊಕ್ಕನಹಳ್ಳಿ ಗ್ರಾಮದ ಶಕ್ತಿವೇಲ್ ಎಂಬುವರಿಗೆ ನೀಡಿರುವುದಾಗಿ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಅಧಿ ಕಾರಿಗಳು ಶಕ್ತಿವೇಲ್ ಅವರನ್ನು ಸ್ಥಳಕ್ಕೆ ಕರೆಸುವ ಯತ್ನ ವಿಫಲವಾದಾಗ ಜಮೀನು ಮಾಲೀಕನ ಸಮ್ಮುಖದಲ್ಲಿ ಗೋಡೌನ್‌ನ ಬೀಗ ತೆಗೆದು ಪರಿ ಶೀಲನೆ ಮಾಡಿದಾಗ ಮದ್ರಾಸ್ ಫರ್ಟಿಲೈಸರ್ ಕಂಪನಿ ಯಿಂದ ವಿತರಿಸುವ ಕೃಷಿ ಬಳಕೆಯ ಯೂರಿಯಾ ಗೊಬ್ಬರನ್ನು ಟೆಕ್ನಿಕಲ್ ಗ್ರೇಡ್ ಯೂರಿಯಾ ಎಂಬ ಹೆಸರಿರುವ ಚೀಲಗಳಲ್ಲಿ ತುಂಬಿಸಿ ಅದನ್ನು ಕೈಗಾ ರಿಕೆಗಳ ಬಳಕೆಗೆ ಸಾಗಿಸಲು ದಾಸ್ತಾನು ಮಾಡಿರುವುದು ಕಂಡು ಬಂದಿದೆ. ಗೋಡೌನ್‌ನಲ್ಲಿದ್ದ 10.75 ಮೆಟ್ರಿಕ್ ಟನ್ ರಸಗೊಬ್ಬರವನ್ನು ವಶಪಡಿಸಿ ಕೊಂಡ ಅಧಿಕಾರಿಗಳು ರಸಗೊಬ್ಬರ ಸಮೇತ ಗೋಡೌನ್‌ಗೆ ಸೀಲ್ ಹಾಕಿದ್ದು, ಹನೂರು ಠಾಣೆಗೆ ಶಕ್ತಿವೇಲ್ ವಿರುದ್ಧ ದೂರು ದಾಖಲಿಸಿದ್ದಾರೆ. ಈ ಸಂಬಂಧ ಹನೂರು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಒಂದನೇ ಪುಟದಿಂದ

ನಿರ್ಧರಿಸುವವರು ವರಿಷ್ಠರು!

ಅಮಿತ್ ಶಾ, ನಡ್ಡಾ ಅವರದ್ದು. ಪಕ್ಷದ ತೀರ್ಮಾನವೇ ಅಂತಿಮ ಎಂದರು. ಹಳೆ ಮೈಸೂರು, ಶಿಕಾರಿಪುರ ಎಲ್ಲೇ ನಿಂತರೂ ವಿಜಯೇಂದ್ರ ಗೆಲ್ಲುತ್ತಾರೆ. ಆದರೆ ಅಂತಿಮವಾಗಿ ತೀರ್ಮಾನ ಮಾಡೋದು ಪ್ರಧಾನಿ ಮೋದಿಯವರು ಎಂದರು.

ನನಗೆ ಪಕ್ಷದಲ್ಲಿ ಸಾಕಷ್ಟು ಅವಕಾಶ ಸಿಕ್ಕಿದೆ. ನನ್ನನ್ನು ರಾಷ್ಟ್ರ ಮಟ್ಟದಲ್ಲಿ ಬೆಳೆಸಿದ್ದಾರೆ. ನಾಲ್ಕು ಬಾರಿ ಸಿಎಂ ಮಾಡಿದ್ದಾರೆ. ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕು. ಅದನ್ನು ನಾನು ನೋಡಬೇಕು. ರಾಜ್ಯಾದ್ಯಂತ ಪ್ರವಾಸ ಮಾಡಿ 140 ಸ್ಥಾನ ಗೆಲ್ಲೋದೇ ನಮ್ಮ ಗುರಿ. ನಾನು ನಾಳೆ ನಾಡಿದ್ದರಿಂದಲೇ ಕೆಲಸ ಶುರು ಮಾಡ್ತೇನೆ ಎಂದು ಪಕ್ಷ ಸಂಘಟನೆಗೆ ಮುಂದಾಗುವುದಾಗಿ ಹೇಳಿದರು. ಇದೇ ವೇಳೆ ಪಿಎಸ್‌ಐ ಹಗರಣದಲ್ಲಿ ವಿಜಯೇಂದ್ರ ಭಾಗಿ ಆರೋಪಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಮೇಲೆ ಗರಂ ಆದ ಯಡಿಯೂರಪ್ಪ, ಇದು ಮೂರ್ಖತನದ ಪರಮಾವಧಿ ಹೇಳಿಕೆ ಎಂದರು. ಅವರು ಹೇಳಿಕೆ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

ಸಿಎಂ, ಆರ್.ಅಶೋಕ್ ಹೇಳಿಕೆ: ಬಿ.ವೈ.ವಿಜಯೇಂದ್ರ ಬಗ್ಗೆ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಟಿಕೆಟ್ ನೀಡುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತೀರ್ಮಾನ ಮಾಡ್ತಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶನಿವಾರ ಹೇಳಿದ್ದಾರೆ. ಬಿ.ವೈ.ವಿಜಯೇಂದ್ರರಿಗೆ ಶಿಕಾರಿಪುರ ಕ್ಷೇತ್ರ ಬಿಟ್ಟುಕೊಡುತ್ತೇನೆಂದು ನಿನ್ನೆ ಯಡಿಯೂರಪ್ಪನವರು ಸಲಹೆ ನೀಡಿದ್ದಾರಷ್ಟೇ. ಕ್ಷೇತ್ರದ ಜನ ಪದೇ ಪದೇ ಕೇಳುತ್ತಿದ್ದರು. ಹಾಗಾಗಿ ಯಡಿಯೂರಪ್ಪನವರು ನಿನ್ನೆ ಆ ಹೇಳಿಕೆ ನೀಡಿದ್ದಾರೆ ಎಂದು ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಯಡಿಯೂರಪ್ಪ ಅಂದರೆ ಒಂದು ದೊಡ್ಡ ಶಕ್ತಿ. ನಾಲ್ಕು ದಶಕಗಳಿಂದ ಯಡಿಯೂರಪ್ಪ ಇದ್ದಾರೆ. ಯಡಿಯೂರಪ್ಪ ಹೇಳಿಕೆಯಿಂದ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಲ್ಲ. ಅವರು ಸಿಎಂ ಸ್ಥಾನದಿಂದ ಇಳಿದಾಗಲೇ ಇಕ್ಕಟ್ಟು ಸೃಷ್ಟಿ ಮಾಡಲಿಲ್ಲ. ಈಗ ಸೃಷ್ಟಿ ಮಾಡ್ತಾರಾ? ಎಂದು ಪ್ರಶ್ನಿಸಿದರು. ಇನ್ನೂ ಯಾರಿಗೆ ಟಿಕೆಟ್ ಕೊಡಬೇಕು, ಯಾರಿಗೆ ಟಿಕೆಟ್ ಕೊಡಬಾರದೆಂದು ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಅವರು ಹೇಳಿದ್ದಾರೆ. ಗಟ್ಟಿಯಾದ ಹೈಕಮಾಂಡ್ ನಮ್ಮದು. ಯಾರಿಗೆ ಟಿಕೆಟ್ ಕೊಡ್ಬೇಕು, ಕೊಡಬಾರದೆಂದು ನಮ್ಮ ಹೈಕಮಾಂಡ್ ತೀರ್ಮಾನಿಸುತ್ತೆ. ಸಿಎಂ ಮತ್ತು ನಾನು ಬಿಎಸ್‌ವೈ ಭೇಟಿ ಮಾಡಿದ್ವಿ, ಅವರು ನಗುನಗುತ್ತಲೇ ಮಾತನಾಡಿದರು. ದೊಡ್ಡ ದೊಡ್ಡ ರ್‍ಯಾಲಿ ಮಾಡೋಣ ಎಂದಿದ್ದಾರೆ. ದೊಡ್ಡಬಳ್ಳಾಪುರ ರ್‍ಯಾಲಿ ಅನೌನ್ಸ್ ಮಾಡಿದ್ದೇನೆ. ಮುಂದೆ ಯಾವ್ಯಾವ ಜಿಲ್ಲೆಯಲ್ಲಿ ಮಾಡಬೇಕೆಂಬುದರ ಬಗ್ಗೆಯೂ ಮಾತನಾಡ್ತೇನೆ. ನನ್ನ ಜೀವವೇ ಬಿಜೆಪಿ ಅಂತ ಹೇಳ್ತಿದ್ದಾರೆ ಎಂದರು.

ರಾಜಕಾರಣದಿಂದ ನಿವೃತ್ತರಾಗಬೇಡಿ...

ನೀವು ರಾಜಕೀಯದಲ್ಲಿ ಸಕ್ರಿಯವಾಗಿದ್ದು, ನಮ್ಮಂತಹವರನ್ನು ಮತ್ತು ಕಾರ್ಯಕರ್ತರನ್ನು ಪ್ರೋತ್ಸಾಹಿಸಬೇಕು. ರಾಜ್ಯ ಮತ್ತು ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಹಿಡಿಯಲು ನಿಮ್ಮ ಸಹಕಾರ ಅತ್ಯವಶ್ಯ ಎಂದಿದ್ದಾರೆ. ಪಕ್ಷ ಯಾವುದೇ ತೀರ್ಮಾನಗಳನ್ನು ಕೈಗೊಂಡಿಲ್ಲ. ಇದರ ನಡುವೆ ನೀವು ಇಂತಹ ಹೇಳಿಕೆ ನೀಡಿರುವುದು ನಮಗೆ ಸರಿ ಬರುತ್ತಿಲ್ಲ. ನೀವು ಸಕ್ರಿಯ ರಾಜಕಾರಣದಲ್ಲಿದ್ದು, ಪಕ್ಷವನ್ನು ಮುನ್ನಡೆಸಬೇಕೆಂದು ಕೋರಿದ್ದಾರೆ.

'ಸ್ಪಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಟರ್ ಇನ್ ಕರ್ನಾಟಕ' ಶೀರ್ಷಿಕೆಯ ಇಂಗ್ಲಿಷ್‌ನ ಐದು ಸಂಪುಟಗಳು

ಅನ್ಯಭಾಷಿಗರಿಗೆ ಕನ್ನಡ ಸಾಹಿತ್ಯ ಕಾಲಘಟ್ಟದ ಮಾಹಿತಿ

ಸಂಪುಟಗಳ ಕುರಿತ ಅನುಸಂಧಾನ ಕಾರ್ಯಕ್ರಮ ಉದ್ಘಾಟಿಸಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಭಿಮತ



ಮೈಸೂರು ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಹಂಪನಾ ಅವರ ಐದು ಸಂಪುಟಗಳ ಕುರಿತ ಅನುಸಂಧಾನ ಕಾರ್ಯಕ್ರಮವನ್ನು ಮೈಸೂರು ವಿವಿ ಕುಲಪತಿ ಪ್ರೊ. ಹೇಮಂತ್‌ಕುಮಾರ್ ಉದ್ಘಾಟಿಸಿದರು.

> "ಸಾಹಿತ್ಯ, ಸಂಸ್ಕೃತಿ, ಚರಿತ್ರೆ ಹಾಗೂ ಜಾನಪದ ಸೇರಿದಂತೆ ಮೊದಲಾದ ಕ್ಷೇತ್ರಗಳಲ್ಲಿ ಹಲವು ಕೃತಿಗಳನ್ನು ರಚಿಸಿರುವ ಹಂಪನಾ, ಇದೀಗ ಕನ್ನಡ ಸಾಹಿತ್ಯದ ಆರಂಭದಿಂದ 13ನೇ ಶತಮಾನದವರೆಗಿನ ಕಾಲದಲ್ಲಿ ರಚನೆಯಾದ ಸಾಹಿತ್ಯದ ತಿರುಳನ್ನು ಈ ಸಂಪುಟಗಳಲ್ಲಿ ನೀಡಿದ್ದಾರೆ. ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ಜೈನ ಧರ್ಮ ಉತ್ತುಂಗಕ್ಕೇರಿತ್ತು. ಹಂಪನಾ ಅವರು ರಾಷ್ಟ್ರಕೂಟ ಸಾಮ್ರಾಜ್ಯದ ಬಗೆಗೆ ಆಳವಾದ ಮಾಹಿತಿ ಹೊಂದಿದ್ದಾರೆ. ಹಂಪನಾ ಅವರು ಮಾಡಿರುವ ಕೆಲಸ ಅಪಾರವಾದದ್ದು. ಹಿರಿಯರೂ ಆದ ಅವರು ಈ ವಯಸ್ಸಿನಲ್ಲೂ ಅತ್ಯಂತ ಉತ್ಸಾಹದಿಂದ ಸಾಹಿತ್ಯದ ಕಾರ್ಯದಲ್ಲಿ ತೊಡಗಿರುವುದು ಇಂದಿನ ನಮ್ಮ ವಿದ್ಯಾರ್ಥಿಗಳಿಗೆ ಮಾದರಿಯಾಗಬೇಕು.
>
> –ಪ್ರೊ.ಜಿ.ಹೇಮಂತ್‌ಕುಮಾರ್, ಕುಲಪತಿ, ಮೈಸೂರು ವಿವಿ

ಮೈಸೂರು,ಜು.23(ಪಿಎಂ)–ಕನ್ನಡದ ಹಿರಿಯ ವಿದ್ವಾಂಸ ನಾಡೋಜ ಡಾ.ಹಂ.ಪ.ನಾಗರಾಜಯ್ಯ ಅವರ 'ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಟರ್ ಇನ್ ಕರ್ನಾಟಕ' ಶೀರ್ಷಿಕೆಯಡಿ ಇಂಗ್ಲಿಷ್‌ನಲ್ಲಿ ರಚನೆಯಾಗಿರುವ ಐದು ಸಂಪುಟಗಳು ಕನ್ನಡ ಗೊತ್ತಿಲ್ಲದ ಅನ್ಯಭಾಷಿಗರಿಗೆ ಕನ್ನಡ ಸಾಹಿತ್ಯದ ಮಹತ್ತರ ಕಾಲಘಟ್ಟದ ಬಗ್ಗೆ ಮಹತ್ವದ ಮಾಹಿತಿಗಳನ್ನು ಒದಗಿಸಲಿವೆ ಎಂದು ಮೈಸೂರು ವಿವಿ ಕುಲಪತಿ ಪ್ರೊಜಿ.ಹೇಮಂತ್‌ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಮೈಸೂರು ವಿವಿ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಸಪ್ನ ಬುಕ್ ಹೌಸ್ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಆಚಾರ್ಯ ಹಂ.ಪ.ನಾಗರಾಜಯ್ಯ (ಹಂಪನಾ) ಅವರ 'ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಟರ್ ಇನ್ ಕರ್ನಾಟಕ (ಕರ್ನಾಟಕದ ಅಭಿಜಾತ ಸಾಹಿತ್ಯದ ಇಂದ್ರಚಾಪ)' ಶೀರ್ಷಿಕೆಯ ಐದು ಸಂಪುಟಗಳ ಕುರಿತ ಅನುಸಂಧಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಂಪನಾರ ಅತ್ಯಮೂಲ್ಯವಾದ ಐದು ಗ್ರಂಥಗಳ ಕುರಿತಾದ ಅನುಸಂಧಾನ ಕಾರ್ಯಕ್ರಮ ಏರ್ಪಡಿಸಿರುವುದು ಶ್ಲಾಘನೀಯ. ಹಂಪನಾ ಕನ್ನಡದ ಹಿರಿಯ ವಿದ್ವಾಂಸರು. ಅಭಿಜಾತ ಕನ್ನಡ ಸಾಹಿತ್ಯದ ಆಳ–ಅಗಲಗಳನ್ನು ಅರಿತವರು. ಜೈನ ಕವಿಗಳ ಸಾಹಿತ್ಯ ಬಗ್ಗೆ ಅಗಾಧ ಜ್ಞಾನ ಹೊಂದಿರುವವರು. ಈ ಐದು ಸಂಪುಟಗಳು ಕನ್ನಡ ಗೊತ್ತಿಲ್ಲದ ಅನ್ಯಭಾಷಿಗರು, ಆಸಕ್ತರಿಗೆ ಅತ್ಯಂತ ಉಪಯುಕ್ತ ಮಾಹಿತಿ ಒದಗಿಸುವ ಆಕರಗಳಾಗಿವೆ ಎಂದರು.

ಕನ್ನಡದ ಶ್ರೇಷ್ಠ ಸಾಹಿತ್ಯವನ್ನು ಬಹುದೊಡ್ಡ ಪ್ರಮಾಣದಲ್ಲಿ ಇಂಗ್ಲಿಷ್ ಮೂಲಕ ಜಾಗತಿಕ ವೇದಿಕೆಯಲ್ಲಿ ನಿಲ್ಲಿಸಿದ ಕೀರ್ತಿ ಹಂಪನಾ ಅವರಿಗೆ ಸಲ್ಲುತ್ತದೆ. ಆ ಮೂಲಕ ಜಗತ್ತಿನ ಬೇರೆ ಬೇರೆ ಭಾಷೆಯ ಸಾಹಿತ್ಯದ ಜೊತೆಗೆ ಕನ್ನಡ ಸಾಹಿತ್ಯವನ್ನು ಹೋಲಿಸಿ ಇದರ ಮಹತ್ವ ತಿಳಿಸುವ ಕಾರ್ಯವಾಗಲಿದೆ. ಅಂತಹ ಪ್ರಶಂಸನೀಯ ಕಾರ್ಯವನ್ನು ಹಂಪನಾ ಮಾಡಿದ್ದಾರೆ ಎಂದರು.

'ಸಂ–1 : ಪಂಪ ಪೂರ್ವಯುಗ' ಕುರಿತು ವಿಷಯ ಮಂಡಿಸಿದ ಬೆಂಗಳೂರು ವಿವಿ ಕನ್ನಡ ಪ್ರಾಧ್ಯಾಪಕಿ ಪ್ರೊ.ಹೆಚ್.ಶಶಿಕಲಾ, ಈ ಗ್ರಂಥವು 276 ಪುಟಗಳನ್ನು ಹೊಂದಿದೆ. ಅಭಿಜಾತ ಪರಂಪರೆಯನ್ನು ಜಾಗತಿಕ ಮಟ್ಟಕ್ಕೆ ಮುಟ್ಟಿಸುವ ಕೆಲಸವನ್ನು ಹಂಪನಾ ಮಾಡಿದ್ದಾರೆ. ಅಭಿಜಾತ ಪರಂಪರೆ ವಿಶಿಷ್ಟತೆಯನ್ನು 4 ಸಂಪುಟಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಸಂಪುಟ 1ರಲ್ಲಿ ಪಂಪ ಪದ ಪುನರಾವರ್ತನೆಯಾಗುತ್ತದೆ. ಆ ಮೂಲಕ ಪಂಪನನ್ನು ಕ್ಲಾಸಿಕಲ್‌ಗೆ ಪ್ರತಿನಿಧಿಯಾಗಿ ಪರಿಗಣಿಸಿದ್ದಾರೆ. ಈ ಕೃತಿಗಳನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು ಎಂಬ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ಲೇಖಕರು ನೀಡಿದ್ದಾರೆ. ಚಂಪು ಎನ್ನುವುದು ವಿವಿಧ ಬಗೆಯ ಛಂದಸ್ಸಿನ ತೋಟ. ಅಭಿಜಾತ ಲಕ್ಷಣದ ಒಂದು ಭಾಗವಾಗಿ ಚಂಪುವನ್ನು ಲೇಖಕರು ಇಲ್ಲಿ ಮಂಡಿಸಿದ್ದಾರೆ ಎಂದರು.

ಕನ್ನಡೇತರರಿಗೆ ಕನ್ನಡ ಸಾಹಿತ್ಯದ ಬಗ್ಗೆ ಮಂಡಿಸುತ್ತಿರುವ ವಿಚಾರ ಎಂದಾದರೂ ಕನ್ನಡಿಗರಿಗೆ ಸಹ ನಮ್ಮ ಸಾಹಿತ್ಯದ ವಿಶಿಷ್ಟ ಲಕ್ಷಣಗಳನ್ನು ತಿಳಿಯಲು ಈ ಕೃತಿ ಸಹಕಾರಿ. ಧರ್ಮ ಮತ್ತು ಪ್ರಭುತ್ವದ ಈ ಎರಡರೊಳಗೆ ಅಭಿಜಾತತೆ ಎನ್ನುವುದು ಹೇಗೆ ಆಕಾರ ಪಡೆಯುತ್ತದೆ ಎಂದಿಲ್ಲಿ ಗುರುತಿಸಿದ್ದಾರೆ. ಸಾಹಿತ್ಯ ಸೃಷ್ಟಿಯ ಹಿಂದೆ ಪ್ರಭುತ್ವ, ಧರ್ಮ, ಭಾಷೆ, ಸಂಸ್ಕೃತಿ, ಆ ಕಾಲದ ಮೌಲ್ಯಗಳು ಸೇರಿದಂತೆ ಇತ್ಯಾದಿ ಉಂಟು ಮಾಡಿದ ಪ್ರಭಾವ ಅವಲೋಕಿಸಿದ್ದಾರೆ ಎಂದರು.

'ಸಂ–2 ; ಪಂಪೋತ್ತರ ಸಾಹಿತ್ಯ, ಭಾಗ–1ರ' ಕುರಿತು ಮಾತನಾಡಿದ ಶಿಕ್ಷಣ ತಜ್ಞೆ ಪ್ರೊ.ವನಮಾಲಾ ವಿಶ್ವನಾಥ್, ಈ ಸಂಪುಟ 225 ಪುಟಗಳನ್ನು ಹೊಂದಿದೆ. ಕ್ರಿ.ಶ. 905ರಿಂದ 1175ರವರೆಗಿನ ಕಾಲಘಟ್ಟದಲ್ಲಿ ಬದುಕಿ ಬರೆದ ಕನ್ನಡದ ಅಭಿಜಾತ ಕವಿಗಳ ಕವಿಕಾವ್ಯದ ವಿಮರ್ಶಾತ್ಮಕ ಪರಿಚಯವನ್ನು ಈ ಸಂಪುಟ ಒಳಗೊಂಡಿದೆ. ಕವಿ ಮತ್ತು ಅವರ ಕೃತಿಗಳ ಚಾರಿತ್ರಿಕ ಮಹತ್ವದ ಬಗ್ಗೆ ಇಲ್ಲಿ ವಿವರ ಕಾಣಬಹುದು. ಅಲ್ಲದೆ, ಅವರ ಧಾರ್ಮಿಕ ಶ್ರದ್ಧೆ ಹಾಗೂ ಮಾಡಿರುವ ಭಾಷಿಕ ಅನುಸಂಧಾನ ಮಹತ್ವವನ್ನು ಕೃತಿ ಒಳಗೊಂಡಿದೆ ಎಂದು ಹೇಳಿದರು.

'ಸಂ–3; ಪಂಪೋತ್ತರ ಸಾಹಿತ್ಯ, ಭಾಗ–2' ಕುರಿತು ಕವಯತ್ರಿ ಪ್ರತಿಭಾ ನಂದಕುಮಾರ್, **'ಸಂ–4 ;** ಸಂಸ್ಕೃತ–ಪ್ರಾಕೃತ–ಅಪಭ್ರಂಶ' ಪ್ರಾಧ್ಯಾಪಕಿ ಡಾ.ಪದ್ಮಿನಿ ನಾಗರಾಜು ಮತ್ತು **'ಸಂ–5 ;** ಶಾಸನ ಸಾಹಿತ್ಯ' ಕುರಿತು ಕನ್ನಡ ಪ್ರಾಧ್ಯಾಪಕಿ ಡಾ.ಎನ್.ಆರ್.ಲಲಿತಾಂಬ ವಿಷಯ ಮಂಡಿಸಿದರು. ವಿಶ್ರಾಂತ ಕುಲಪತಿ ಪ್ರೊ.ಮಲ್ಲಿಕಾ ಘಂಟಿ ಅಧ್ಯಕ್ಷತೆ ವಹಿಸಿದ್ದರು. ನಾಡೋಜ ಡಾ.ಹಂ.ಪ.ನಾಗರಾಜಯ್ಯ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ.ವಿಜಯಕುಮಾರಿ ಎಸ್.ಕರಿಕಲ್, ಸಂದರ್ಶಕ ಪ್ರಾಧ್ಯಾಪಕಿ ಡಾ.ಎಂ.ಎಸ್.ಪದ್ಮಾ ಮತ್ತಿತರರು ಹಾಜರಿದ್ದರು.

ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ 'ನಾಲ್ವಡಿ' ಹೆಸರು ನಾಮಕರಣ ನಿರ್ಣಯ ಸಿದ್ದರಾಮಯ್ಯ ಸರ್ಕಾರದಲ್ಲೇ ಆಗಿತ್ತು



ಮೈಸೂರು,ಜು.23(ಪಿಎಂ)–ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ 'ನಾಲ್ವಡಿ ಕೃಷ್ಣರಾಜ ಒಡೆಯರ್' ಹೆಸರು ನಾಮಕರಣ ಮಾಡಲು ನಿರ್ಧರಿಸಿದ್ದು ಸಿದ್ದರಾಮಯ್ಯ ನೇತೃತ್ವದ ಈ ಹಿಂದಿನ ಕಾಂಗ್ರೆಸ್ ಸರ್ಕಾರವೇ? ಅಥವಾ ಈಗಿನ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವೇ? ಎಂಬ ಪ್ರಶ್ನೆ ಈಗ ಸಾರ್ವಜನಿಕ ವಲಯದಲ್ಲಿ ಕಾಡತೊಡಗಿದೆ.

ನಾಲ್ವಡಿ ಹೆಸರು ನಾಮಕರಣ ಸಂಬಂಧ ಶುಕ್ರವಾರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನವಾಗಿದೆ. ಸರ್ಕಾರದ ನಿರ್ಣಯವನ್ನು ಕೇಂದ್ರ ವಿಮಾನಯಾನ ಪ್ರಾಧಿಕಾರಕ್ಕೆ ಸಲ್ಲಿಸುವುದಾಗಿ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಮಾಧ್ಯಮಗಳಿಗೆ ತಿಳಿಸಿದ್ದರು. ಅಲ್ಲದೆ, ಈ ಪ್ರಸ್ತಾವನೆಯನ್ನು ಸರ್ಕಾರದ ಮುಂದೆ ತಂದವನೇ ನಾನು ಎಂದು ಸಂಸದ ಪ್ರತಾಪ್ ಸಿಂಹ ಹೇಳಿಕೊಂಡಿದ್ದಾರೆ. ಈ ನಡುವೆ ಇತಿಹಾಸ ತಜ್ಞ ಪ್ರೊ.ನಂಜರಾಜ ಅರಸ್, ಈ ತೀರ್ಮಾನ ಹಿಂದಿನ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ್ದಾಗಿದೆ ಎಂದು ಪ್ರತಿಪಾದಿಸಿದ್ದಾರೆ. ಅಲ್ಲದೆ, ಅಂದಿನ ರಾಜ್ಯ ಸರ್ಕಾರದಿಂದ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಪತ್ರ ಬರೆದಿರುವ ಬಗ್ಗೆಯೂ ಪತ್ರದ ದಾಖಲೆ ಬಿಡುಗಡೆ ಮಾಡಿದ್ದಾರೆ.

ಈ ಸಂಬಂಧ ಮೈಸೂರಿನ ಕಲಾಮಂದಿರ ಆವರಣದಲ್ಲಿ

ಇತಿಹಾಸಕಾರ ಪ್ರೊ, ನಂಜರಾಜ ಅರಸ್ ದಾಖಲೆ ಬಿಡುಗಡೆ

ಶನಿವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಹೆಸರು ನಾಮಕರಣ ಮಾಡಬೇಕು ಎಂಬುದು ಮೈಸೂರು ನಾಗರಿಕರ ಹತ್ತಾರು ವರ್ಷಗಳ ಒತ್ತಾಯ. ಶುಕ್ರವಾರ ರಾಜ್ಯ ಸರ್ಕಾರ ಸಂಪುಟ ಸಭೆಯಲ್ಲಿ ನಾಲ್ವಡಿ ಹೆಸರು ನಾಮಕರಣಕ್ಕೆ ತೀರ್ಮಾನ ಕೈಗೊಂಡಿದೆ ಎಂದು ಸುದ್ದಿಯಾಗಿದೆ. ಆದರೆ 2015ರ ಅ.9ರಂದು ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಅಂದಿನ ರಾಜ್ಯ ಕಾಂಗ್ರೆಸ್ ಸರ್ಕಾರ, ನಾಲ್ವಡಿ ಹೆಸರು ನಾಮಕರಣ ಮಾಡಲು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಪತ್ರ ಬರೆದಿತ್ತು ಎಂದು ತಿಳಿಸಿದರು.

ನನಗೆ ಎರಡು ಪ್ರಶ್ನೆ ಕಾಡುತ್ತಿದೆ. ಒಂದು, ಮೊನ್ನೆ ದಿನ ಸಂಪುಟ ಸಭೆಯಲ್ಲಿ ಸಂಬಂಧಿಸಿದ ಇಲಾಖೆ ಕಾರ್ಯದರ್ಶಿ ಹಿಂದಿನ ಸರ್ಕಾರದ ನಿರ್ಧಾರದ ಕಡತವನ್ನು ಸಂಪುಟ ಸಭೆ ಮುಂದೆ ಇಡಲಿಲ್ಲವೇ? ಎಂಬುದು. ಎರಡನೇಯದು, ಇವರು (ರಾಜ್ಯ ಬಿಜೆಪಿ ಸರ್ಕಾರ) ನಾಟಕವಾಡುತ್ತಿದ್ದಾರಾ? ಎಂಬುದಾಗಿದೆ. ಕ್ರೆಡಿಟ್ ಇವರೇ ತೆಗೆದುಕೊಂಡು ರಾಜ್ಯ ಉದ್ಧಾರ ಮಾಡುವವರು ನಾವೇ ಎಂದು ಹೇಳಿಕೊಳ್ಳಲಿ. ಮೋದಿಯವರಂತೆ ಹೇಳಿಕೊಳ್ಳಲಿ. ಆದರೆ ಹಿಂದಿನ ಸರ್ಕಾರ ಮಾಡಿದ್ದಂತಹ ತೀರ್ಮಾನವನ್ನು ಇವರು ಪರಿಗಣಿಸಬೇಕಿತ್ತು ಎಂದರು.

ಸಿದ್ದರಾಮಯ್ಯ ಅವಧಿಯಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣ ದನ ಮೇಯಿಸುವ ಸ್ಥಿತಿಯಲ್ಲಿತ್ತು; ಸಂಸದ ಪ್ರತಾಪ್ ಸಿಂಹ ಲೇವಡಿ

ನಾಲ್ವಡಿ ಹೆಸರು ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆ ತಂದವನೇ ನಾನು



ಮೈಸೂರು,ಜು.23(ಪಿಎಂ)–ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಹೆಸರು ನಾಮಕರಣ ಮಾಡಬೇಕೆಂದು ಸರ್ಕಾರ ಮುಂದೆ ಪ್ರಸ್ತಾವನೆ ತಂದವನೇ ನಾನು. ಸಿದ್ದರಾಮಯ್ಯ ಅಧಿಕಾರಾವಧಿಯಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣವು ದನ ಮೇಯಿಸುವ ಸ್ಥಿತಿಯಲ್ಲಿತ್ತು. ಒಂದು ವಿಮಾನವೂ ಬರುತ್ತಿರಲಿಲ್ಲ. ಈಗ ಹೆಸರಿಡಲು ಪತ್ರ ಬರೆದಿದ್ದರು ಎನ್ನುತ್ತಾರೆ ಎಂದು ಸಂಸದ ಪ್ರತಾಪ್ ಸಿಂಹ ಲೇವಡಿ ಮಾಡಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹ ಆವರಣದಲ್ಲಿರುವ ತಮ್ಮ ಕಚೇರಿ ಬಳಿ ಶನಿವಾರ ಪ್ರೊ.ನಂಜರಾಜ ಅರಸ್ ಅವರ ಹೇಳಿಕೆ ಕುರಿತಂತೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಹಿಂದಿನ ಕಾಂಗ್ರೆಸ್ ಸರ್ಕಾರವೇ ನಾಲ್ವಡಿ ಹೆಸರು ನಾಮಕರಣಕ್ಕೆ ಪತ್ರ ಬರೆದಿತ್ತು ಎಂದು ಹೇಳುತ್ತಿರುವವರು ಮೈಸೂರಿನಲ್ಲಿರುವ ವಿಶ್ವ ಪ್ರಸಿದ್ಧ ಇತಿಹಾಸಕಾರರು, ಉದ್ದದ ಗಡ್ಡದವರು. ಅಂತಹವರಿಗೆ ಉತ್ತರ ಕೊಡಲಾಗದು ಎಂದು ವ್ಯಂಗ್ಯವಾಡಿದರು. ಸಿದ್ದರಾಮಯ್ಯ ಕಾಲದಲ್ಲಿ ಮೈಸೂರು ವಿಮಾನ ನಿಲ್ದಾಣ ದನ ಮೇಯಿಸುವ ಸ್ಥಿತಿಯಲ್ಲಿತ್ತು. ಅವರಿದ್ದಾಗ ಒಂದು ವಿಮಾನ ಬರುತ್ತಿರಲಿಲ್ಲ. ಈಗ ಹೆಸರಿಡಲು ಪತ್ರ ಬರೆದಿದ್ದರು ಎನ್ನುತ್ತಾರೆ. ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರವನ್ನು ಎಂಟು ಬಾರಿ ಪ್ರತಿನಿಧಿಸಿದ್ದ ಸಿದ್ದರಾಮಯ್ಯನವರು, ಎರಡು ಬಾರಿ ಉಪಮುಖ್ಯಮಂತ್ರಿ ಆಗಿದ್ದರೂ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಕುಡಿಯುವ ನೀರು ಕೊಡಲಾಗಲಿಲ್ಲ. ಆ ರೈಲ್ವೆ ನಿಲ್ದಾಣದ ಪಕ್ಕದಲ್ಲಿ ಆ ಕಾಂಗ್ರೆಸ್ ಕಚೇರಿ (ಮೈಸೂರಿನ ಕಾಂಗ್ರೆಸ್ ಕಚೇರಿ) ನೋಡಿ, ನಾಲ್ಕು ಗೋಡೆಯ ಮೇಲೆ ಒಂದು ಶೀಟು. ಅವರಿಗೆ ಒಂದು ಕಚೇರಿ ಕಟ್ಟಿಸಿಕೊಳ್ಳಲಾಗಲಿಲ್ಲ. ಅವರೇನು ಉದ್ಧಾರ ಮಾಡುತ್ತಾರೆ. ಒಂದು ವೇಳೆ ಇವರು ಘನಕಾರ್ಯ ಮಾಡಿದ್ದರೆ ಜನ ಏಕೆ ತಿರಸ್ಕಾರ ಮಾಡುತ್ತಿದ್ದರು ಎಂದು ಟೀಕಾಪ್ರಹಾರ ನಡೆಸಿದರು.

ವರದಕ್ಷಿಣೆ ಕಿರುಕುಳದಿಂದ ಗೃಹಿಣಿ ಆತ್ಮಹತ್ಯೆ

ಪತಿ ಸೇರಿ ಐವರಿಗೆ 7 ವರ್ಷ ಜೈಲು ಶಿಕ್ಷೆ

ಮೈಸೂರು, ಜು.23–ವರದಕ್ಷಿಣೆ ಕಿರುಕುಳ ನೀಡಿ ಗೃಹಿಣಿ ಸಾವಿಗೆ ಕಾರಣಕರ್ತರಾದ ಪತಿ ಸೇರಿ ಐವರಿಗೆ ಮೈಸೂರಿನ ಐದನೇ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಅವರು 7 ವರ್ಷ ಕಠಿಣ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ.

ಮೈಸೂರು ತಾಲೂಕು ಹಾರೋಹಳ್ಳಿ ಗ್ರಾಮದ ಸೋಮ ಅಲಿಯಾಸ್ ಹರೀಶ್ ಎಂಬಾತನ ಪತ್ನಿ ಮೇಘಾ ವರದಕ್ಷಿಣೆ ಕಿರುಕುಳದಿಂದ ಬೇಸತ್ತು ನೇಣಿಗೆ ಶರಣಾದವಳಾಗಿದ್ದು, ಈ ಪ್ರಕರಣದಲ್ಲಿ ಆಕೆಯ ಪತಿ ಸೋಮ, ಮಾವ ಈರಣ್ಣ, ಅತ್ತೆ ಸುಧಾಮಣಿ, ಸಂಬಂಧಿಕರಾದ ಮಹದೇವಸ್ವಾಮಿ ಮತ್ತು ಮೂರ್ತಿ ಶಿಕ್ಷೆಗೆ ಗುರಿಯಾದವರು.

ವಿವರ: ಹಾರೋಹಳ್ಳಿ ಗ್ರಾಮದ ಹೆಚ್.ಎನ್.ಮಹದೇವಸ್ವಾಮಿ ಮತ್ತು ವೀಣಾ ದಂಪತಿ ಪುತ್ರಿ ಮೇಘಾ ತನ್ನ ಎದುರು ಮನೆಯ ಸೋಮ ಅಲಿಯಾಸ್ ಹರೀಶ್ ಎಂಬಾತನನ್ನು ಪ್ರೀತಿಸಿ, ಮನೆ ತೊರೆದು ಆತನೊಂದಿಗೆ ಹೋಗಿ 2016ರ ಮೇ 24ರಂದು ತುಮಕೂರು ಜಿಲ್ಲೆ ಯಡಿಯೂರು ಸಿದ್ಧಲಿಂಗೇಶ್ವರ ದೇವಸ್ಥಾನದಲ್ಲಿ ಮದುವೆಯಾಗಿದ್ದರು. ಈ ಮದುವೆ ನಡೆದ ನಂತರ ಆಕೆಯ ತಂದೆ ಗ್ರಾಮ ತೊರೆದು ಮೈಸೂರಿನ ಜೆ.ಪಿ.ನಗರದಲ್ಲಿ ಕುಟುಂಬ ಸಮೇತ ವಾಸಮಾಡತೊಡಗಿದರು. 2017ರ ಫೆ.15ರಂದು ಮೇಘಾಳ ಪತಿ ಹಾಗೂ ಆತನ ಕುಟುಂಬದವರು, ಶಾಸ್ತ್ರೋಕ್ತವಾಗಿ ಮದುವೆಯಾಗಿದ್ದರೆ ನಿಮ್ಮ ಮನೆಯವರು ಐದಾರು ಲಕ್ಷ ರೂ. ಖರ್ಚು ಮಾಡಿ ಮದುವೆ ಮಾಡಬೇಕಿತ್ತು. ಅಲ್ಲದೇ ವರದಕ್ಷಿಣೆಯಾಗಿ ಸೈಟು, ಮೋಟಾರ್ ಸೈಕಲ್ ಹಾಗೂ ಚಿನ್ನಾಭರಣ ಕೊಡುತ್ತಿದ್ದರು. ಈಗ ಅವರಿಗೆ ಆ ಖರ್ಚು ಉಳಿದಿದ್ದು, ಗ್ರಾಮದಲ್ಲಿರುವ ನಿಮ್ಮ ತಂದೆ ಮನೆಯನ್ನು ನಿನ್ನ ಹೆಸರಿಗೆ ಬರೆಸಿಕೊಂಡು, 5 ಲಕ್ಷ ರೂ. ವರದಕ್ಷಿಣೆ ತರುವಂತೆ ಪೀಡಿಸಿದ್ದಾರೆ. ಈ ಸಂಬಂಧ 2017ರ ಮಾ.12ರಂದು ಹಾರೋಹಳ್ಳಿ ಗ್ರಾಮದಲ್ಲಿ ಪಂಚಾಯ್ತಿ ನಡೆದಿದ್ದು, ಆ ಪಂಚಾಯ್ತಿಯಲ್ಲಿ ಮೇಘಾಳ ತಂದೆ ಮಹದೇವ ಸ್ವಾಮಿ ಅವರು ತನ್ನ ಇನ್ನಿಬ್ಬರ ಮಕ್ಕಳ ವಿದ್ಯಾಭ್ಯಾಸ ಮದುವೆ ಮುಗಿದ ನಂತರ ಆಸ್ತಿಯನ್ನು ಮೇಘಾ ಸೇರಿದಂತೆ ಮೂವರು ಮಕ್ಕಳಿಗೂ ಭಾಗ ಮಾಡಿಕೊಡುವುದಾಗಿ ತಿಳಿಸಿದಾಗ ಆಕೆಯ ಗಂಡನ ಮನೆಯವರು ಕೂಗಾಡಿಕೊಂಡು ಪಂಚಾಯ್ತಿಯಿಂದ ಹೊರ ಹೋಗಿದ್ದಾರೆ. ಮರು ದಿನ ಬೆಳಗ್ಗೆ ಮೇಘಾ ಗಂಡನ ಮನೆಯಲ್ಲೇ ನೇಣಿಗೆ ಶರಣಾಗಿದ್ದು, ಈ ಸಂಬಂಧ ಮಹದೇವಸ್ವಾಮಿ ಜಯಪುರ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು. ಅಂದಿನ ಮೈಸೂರು ಗ್ರಾಮಾಂತರ ಉಪ ವಿಭಾಗದ ಡಿವೈಎಸ್‌ಪಿ ವಿಕ್ರಂ ಅಮಟೆ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಐವರಿಗೂ 7 ವರ್ಷ ಕಠಿಣ ಶಿಕ್ಷೆ ಹಾಗೂ ತಲಾ 5 ಸಾವಿರ ರೂ. ದಂಡ ವಿಧಿಸಿದ್ದು, ವಸೂಲಿಯಾದ ದಂಡದ ಹಣದಲ್ಲಿ ಮೇಘಾ ತಂದೆ ಮಹದೇವಸ್ವಾಮಿಯವರಿಗೆ 10 ಸಾವಿರ ರೂ. ನೀಡಬೇಕೆಂದು ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ನಾಗಪ್ಪ ಸಿ. ನಾಕಮನ್ ವಾದ ಮಂಡಿಸಿದ್ದರು.

ವರದಕ್ಷಿಣೆ ಕಿರುಕುಳದಿಂದ ಗೃಹಿಣಿ ಸಾವು

9 ಮಂದಿ ವಿರುದ್ಧ ಪ್ರಕರಣ ದಾಖಲು

ಕ್ರೈಂ ಬಾಕ್ಸ್

ಕೆ.ಆರ್.ನಗರ, ಜು.23–ವರದಕ್ಷಿಣೆ ಕಿರುಕುಳ ನೀಡಿ ಗೃಹಿಣಿ ಸಾವಿಗೆ ಕಾರಣರಾಗಿದ್ದಾರೆ ಎಂಬ ಆರೋಪದ ಮೇರೆಗೆ ಆಕೆಯ ಪತಿ, ಸಂಬಂಧಿಕನಾದ ಮೈಸೂರು ಸಿಎಆರ್ ಎಸಿಪಿ ಸೇರಿದಂತೆ 9 ಮಂದಿ ವಿರುದ್ಧ ನ್ಯಾಯಾಲಯದ ಆದೇಶದ ಮೇರೆಗೆ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಡ್ಯ ಜಿಲ್ಲೆ ಕೃಷ್ಣರಾಜಸಾಗರ ಗ್ರಾಮದ ಬಿ.ಕೆ.ಸ್ವಾಮಿ ಎಂಬುವರ ಪುತ್ರಿ ಬಿಂದುಶ್ರೀ(25) ವರದಕ್ಷಿಣೆ ಕಿರುಕುಳದಿಂದ ಆತ್ಮಹತ್ಯೆಗೆ ಶರಣಾದವಳಾಗಿದ್ದು, ಈ ಸಂಬಂಧ ಆಕೆಯ ಪತಿ ಮಂಜುನಾಥ್(29), ಮಾವ ಡಿ.ಪಿ.ಪಾರ್ಥೇಗೌಡ(60), ಅತ್ತೆ ಭಾಗ್ಯ(55), ಪತಿಯ ಅಕ್ಕಂದಿರಾದ ಶೋಭಾ(42), ಉಮಾ(37), ದೀಪಿಕಾ(32), ಭಾವಂದಿರಾದ ಮೈಸೂರು ಸಿಎಆರ್ ಎಸಿಪಿ ಬಸವರಾಜು(38), ಕಾಳಪ್ಪ(47), ಸ್ವಾಮಿಗೌಡ(42) ಆರೋಪಕ್ಕೆ ಗುರಿಯಾಗಿರುವವರು.

ವಿವರ: ಕೆಆರ್‌ಎಸ್ ಗ್ರಾಮದ ಬಿ.ಕೆ.ಸ್ವಾಮಿ ಪುತ್ರಿ ಬಿಂದುಶ್ರೀ ಅವರನ್ನು 2019ರ ಮೇ 5ರಂದು ಕೆಆರ್‌ಎಸ್‌ನಲ್ಲಿರುವ ಗಾಯಿತ್ರಿ ಕಲ್ಯಾಣ ಮಂಟಪದಲ್ಲಿ ಕೆ.ಆರ್.ನಗರ ತಾಲೂಕು ದೊಡ್ಡಕೊಪ್ಪಲು ಗ್ರಾಮದ ಪಾರ್ಥೇಗೌಡ ಪುತ್ರ ಮಂಜುನಾಥ್ ಅವರಿಗೆ ಮದುವೆ ಮಾಡಿಕೊಡಲಾಗಿತ್ತು. ಈ ವೇಳೆ 150 ಗ್ರಾಂ ಚಿನ್ನ ಮತ್ತು 5 ಲಕ್ಷ ರೂ. ವರದಕ್ಷಿಣೆ ನೀಡಲಾಗಿತ್ತು. ಮದುವೆಯಾದ ಸ್ವಲ್ಪ ದಿನದಲ್ಲೇ ಪತಿ ಹಾಗೂ ಆತನ ಮನೆಯವರು ಹೆಚ್ಚಿನ ವರದಕ್ಷಿಣೆಗಾಗಿ ಬಿಂದುಶ್ರೀಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿದ್ದು, ಅದನ್ನು ತಾಳಲಾರದೇ ಬಿಂದುಶ್ರೀ ಕಳೆದ ಮಾ.12ರಂದು ಬೆಳಗ್ಗೆ ಗಂಡನ ಮನೆಯಲ್ಲೇ ನೇಣಿಗೆ ಶರಣಾದರು. ಈ ಸಂಬಂಧ ಆಕೆಯ ತಂದೆ ಸ್ವಾಮಿ ನ್ಯಾಯಾಲಯದಲ್ಲಿ ದಾಖಲಿಸಿದ್ದ ಖಾಸಗಿ ದೂರಿನ ಮೇರೆಗೆ ನ್ಯಾಯಾಲಯ ನೀಡಿದ ಆದೇಶದಂತೆ ಒಂಭತ್ತು ಮಂದಿ ವಿರುದ್ಧ ಕೆ.ಆರ್.ನಗರ ಠಾಣೆ ಪೊಲೀಸರು ಜು.21ರಂದು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕಾರು ಡಿಕ್ಕಿ: ಮಹಿಳೆ ಸಾವು

ಮೈಸೂರು, ಜು.23–ಅಡ್ಡಾದಿಡ್ಡಿ ಚಲಿಸಿದ ಕಾರು ಡಿಕ್ಕಿ ಹೊಡೆದ ಪರಿಣಾಮ ಮಹಿಳೆಯೋರ್ವರು ಮೃತಪಟ್ಟು ಇಬ್ಬರು ಮಹಿಳೆಯರು ಗಾಯಗೊಂಡ ಘಟನೆ ಮೈಸೂರು–ಹುಣಸೂರು ಮುಖ್ಯ ರಸ್ತೆ, ಪಡುವಾರಹಳ್ಳಿಯ ಮೂಳೆ ಮತ್ತು ಕೀಲು ಆಸ್ಪತ್ರೆ ಜಂಕ್ಷನ್‌ನಲ್ಲಿ ಜು.21ರಂದು ಬೆಳಗ್ಗೆ ಸಂಭವಿಸಿದೆ. ವಿನಾಯಕನಗರ ನಿವಾಸಿ ರಾಜೇಶ್ವರಿ(53) ಅಪಘಾತದಲ್ಲಿ

ಮತ್ತಿಬ್ಬರಿಗೆ ತೀವ್ರ ಗಾಯ

ಮೃತಪಟ್ಟವರಾಗಿದ್ದು, ವಿನಾಯಕನಗರ 2ನೇ ಕ್ರಾಸ್‌ನ ಆರ್.ಉಮಾ(26) ಮತ್ತು ಗೌರಿಶಂಕರನಗರದ ಪ್ರೇರಣಾ(23) ಗಾಯಗೊಂಡಿದ್ದಾರೆ.

ಎಸ್‌ವಿಇಐ ಕಾಲೇಜಿನಲ್ಲಿ ಆಯಾ ಆಗಿ ಕೆಲಸ ಮಾಡುತ್ತಿರುವ ರಾಜೇಶ್ವರಿ ತಮ್ಮ ಬಡಾವಣೆಯವರೇ ಆದ ಉಮಾ ಅವರೊಂದಿಗೆ ಕಾಲೇಜಿನ ಬಸ್‌ಗಾಗಿ ಕಾಯುತ್ತಾ ಪಡುವಾರಹಳ್ಳಿ ಮೂಳೆ ಮತ್ತು ಕೀಲು ಆಸ್ಪತ್ರೆ ಜಂಕ್ಷನ್ ಬಳಿ ಜು.21ರಂದು ಬೆಳಗ್ಗೆ 8 ಗಂಟೆ ಸುಮಾರಿನಲ್ಲಿ ನಿಂತಿದ್ದಾರೆ. ಈ ಹುಣಸೂರು ಕಡೆಯಿಂದ ಅತೀ ವೇಗವಾಗಿ ಬಂದ ಕಾರು (ಕೆಎ 03 ಎಡಿ 7445) ಜಂಕ್ಷನ್ ಬಳಿ ಸ್ಕೂಟರ್ (ಕೆಎ 09 ಹೆಚ್‌ಡಬ್ಲ್ಯೂ 8621)ಗೆ ಡಿಕ್ಕಿ ಹೊಡೆದ ನಂತರ ಬಸ್‌ಗಾಗಿ ಕಾಯುತ್ತಾ ರಾಜೇಶ್ವರಿ ಹಾಗೂ ಉಮಾ ಅವರಿಗೂ ಡಿಕ್ಕಿ ಹೊಡೆದು ಮೂಳೆ ಮತ್ತು ಕೀಲು ಆಸ್ಪತ್ರೆಯ ಕಾಂಪೌಂಡ್‌ಗೆ ಗುದ್ದಿ ನಿಂತಿದೆ. ತೀವ್ರವಾಗಿ ಗಾಯಗೊಂಡ ರಾಜೇಶ್ವರಿ ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟರೆ, ಉಮಾ ಅವರು ಖಾಸಗಿ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ಕೂಟರ್ ಚಾಲನೆ ಮಾಡುತ್ತಿದ್ದ ಪ್ರೇರಣಾ ಮತ್ತೊಂದು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಈ ಸಂಬಂಧ ವಿವಿ ಮರಂ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಲಾಭದ ಆಮಿಷ ತೋರಿ ವೈದ್ಯೆಗೆ 2.85 ಲಕ್ಷ ವಂಚನೆ

ಮೈಸೂರು, ಜು.23–ಟ್ರೇಡಿಂಗ್ ಬಿಜಿನೆಸ್‌ನಲ್ಲಿ ಹಣ ಹೂಡಿದರೆ ಲಾಭ ಬರುತ್ತದೆ ಎಂದು ವಾಟ್ಸಾಪ್ ಸಂದೇಶ ರವಾನಿಸಿ ವೈದ್ಯೆಗೆ 2.85 ಲಕ್ಷ ರೂ. ಆನ್‌ಲೈನ್ ಮೂಲಕ ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಮಿಷನ್ ಆಸ್ಪತ್ರೆ ಹಿಂಭಾಗ ವಾಸವಿರುವ ವೈದ್ಯೆ ಎನ್.ವಿದ್ಯಾನಂದಿನಿ(25) ವಂಚನೆಗೊಳಗಾದವರಾಗಿದ್ದು, ಟ್ರೇಡಿಂಗ್ ಬಿಜಿನೆಸ್ ಬಗ್ಗೆ ಇವರ ಮೊಬೈಲ್‌ಗೆ ವಾಟ್ಸಾಪ್ ಸಂದೇಶ ಬಂದಿದೆ. ಈ ಬಿಜಿನೆಸ್‌ನಲ್ಲಿ ಹೂಡಿಕೆ ಮಾಡಿ ಟಾಸ್ಕ್ ಮಾಡಿದರೆ ಕಮಿಷನ್ ದೊರೆಯುತ್ತದೆ ಎಂದು ವಂಚಕರು ಕಳುಹಿಸಿದ ಲಿಂಕ್ ಮೇಲೆ ಕ್ಲಿಕ್ ಮಾಡಿದ ವೈದ್ಯೆ 2,85,968 ರೂ. ಹೂಡಿಕೆ ಮಾಡಿದ್ದಾರೆ. ಆದರೆ ಅವರಿಗೆ ಕಮಿಷನ್ ಆಗಲೀ, ಹೂಡಿಕೆ ಮಾಡಿದ ಹಣವಾಗಲೀ ಬಂದಿಲ್ಲ. ಈ ಸಂಬಂಧ ಮೈಸೂರು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್‌ಜೆಸಿಇ ಕ್ಯಾಂಪಸ್‌ನಲ್ಲಿ 7 ಬ್ಯಾಟ್‌ಗಳ ಕಳವು

ಮೈಸೂರು, ಜು.23–ಮೈಸೂರಿನ ಎಸ್‌ಜೆಸಿಇ ಕ್ಯಾಂಪಸ್‌ನ ಕ್ರೀಡಾಂಗಣದ ಪೆವಿಲಿಯನ್ ರೂಂನಲ್ಲಿ ಇಟ್ಟಿದ್ದ ಕ್ರಿಕೆಟ್ ಬ್ಯಾಟ್‌ಗಳು ಕಳುವಾಗಿರುವ ಬಗ್ಗೆ ವರದಿಯಾಗಿದೆ.

ಮುಂದಿನ ತಿಂಗಳು ನಡೆಯಲಿರುವ ಮಹಾರಾಜಾ ಟ್ರೋಫಿ ಕೆಎಸ್‌ಸಿಎ ಟಿ–20 ಪಂದ್ಯಾವಳಿಗಾಗಿ ಜುಲೈ 19ರಂದು ಸಂಜೆ 6 ಗಂಟೆವರೆಗೂ ಆಟಗಾರರು ಎಸ್‌ಜೆಸಿಇ ಕ್ಯಾಂಪಸ್‌ನ ಕ್ರಿಕೆಟ್ ಮೈದಾನದಲ್ಲಿ ಅಭ್ಯಾಸ ನಡೆಸಿ, ಅಲ್ಲಿನ ಪೆವಿಲಿಯನ್ ರೂಂನಲ್ಲಿ 25 ಕ್ರಿಕೆಟ್ ಕಿಟ್‌ಗಳನ್ನು ಇಟ್ಟು ಬೀಗ ಹಾಕಿದ ನಂತರ ಕೀಯನ್ನು ಸೆಕ್ಯೂರಿಟಿಗೆ ನೀಡಿದ್ದರು. ಮರು ದಿನ (ಜು.20) ಆಟಗಾರರು ಬಂದು ಸೆಕ್ಯೂರಿಟಿಯಿಂದ ಕೀ ಪಡೆದು ರೂಂನಲ್ಲಿ ನೋಡಿದಾಗ ತಲಾ 30 ಸಾವಿರ ರೂ. ಮೌಲ್ಯದ 7 ಕ್ರಿಕೆಟ್ ಬ್ಯಾಟ್‌ಗಳು ಕಳುವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಮೈಸೂರು ವಲಯ ಸಂಚಾಲಕ ಎಸ್. ಸುಧಾಕರ್ ರೈ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಒಂದನೇ ಪುಟದಿಂದ

ಗ್ರಂಥ ಬಿಡುಗಡೆ

ಪೂರ್ವಭಾವಿ ಕಾರ್ಯಕ್ರಮದಂತೆ ಅದ್ದೂರಿಯಾಗಿ ಇಂದಿನ ಗ್ರಂಥ ಬಿಡುಗಡೆ ಕಾರ್ಯಕ್ರಮ ನಡೆದದ್ದು ವಿಶೇಷ. 436 ಪುಟಗಳ ಗ್ರಂಥವು ಸಿದ್ಧರಾಮಯ್ಯನವರ ಹೋರಾಟ, ಸಾಧನೆಗಳು, ನೀತಿ ನಿರ್ಧಾರಗಳು ಮತ್ತು ಅವರು ಮುಖ್ಯ ಮಂತ್ರಿಯಾಗಿದ್ದ ಅವಧಿಯಲ್ಲಿನ ಜನಪರ ಕಾರ್ಯಕ್ರಮಗಳ ಕುರಿತಂತೆ ರಾಜ್ಯಾದ್ಯಂತದ 27 ಲೇಖಕರು ಬರೆದ ಲೇಖನಗಳನ್ನು ಒಳಗೊಂಡಿದೆ. ಇದೇ ಸಂದರ್ಭದಲ್ಲಿ ಗ್ರಂಥ ಪ್ರಕಟಣೆಗೆ ಲೇಖನಗಳನ್ನು ನೀಡಿದ ಎಲ್ಲಾ ಲೇಖಕರನ್ನು ಗಣ್ಯರು ಸನ್ಮಾನಿ ಸಿದರು. ಕಾರ್ಯಕ್ರಮದ ಆರಂಭದಲ್ಲಿ ಡಾ.ಕೃಪಾಫಡ್ಕೆ ಶಿಷ್ಯವೃಂದದಿಂದ ರೈತ ಗೀತ ನೃತ್ಯ ನಡೆಯಿತು. ಪಿಚ್ಚಳ್ಳಿ ಶ್ರೀನಿವಾಸ್ ಅವರು ಸಂವಿಧಾನ ಪೀಠಿಕೆ ಗಾಯನ ಗಮನ ಸೆಳೆಯಿತು. ವಿಶ್ರಾಂತ ಕುಲಪತಿ ಡಾ.ಸಬೀಹಾ ಭೂಮಿಗೌಡ ಗ್ರಂಥ ಪರಿಚಯ ಮಾಡಿಕೊಟ್ಟರು. ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತರಿದ್ದರು. ವಿಧಾನ ಪರಿಷತ್ ಮಾಜಿ ಸಭಾಪತಿ ಡಾ.ಬಿ.ಎಲ್.ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಗ್ರಂಥ ಸಂಪಾದಕರಾದ ಕಾ.ತ.ಚಿಕ್ಕಣ್ಣ, ಲಕ್ಷ್ಮಣ ಕೊಡಸೆ, ಸಂಯೋಜಕ ಎಂ.ರಾಮಯ್ಯ, ಕಾರ್ಯದರ್ಶಿ ಡಾ. ಪ್ರಜ್ವಲ್ ಜಿ.ರಾಜ್, ಮಾಜಿ ಸಂಸದರು, ಹಾಲಿ ಮತ್ತು ಮಾಜಿ ಶಾಸಕರು, ಕಾಂಗ್ರೆಸ್ ಮುಖಂಡರು, ಇನ್ನಿತರರು ಉಪಸ್ಥಿತರಿದ್ದರು.

ತನಿಖಾ ತಂಡದಿಂದ ತನಿಖೆ

ನಿರ್ಣಯದಂತೆ ಮುಖ್ಯಮಂತ್ರಿಯವರು ಇತ್ತೀಚಿನ ನೇಮಕಾತಿಗಳಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಕೇಂದ್ರ ಗೃಹ ಹಾಗೂ ಹಣಕಾಸು ಇಲಾಖೆಯನ್ನು ಕೋರಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ಲೋಕಸೇವಾ ಆಯೋಗವಲ್ಲದೆ ಲೋಕೋಪಯೋಗಿ, ಇಂಧನ, ಉನ್ನತ ಶಿಕ್ಷಣ, ಗೃಹ ಇಲಾಖೆ ಸೇರಿದಂತೆ ಪ್ರಮುಖ ಇಲಾಖೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನೇಮಕಾತಿ ನಡೆದಿದೆ. ಕೆಲವು ಪ್ರಕರಣಗಳಲ್ಲಿ ಹಗರಣ ನಡೆದಿದ್ದರೂ, ಅವು ಬಯಲಾಗಿಲ್ಲ. ಆದರೆ ನೇಮಕಾತಿಗೊಂಡ ಶೇ 50ಕ್ಕಿಂತ ಹೆಚ್ಚು ಮಂದಿ ಮಧ್ಯವರ್ತಿಗಳು ಮತ್ತು ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ಹಣ ಲಂಚ ನೀಡಿ ನೇಮಕಗೊಂಡಿದ್ದಾರೆ. ಇಂತಹ ಭ್ರಷ್ಟಾಚಾರಗಳಿಗೆ ಕಡಿವಾಣ ಹಾಕಲು ಕೇಂದ್ರ ಮುಂದಾಗಿದೆ. ಪಿಎಸ್ಐ ಹಗರಣ ಹಾಗೂ ಗುತ್ತಿಗೆ ನೀಡುವಲ್ಲಿ ಕಮಿಷನ್ ಇಡೀ ರಾಷ್ಟ್ರವನ್ನು ಗಮನ ಸೆಳೆದು, ಬಿಜೆಪಿ ಪಕ್ಷಕ್ಕೆ ಕಪ್ಪು ಚುಕ್ಕೆ ಇಟ್ಟಿತ್ತು.

ಫಲಾನುಭವಿಗಳಿಗೆ ಒದಗಿಸಿ

ಹಿನ್ನೆಲೆಯಲ್ಲಿ 2022ರೊಳಗೆ ಸಾಧ್ಯವಾದಷ್ಟು ಪೂರೈಸುವ ನಿಟ್ಟಿನಲ್ಲಿ ರಾಜ್ಯಕ್ಕೆ ಲಕ್ಷಾಂತರ ಮನೆಗಳನ್ನು ಮಂಜೂರು ಮಾಡಿದ್ದಾರೆ. ಅದರಂತೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಈಗಿನಿಂದಲೇ ಮನೆ ನಿರ್ಮಾಣ ಕಾರ್ಯ ಆರಂಭಿಸಿ, 2023ರ ಮೊದಲೆರಡು ತಿಂಗಳೊಳಗೆ ಫಲಾನುಭವಿಗಳಿಗೆ ಹಂಚಿಕೆಯಾಗಬೇಕು. ಇದಕ್ಕೆ ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡಲಿದೆ. ಅಲ್ಲದೆ ಜಾಗ ಗುರುತಿಸಿದರೆ ಇನ್ನೂ ಸಾವಿರ ಮನೆಗಳ ನಿರ್ಮಾಣಕ್ಕೆ ನೆರವು ನೀಡಲು ಸಿದ್ಧವಿರುವುದಾಗಿ ಭರವಸೆ ನೀಡಿದರು.

ರಿಯಾಯ್ತಿ ಭರವಸೆ: ಬಡವರಿಗೆ, ದುಡಿಯುವ ವರ್ಗದ ಎಲ್ಲರಿಗೂ ಸೂರು ಕಲ್ಪಿಸಬೇಕೆಂಬುದುದು ಪ್ರಧಾನಿ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಕಲ್ಪ. ಈ ನಿಟ್ಟಿನಲ್ಲಿ ನಾವೆಲ್ಲಾ ಬಡವರಿಗಾಗಿ ಕೆಲಸ ಮಾಡಬೇಕು. ಈ ಹಿಂದೆ ಮನೆ ಕೊಡಿಸಲು ಹಣ ಪಡೆದಿರುವ ಮಾಹಿತಿ ಇದೆ. ಆದರೆ ಈ ಬಾರಿ ಒಂದು ಸಣ್ಣ ಅಪಚಾರವಿಲ್ಲದೆ ಅತ್ಯಂತ ಪಾರದರ್ಶಕವಾಗಿ ಫಲಾನುಭವಿಗಳ ಆಯ್ಕೆ ಮಾಡಿರುವುದಾಗಿ ತಿಳಿದಿದ್ದೇನೆ. ಇದಕ್ಕಾಗಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಹಾಗೂ ಸಂಸದ ಪ್ರತಾಪ್ ಸಿಂಹಗೆ ಅಭಿನಂದನೆ ತಿಳಿಸುತ್ತೇನೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೆರವಿನಿಂದ ಸಿಗುವ ಸಬ್ಸಿಡಿ ಹೊರತುಪಡಿಸಿ ಫಲಾನುಭವಿಗಳು ಪಾವತಿಸಬೇಕಾದ ಹಣದಲ್ಲೂ ರಿಯಾಯ್ತಿ ಕಲ್ಪಿಸುವ ಚಿಂತನೆಯಿದೆ. ಮೂಲಸೌಕರ್ಯಕ್ಕೆ ಸರ್ಕಾರವೇ ಭರಿಸಿದರೆ ನಿಮಗೆ 40–45 ಸಾವಿರ ರೂ. ಕಡಿಮೆಯಾಗಬಹುದು. ಬ್ಯಾಂಕ್ ಸಾಲ ಸೌಲಭ್ಯದಲ್ಲಿ ಏನಾದರೂ ತೊಂದರೆಯಾದರೆ ಗಮನಕ್ಕೆ ತನ್ನಿ. ಮನೆ ಹಂಚಿಕೆಯಾದಾಗಿನಿಂದ 3 ವರ್ಷ ನಿರ್ವಹಣೆ ಜವಾಬ್ದಾರಿಯನ್ನು ಸರ್ಕಾರವೇ ನೋಡಿಕೊಳ್ಳಲಿದೆ. ಪ್ರಾರಂಭಿಕ ಶೇ.10ರಷ್ಟು ಮೊತ್ತವನ್ನು ಕಂತಿನ ರೂಪದಲ್ಲಿ ಮೂರು ತಿಂಗಳೊಳಗೆ ಪಾವತಿಸಿ. ಯಾರೂ ಕೂಡ ಮನೆಯನ್ನು ಮಾರಾಟ ಮಾಡಿಕೊಳ್ಳಬೇಡಿ ಎಂದು ಸಲಹೆ ನೀಡಿದರು.

ಅಧಿಕಾರ–ಬಡತನ ಶಾಶ್ವತವಲ್ಲ: ಯಾರಿಗೂ ಅಧಿಕಾರವೂ ಶಾಶ್ವತವಲ್ಲ, ಬಡತನವೂ ಶಾಶ್ವತವಲ್ಲ. ಅವಕಾಶವಿದ್ದಾಗ ಒಳ್ಳೆಯ ಕೆಲಸ ಮಾಡಬೇಕು. ಕೊರಗ ಜನಾಂಗದವರಿಗೆ 437 ನಿವೇಶನ ಮಂಜೂರು ಮಾಡಿ, ಕೇಂದ್ರ ಹಾಗೂ ರಾಜ್ಯದ ನೆರವಿನಿಂದ ಮನೆ ನಿರ್ಮಾಣಕ್ಕೆ 5 ಲಕ್ಷ ರೂ. ಕಲ್ಪಿಸುವ ಮೂಲಕ ನಿನ್ನೆಯಷ್ಟೇ ಹೊಸ ಅಧ್ಯಾಯ ಆರಂಭಿಸಿದ್ದೇವೆ. ಇದಕ್ಕೆ ಪ್ರಧಾನಿ ಮೋದಿ ಅವರ ಕಾರ್ಯಕ್ರಮವೇ ಕಾರಣ. ವಿವಿಧ ಯೋಜನೆಗಳಡಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ನೀಡಲಾಗುವ ನೆರವನ್ನು 2 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಗ್ರಾಮೀಣ ಭಾಗದಲ್ಲಿ 5 ಲಕ್ಷ ಮನೆ ನಿರ್ಮಿಸಿದ್ದು, ವರ್ಷಾಂತ್ಯದಲ್ಲಿ ಇನ್ನೂ 3 ಲಕ್ಷ ಮನೆ ನಿರ್ಮಿಸಲಾಗುವುದು ಎಂದು ತಿಳಿಸಿದರು.

ಸೋಮಣ್ಣ ಕಾರಣ: ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಕ್ಷೇತ್ರದ ಆಶ್ರಯ ಸಮಿತಿ ಕಚೇರಿಗೆ 15 ವರ್ಷದಿಂದ ಬಿದ್ದಿದ್ದ ಬೀಗ ತೆರೆದು ಹೊಸ ಅಧ್ಯಾಯ ಬರೆಯಲು ಸಚಿವ ವಿ.ಸೋಮಣ್ಣನವರೇ ಪ್ರಮುಖ ಕಾರಣ. 1983ರಿಂದಲೂ ನಮ್ಮಿಬ್ಬರ ಸ್ನೇಹ ಗಟ್ಟಿಯಾಗಿದೆ. ಹಿಂದೆ ನಾನು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷನಾಗಿದ್ದಾಗಲೂ ಸೋಮಣ್ಣ ವಸತಿ ಸಚಿವರಾಗಿದ್ದರು. ರಾಜ್ಯದಲ್ಲಿ ವಸತಿ ಸೌಲಭ್ಯದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.50ರಷ್ಟು ಮೀಸಲಾತಿ, ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಶೇ.22.10ರ ಕಾರ್ಯಕ್ರಮ ಜಾರಿಯಾಗಿದ್ದೇ ಇವರ ಕಾಲದಲ್ಲಿ. ವಸತಿ ಸಚಿವರಾಗಿ ಬೇರೆ ಯಾರೂ ಸೋಮಣ್ಣನವರಷ್ಟು ಕೆಲಸ ಮಾಡಿಲ್ಲ. 18ರ ಯುವಕನಂತೆ ಲವಲವಿಕೆಯಿಂದ ಜನರ ಕೆಲಸ ಮಾಡುತ್ತಿದ್ದಾರೆ. ಪ್ರಧಾನಿ ಮೋದಿ, ಸಿಎಂ ಬೊಮ್ಮಾಯಿ ಹಾಗೂ ವಿ.ಸೋಮಣ್ಣನವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. 70 ಸಾವಿರ ರೂ. ಪ್ರಾರಂಭಿಕ ಮೊತ್ತವನ್ನು ಕಟ್ಟಿ, ರಶೀದಿ ಪಡದುಕೊಳ್ಳಿ. ವಿಮಾನ ನಿಲ್ದಾಣದ ಪಕ್ಕದಲ್ಲೇ ಇರುವುದರಿಂದ ಮನೆಯ ಮೌಲ್ಯ ತುಂಬಾ ಹೆಚ್ಚಾಗುತ್ತದೆ ಯಾರೂ ಮಾರಾಟ ಮಾಡಬೇಡಿ ಎಂದು ಫಲಾನುಭವಿಗಳಿಗೆ ಕಿವಿಮಾತು ಹೇಳಿದರು.

ಸಾಂಘಿಕ ಪ್ರಯತ್ನದ ಫಲ: ಸಭಾ ಕಾರ್ಯಕ್ರಮ ಉದ್ಘಾಟಿಸಿದ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಯೋಜನೆಯಲ್ಲಿ ಕ್ಷೇತ್ರದ ಬಡವರಿಗೆ ಮಾತ್ರ ಮನೆಗಳನ್ನು ನೀಡುತ್ತಿರುವುದು ಇದೇ ಮೊದಲು. 2446 ಮನೆಗಳ ಯೋಜನೆ ಸಚಿವ ವಿ.ಸೋಮಣ್ಣ ಹಾಗೂ ಶಾಸಕ ಜಿ.ಟಿ.ದೇವೇಗೌಡರ ಸ್ನೇಹ, ವಿಶ್ವಾಸ ಹಾಗೂ ಸಾಂಘಿಕ ಪ್ರಯತ್ನದ ಪ್ರತಿಫಲ. ಕ್ಯಾಬಿನೆಟ್ ನಿರ್ಧಾರದೊಂದಿಗೆ ವಸತಿ ಯೋಜನೆ ಫಲಾನುಭವಿಗಳಿಗೆ ಸೋಮಣ್ಣ ಹಕ್ಕುಪತ್ರ ಒದಗಿಸಿದ್ದಾರೆ. ಈವರೆಗೆ ಯಾರೂ ಈ ನಿಟ್ಟಿನಲ್ಲಿ ಪ್ರಯತ್ನಿಸಿರಲಿಲ್ಲ. ಜಿಟಿಡಿ ಹಾಗೂ ಸೋಮಣ್ಣನವರ ಸಾಂಘಿಕ ಪ್ರಯತ್ನದಿಂದ ಇಲವಾಲ ಸಮೀಪ ಹಿಂದೆ ಕೆಹೆಚ್‌ಬಿ ಲೇಔಟ್ ಆಯಿತು. ಅದಕ್ಕಾಗಿ ಭೂಮಿ ನೀಡಿದವರಿಗೆ ಅಂತಃಕರಣದಿಂದ ಇತ್ತೀಚೆಗೆ ನಿವೇಶನವನ್ನೂ ನೀಡಿದ್ದಾರೆ. ಹಳೇ ಉಂಡುವಾಡಿ ಕುಡಿಯುವ ನೀರಿನ ಯೋಜನೆಯೂ ಅನುಷ್ಠಾನವಾಗಲಿದೆ. ಇವರಿಬ್ಬರ ಸಾರಥ್ಯದಲ್ಲಿ ಇಡೀ ಕ್ಷೇತ್ರಕ್ಕೆ ವಸತಿ ಹಾಗೂ ಕುಡಿಯುವ ನೀರು ಸೌಲಭ್ಯ ಕಲ್ಪಿತವಾಗಲಿದೆ ಎಂದು ತಿಳಿಸಿದರು. ಫಲಾನುಭವಿಗಳ ಪರವಾಗಿ ಶಶಿರೇಖಾ ಹಾಗೂ ಕಲಾವಿದೆ ಸರೋಜಿನಿ ಅವರು ಮಾತನಾಡಿ, ಸಂತಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಮೇಯರ್ ಸುನಂದಾ ಪಾಲನೇತ್ರ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ, ಮೈಸೂರು ನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ, ಹೆಚ್ಚುವರಿ ಆಯುಕ್ತರಾದ ಎಂ.ಜೆ.ರೂಪ, ಡಾ.ಎಂ.ದಾಸೇಗೌಡ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ನಿಕಟಪೂರ್ವ ಅಧ್ಯಕ್ಷ ಎಂ.ಶಿವಣ್ಣ, ಮೈಸೂರು ತಾಪಂ ಮಾಜಿ ಸದಸ್ಯ ಹನುಮಂತು, ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಬಸವರಾಜು, ಪ್ರಧಾನ ವ್ಯವಸ್ಥಾಪಕ ಮಹದೇವ ಪ್ರಸಾದ್, ನಗರಪಾಲಿಕೆ ಸದಸ್ಯರಾದ ರಮೇಶ್, ಸವಿತಾ, ನಿರ್ಮಲಾ, ಲಕ್ಷ್ಮಿ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಬಿಜೆಪಿ ಮುಖಂಡರಾದ ಮಹದೇವಯ್ಯ, ಯಶಸ್ವಿನಿ ಸೋಮಶೇಖರ್, ಮಹದೇವಸ್ವಾಮಿ, ಜಿ.ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಬಣ್ಣಿಸಿದ ವಿ.ಸೋಮಣ್ಣ

ಸಾಧ್ಯವಿಲ್ಲ. ಇವರಿಬ್ಬರು ಮಾನವೀಯತೆ ಸಂದೇಶ ಸಾರುವ ಈ ಕಾರ್ಯಕ್ರಮದ ಕೇಂದ್ರಬಿಂದುಗಳಾಗಿದ್ದಾರೆ ಎಂದರು. ಇಡೀ ದೇಶದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಅವರು ಬೆಂಗಳೂರಿನಲ್ಲಿ ಮಂಗಳಮುಖಿಯರಿಗೆ ಮನೆಗಳನ್ನು ಕಲ್ಪಿಸಿದ್ದಾರೆ. ಆ ಕೆಲಸವನ್ನು ಜಿಟಿಡಿ ಹಾಗೂ ಸಿಂಹ ಮೈಸೂರಿನಲ್ಲಿ ಮಾಡಿದ್ದಾರೆ. ಸಣ್ಣ ಲೋಪವೂ ಇಲ್ಲದಂತೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಶ್ರಮಿಸಿದ್ದಾರೆ. ತಾಯಿ ಚಾಮುಂಡೇಶ್ವರಿ ಕೃಪೆ ಇರುವ ಕ್ಷೇತ್ರದ ಶಾಸಕ ಜಿಟಿಡಿ, ಆಂಜನೇಯ ಸಾಮ್ರಾಜ್ಯದ ಮುಖ್ಯಸ್ಥ. ಜಿಟಿಡಿ 25ರ ಯುವಕನಂತೆ ಅತ್ಯಂತ ಲವಲವಿಕೆಯಿಂದ ಜನರಿಗಾಗಿ ಶ್ರಮಿಸುತ್ತಿದ್ದಾರೆ. ನನ್ನ ಪ್ರೀತಿಯ ಸೋದರ ಪ್ರತಾಪ್ ಸಿಂಹ ಅವರೂ ಮೈಸೂರಿನ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸುತ್ತಿದ್ದಾರೆ ಎಂದು ಕೊಂಡಾಡಿದರು.

ರೆಡ್ಡಿ ಅವರಿಗೂ ಶಹಬ್ಬಾಸ್: ನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಉತ್ತಮ ಅಧಿಕಾರಿ. ಇವರಂತಹವರು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲೂ ಇದ್ದರೆ ಸರ್ಕಾರದ ಯೋಜನೆಗಳ ಅನುಷ್ಠಾನಕ್ಕೆ ಅನುಕೂಲವಾಗುತ್ತದೆ ಎಂದು ಪ್ರಶಂಸೆ ವ್ಯಕ್ತಪಡಿಸಿದ ಸಚಿವ ವಿ.ಸೋಮಣ್ಣ, ಪ್ರತಾಪ್ ಸಿಂಹ ಹೆಸರು ಕೂಗಿ ಯಾರ ಒತ್ತಡವಿದ್ದರೂ ಇಂತಹ ಅಧಿಕಾರಿಗಳು ವರ್ಗಾವಣೆಯಾಗದಂತೆ ನೋಡಿಕೊಳ್ಳಬೇಕು. ನಿಮಗೆ ಬೇಡವಾದರೆ ಹೇಳಿ ನಮ್ಮ ಇಲಾಖೆಗೆ ಕರೆಸಿಕೊಳ್ಳುತ್ತೇವೆ ಎಂದರು.

ಗಂಭೀರ ಕ್ರಮ ವಹಿಸಿ: ರಮಾಬಾಯಿನಗರದ ನಿವಾಸಿಗಳು ನನಗೊಂದು ಮನವಿ ಪತ್ರ ನೀಡಿದ್ದಾರೆ. 1995ರಿಂದ ಮನೆ ಉಳ್ಳವರೇ ಸರ್ಕಾರದ ಸೌಲಭ್ಯ ಪಡೆದಿದ್ದಾರೆ. ಆ ಮನೆಗಳನ್ನು ಮಾರಾಟ ಮಾಡಿ ಹೋದವರು ಈಗ ಬೆಲೆ ಹೆಚ್ಚಾಗಿದೆ ಎಂದು ಹೆಚ್ಚುವರಿ ಹಣಕ್ಕೆ ಒತ್ತಾಯಿಸುತ್ತಿದ್ದಾರೆ. ರೌಡಿಗಳ ಮೂಲಕ ಧಮಕಿ ಹಾಕುತ್ತಿದ್ದಾರೆ ಎಂದು ನೊಂದವರು ತಿಳಿಸಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿದ್ದೇನೆ. ಪೊಲೀಸ್ ಅಧಿಕಾರಿಗಳು ಹಾಗೂ ಪಾಲಿಕೆ ಆಯುಕ್ತರು ತಕ್ಷಣ ಕ್ರಮ ಕೈಗೊಳ್ಳಬೇಕು. ನಿವಾಸಿಗಳಿಗೆ ಎಲ್ಲಾ ರೀತಿಯ ಸೌಲಭ್ಯ ಕಲ್ಪಿಸಿಕೊಡಬೇಕೆಂದು ಸೂಚನೆ ನೀಡಿ, ಪತ್ರವನ್ನು ಪಾಲಿಕೆ ಆಯುಕ್ತರಿಗೆ ಹಸ್ತಾಂತರಿಸಿದರು.

ಮೈಸೂರು ಸಾಹಿತ್ಯ ಸಂಭ್ರಮಕ್ಕೆ ಚಾಲನೆ





ಮೈಸೂರು, ಜು. 23 (ಆರ್‌ಕೆ)–ಸಾಂಸ್ಕೃತಿಕ ನಗರಿ ಮೈಸೂರಿನ ವಿನೋಬಾ ರಸ್ತೆಯ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಎರಡು ದಿನಗಳ 6ನೇ ಮೈಸೂರು ಸಾಹಿತ್ಯ ಸಂಭ್ರಮ (Mysore Literature Festival) ಇಂದು ಆರಂಭವಾಯಿತು.

ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್–2015 ಸಹಯೋಗದಲ್ಲಿ ಏರ್ಪಡಿಸಿರುವ ಮೈಸೂರು ಲಿಟರೇಚರ್ ಫೆಸ್ಟಿವಲ್ ಅನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ, ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಶುಭ ಕೋರಿದರು.

ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ–2022 ಗೀತಾಂಜಲಿ ಶ್ರೀ, ಎರಡು ಬಾರಿ ಗ್ರಾಮ್ಮಿ ಪ್ರಶಸ್ತಿ ವಿಜೇತ ರಿಕ್ಕಿ ಕೇಜ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಉದ್ಘಾಟನಾ ಸಮಾರಂಭ ದಲ್ಲಿ ಲೇಖಕ ಹಾಗೂ ಉದ್ಯಮಿ ಅರುಣ್ ರಾಮನ್, ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್‌ನ ವ್ಯವಸ್ಥಾಪಕ ನಿರ್ದೇಶಕ (ಎಂಡಿ) ಹಾಗೂ ಸಿಇಓ ಸುಧನ್ವ ಧನಂಜಯ ಅವರು 'ದಿ ಬುಕ್ ಲೀಫ್' ನ್ಯೂಸ್‌ಲೆಟರ್ ಬಿಡುಗಡೆ ಮಾಡಿದರು.

ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್–2015 ಸಂಸ್ಥಾಪಕ ಮ್ಯಾನೇಜಿಂಗ್ ಟ್ರಸ್ಟಿ ಶುಭ ಸಂಜಯ್ ಅರಸ್ ಹಾಗೂ ಕಾರ್ಯದರ್ಶಿ ತಂಕಮ್ ಪೆನಕಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭ ಮಾತನಾಡಿದ ಅರುಣ್ ರಾಮನ್, ರಾಷ್ಟ್ರಕವಿ ಕುವೆಂಪು, ಪ್ರಸಿದ್ಧ ಸಾಹಿತಿಗಳಾದ ಡಾ. ಎಸ್.ಎಲ್. ಭೈರಪ್ಪ, ದೇವನೂರು ಮಹದೇವ, ಆರ್.ಕೆ. ನಾರಾಯಣ್, ಖ್ಯಾತ ಛಾಯಾಗ್ರಾಹಕ ಟಿ.ಎಸ್. ಸತ್ಯನ್ ಯುವ ಸಾಹಿತಿಗಳಿಗೆ ಸ್ಫೂರ್ತಿಯ ಚಿಲುಮೆ ಇದ್ದಂತೆ. ಜೇನಿನಿಂದ ದುಂಬಿ ಮಧುವನ್ನು ಹೀರುವಂತೆ ಯುವಕರು ಒಳ್ಳೆಯ ಸಾಹಿತ್ಯ ಕೃತಿಯನ್ನು ಹೆಕ್ಕಿ ತೆಗೆದು ಸಮಾಜಕ್ಕೆ ಉಣಬಡಿಸಬೇಕೆಂದು ಸಾಂದರ್ಭಿಕವಾಗಿ ಬಸವಣ್ಣನವರ ವಚನದ ಸಾಲುಗಳನ್ನು ಉಲ್ಲೇಖಿಸುವ ಮೂಲಕ ಸಲಹೆ ನೀಡಿದರು.

ಇದೇ ಸಂದರ್ಭ ಮಾತನಾಡಿದ ಶುಭ ಸಂಜಯ್ ಅರಸ್, ಸಾಮಾಜಿಕ ಜಾಲತಾಣದಲ್ಲಿ ಮುಳುಗಿ ಹೋಗಿರುವ ಯುವ ಸಮೂಹಕ್ಕೆ ಓದುವ ಅಭ್ಯಾಸ ಮಾಡಿಸುವುದು, ಸಾಹಿತ್ಯದೆಡೆಗೆ ಸೆಳೆಯುವ ಸಲುವಾಗಿ ಟ್ರಸ್ಟ್ ಹಾಗೂ ಕ್ಲಬ್ಸ್ ಮೈಸೂರು ಸಾಹಿತ್ಯ ಸಂಭ್ರಮ ಕಾರ್ಯಕ್ರಮವನ್ನು ಆಯೋಜಿಸಿರುವುದಾಗಿ ನುಡಿದರು.

ಯೋಗ ಫಾರ್ ಚಿಲ್ಡ್ರನ್, ರಾಜಮಾರ್ಗ ಸೇರಿದಂತೆ ವಿವಿಧ ಲೇಖಕರು ಬರೆದಿರುವ 5 ಪುಸ್ತಕಗಳನ್ನು ಇದೇ ವೇಳೆ ಬಿಡುಗಡೆ ಮಾಡಲಾಯಿತು. ಸಾಹಿತ್ಯ, ಸಿನಿಮಾ, ಯಕ್ಷಗಾನ, ಪತ್ರಿಕೋದ್ಯಮ, ಕ್ರಿಕೆಟ್, ನಾಟಕ, ವನ್ಯಜೀವಿ, ಜೀವನ ಕಲೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಪ್ರಮುಖರು ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಭಾಗವಹಿಸಿದ್ದಾರೆ.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ಸ್ ಪದಾಧಿಕಾರಿಗಳಾದ ರಿಯನ್ ಇರಾನಿ, ಸ್ಯಾಮ್ ಚೆರಿಯನ್, ಪ್ರೊ. ಕೆ.ಸಿ. ಬೆಳ್ಳಿಯಪ್ಪ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ, ಶ್ರೀಮತಿ ರ್‍ಯಾಲಿ ಗಣಪತಿ, ಜಗನ್ನಾಥ್ ಶೆಣೈ, ಡಾ. ಸಿ.ಡಿ. ಶ್ರೀನಿವಾಸಮೂರ್ತಿ, ಬಿ.ಆರ್. ಪೈ, ರಾಜ್‌ದೀಪ್ ಸರ್ದೇಸಾಯಿ, ಸಾಂಘರಿಕ ಗೋಡ್ಸ್ ಸೇರಿದಂತೆ ಹಲವರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ನಂತರ ನಡೆದ ಗೋಷ್ಠಿಗಳಲ್ಲಿ ರಾಜ್‌ದೀಪ್ ಸರ್ದೇಸಾಯಿ, ಚಾರು ಶರ್ಮ, ನಿದಿನ್ ಓಲಿಕಾರ್, ಡಾ. ಎನ್.ಎಸ್. ವಿಶ್ವನಾಥ್, ಅನಿರುದ್ಧ್ ಕಾಸಿಶೆಟ್ಟಿ ಡಾ. ಹೆಚ್.ಎಸ್. ಚಂಪಾ ಸೇರಿದಂತೆ ಹಲವು ಸಾಹಿತಿಗಳು ವಿಷಯ ಮಂಡಿಸಿದರು. ನಾಳೆ (ಜು.24) ಕಿರುತೆರೆಯಲ್ಲಿ ಕನ್ನಡದ ಕಂಪು, ಶಿಕ್ಷಣ–ಧನಾತ್ಮಕ ಚಿಂತನೆಗಳು, ಮಾನವೀಯ ಮೌಲ್ಯಗಳು, ಯೋಗ ಫಾರ್ ದಿ ಯೂತ್ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆಗಳು ನಡೆಯಲಿವೆ.

ಭಾಷಾಂತರ ಭಾವನೆಗಳ ಬಿತ್ತುವ ಸಾಧನ

ಬೂಕರ್ ಪ್ರಶಸ್ತಿ ವಿಜೇತೆ ಗೀತಾಂಜಲಿ ಅಭಿಮತ

ಮೈಸೂರು, ಜು.23(ಎಂಕೆ)– ಭಾಷಾಂತರ ಅತ್ಯಂತ ಮುಖ್ಯವಾಗಿದ್ದು, ಭಾವನೆಗಳನ್ನು ಬೇರೆ ಬೇರೆ ಭಾಷೆಯವರಿಗೆ ತಿಳಿಸುವ ಭಾಷಾ ಸಾಧನವಾಗಿದೆ. ಡೈಸಿ ರಾಕ್‌ವೆಲ್ ಅವರಂತಹ ಅನುವಾದಕರಿಂದ ಅತ್ಯುತ್ತಮ ಭಾಷಾಂತರ ಸಾಧ್ಯ ಎಂದು ಖ್ಯಾತ ಲೇಖಕಿ, ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಗೀತಾಂಜಲಿ ಶ್ರೀ ಅಭಿಪ್ರಾಯಪಟ್ಟರು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ ವತಿಯಿಂದ ಆಯೋಜಿಸಿರುವ '6ನೇ ಮೈಸೂರು ಸಾಹಿತ್ಯ ಸಂಭ್ರಮ'ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ 'ರೇಟ್ ಸಮಾಧಿ' ಹಿಂದಿ ಕಾದಂಬರಿಯನ್ನು ಇಂಗ್ಲಿಷ್‌ಗೆ (ಟೂಮ್ ಆಫ್ ಸ್ಯಾಂಡ್) ಭಾಷಾಂತರಿಸಿರುವ ಡೈಸಿ ರಾಕ್‌ವೆಲ್, ಹಿಂದಿಯಲ್ಲಿದ್ದಂತೆಯೇ ಯಥಾವತ್ತಾಗಿ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ಇಂಗ್ಲಿಷ್‌ನಲ್ಲಿ ಹೊಸ ರೂಪ ನೀಡಿದ್ದಾರೆ. ಸರಳ ಮತ್ತು ಸುಲಭವಾಗಿ ಓದುಗರಿಗೆ ಅರ್ಥ ಮಾಡಿಸಿದ್ದಾರೆ ಎಂದರು. ಹಿಂದಿ ಅಥವಾ ಬೇರೆ ಭಾಷೆ ಓದಲು, ಅರ್ಥ ಮಾಡಿಕೊಳ್ಳಲು ಬರದೆ ಇರುವವರಿಗೆ ಭಾಷಾಂತರ ಉಪಯುಕ್ತವಾಗಲಿದ್ದು, ಅತ್ಯುತ್ತಮ ಪುಸ್ತಕಗಳನ್ನು ಓದಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಭಾಷಾಂತರ ಅತ್ಯಂತ ಮುಖ್ಯವಾಗಿದೆ ಎಂದು ತಿಳಿಸಿದರು.

'ತಾಯಿ–ಮಗಳ' ಅವಿನಾಭಾವ ಕತೆಯುಳ್ಳ 'ಟೂಮ್ ಆಫ್ ಸ್ಯಾಂಡ್' ಕಾದಂಬರಿ ಬೂಕರ್ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಅತ್ಯಂತ ಖುಷಿ ತಂದಿದೆ. ಎಲ್ಲರೂ ಈ ಪುಸ್ತಕದ ಬಗ್ಗೆ ಹೇಳುತ್ತಾರೆ. ಪ್ರಪಂಚವೇ ಒಂದು ಕುಟುಂಬವಾಗಿದ್ದು, ಸಂಸಾರದಲ್ಲಿರುವ ಸಂಬಂಧಗಳ ಬಗ್ಗೆ ಕಾದಂಬರಿಯಲ್ಲಿದ್ದು, ಮಗಳ ಮೇಲೆ ತಾಯಿಯ ಅಕ್ಕರೆಯನ್ನು ಕಾಣಬಹುದಾಗಿದೆ ಎಂದು ಹೇಳಿದರು.

ಅತ್ಯಂತ ಮೃದು ಮೈಸೂರು ಸಿಲ್ಕ್: ಮೈಸೂರು ಸಿಲ್ಕ್ ಕುರಿತು ಮಾತನಾಡಿದ ಲೇಖಕಿ ಗೀತಾಂಜಲಿ ಶ್ರೀ, ಮೈಸೂರು ಸಿಲ್ಕ್ ಸೀರೆ ಅಮ್ಮನ ಏಟು ಮೃದುವಾಗಿರುವಂತೆ ಮೈಸೂರು ಸಿಲ್ಕ್ ಸೀರೆಯೂ ಮೃದುವಾಗಿದೆ. ಅತ್ಯಂತ ಜನಪ್ರಿಯ ಸೀರೆಯಾಗಿರುವ ಮೈಸೂರು ಸಿಲ್ಕ್ ಸೀರೆಯನ್ನು ಅಮ್ಮ ಬಳಸುತ್ತಿದ್ದರು ಎಂದು ಸ್ಮರಿಸಿದರಲ್ಲದೆ ತಾವು ಬರೆದ ಕಾದಂಬರಿಗಳು ಹಾಗೂ ಜೀವನದ ಪ್ರಮುಖ ಸಂಗತಿಗಳನ್ನು ಹಂಚಿಕೊಂಡರು. ಸೀತಾ ಬಾಸ್ಕರ್ ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು.

ಕಾರ್ಗಿಲ್ ವಿಜಯ್ ದಿವಸ್ ಪ್ರಯುಕ್ತ

ಜು.26ರಂದು ಮೈಸೂರಲ್ಲಿ ಬೈಕ್ ರ್‍ಯಾಲಿ

ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕ, ರೋಟರಿ ಹೆರಿಟೇಜ್ ಕ್ಲಬ್ ಜಂಟಿ ಆಶ್ರಯದಲ್ಲಿ ಆಯೋಜನೆ



ಮೈಸೂರು,ಜು.23(ಪಿಎಂ)– ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಮೈಸೂರು ಜಿಲ್ಲಾ ಘಟಕ ಹಾಗೂ ರೋಟರಿ ಹೆರಿಟೇಜ್ ಕ್ಲಬ್ ಮೈಸೂರು ಜಂಟಿ ಆಶ್ರಯದಲ್ಲಿ ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಜು.26ರಂದು ಮೈಸೂರು ನಗರದಲ್ಲಿ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ದಿವಾಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಕಿಸ್ತಾನದ ವಿರುದ್ಧ ಕಾರ್ಗಿಲ್ ಯುದ್ಧದಲ್ಲಿ ನಮ್ಮ ಭಾರತವು ವಿಜಯ ಪತಾಕೆ ಹಾರಿಸಿ 23 ವರ್ಷಗಳನ್ನು ಕಳೆದಿದ್ದೇವೆ. ಪ್ರತಿವರ್ಷ ದೇಶದಾದ್ಯಂತ ಕಾರ್ಗಿಲ್ ವಿಜಯೋತ್ಸವ ಆಚರಿಸಲಾಗುತ್ತದೆ. ಅಂತೆಯೇ ನಮ್ಮ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಾವು 2ನೇ ವರ್ಷದ ಬೈಕ್ ರ್‍ಯಾಲಿ ಹಮ್ಮಿಕೊಂಡಿದ್ದೇವೆ ಇದರಲ್ಲಿ 18 ವರ್ಷ ಮೇಲ್ಪಟ್ಟ ಯುವಕ–ಯುವತಿಯರು ಸೇರಿದಂತೆ ನಾಗರಿಕರು ಪಾಲ್ಗೊಳ್ಳಬಹುದು ಎಂದು ಹೇಳಿದರು.

ಹುತಾತ್ಮ ಯೋಧರನ್ನು ಸ್ಮರಿಸುವ ಹಾಗೂ ಯುವ ಪೀಳಿಗೆಗೆ ದೇಶಪ್ರೇಮದ ಅರಿವು ಮೂಡಿಸುವ ಸದುದ್ದೇಶದೊಂದಿಗೆ ಈ ಬೈಕ್ ರ್‍ಯಾಲಿ ಏರ್ಪಡಿಸಲಾಗಿದೆ. ರ್‍ಯಾಲಿಯಲ್ಲಿ ಭಾಗವಹಿಸುವವರು ಡಿಎಲ್ ಹೊಂದಿರಬೇಕು. ಜೊತೆಗೆ ರ್‍ಯಾಲಿಯಲ್ಲಿ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಅಂದು ಬೆಳಗ್ಗೆ 8.30ಕ್ಕೆ ಮೈಸೂರು ನಗರದ ಫೀಲ್ಡ್ ಮಾರ್ಷಲ್ ಕೆಎಂ.ಕಾರ್ಯಪ್ಪ ವೃತ್ತದಲ್ಲಿ (ಮೆಟ್ರೋಪೋಲ್ ವೃತ್ತ) ಬೈಕ್ ರ್‍ಯಾಲಿಗೆ ಚಾಲನೆ ದೊರೆಯಲಿದೆ. ಈ ವೇಳೆ ಕೆ.ಎಂ.ಕಾರ್ಯಪ್ಪರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಲಾಗುವುದು. ಶಾಸಕರಾದ ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಎಂಎಲ್‌ಸಿ ಸಿ.ಎನ್.ಮಂಜೇಗೌಡ ಸೇರಿದಂತೆ ಇನ್ನಿತರ ಗಣ್ಯರು ಈ ಸಂದರ್ಭದಲ್ಲಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ರ್‍ಯಾಲಿಯು ಜೆಎಲ್‌ಬಿ ರಸ್ತೆ, ಬಾಬು ಜಗಜೀವನರಾವ್ ವೃತ್ತ (ರೈಲ್ವೆ ನಿಲ್ದಾಣ ವೃತ್ತ), ಇರ್ವಿನ್ ರಸ್ತೆ ಸರ್ಕಾರಿ ಆಯುರ್ವೇದ ಕಾಲೇಜು ವೃತ್ತ, ಸಯ್ಯಾಜಿರಾವ್ ರಸ್ತೆ ಪ್ರಭಾ ಚಿತ್ರಮಂದಿರ ರಸ್ತೆ, ಗಾಂಧಿ ಚೌಕ, ದೊಡ್ಡಗಡಿಯಾರ, ಚಾಮರಾಜ ಒಡೆಯರ್ ವೃತ್ತ, ಬೆಂಗಳೂರು –ನೀಲಗಿರಿ ರಸ್ತೆ, ಗನ್‌ಹೌಸ್ ವೃತ್ತ ಚಾಮರಾಜ ಜೋಡಿ ರಸ್ತೆ ರಾಮಸ್ವಾಮಿ ವೃತ್ತ, ಏಕಲವ್ಯ ವೃತ್ತ, ಕಾಂತರಾಜ ಅರಸ್ ರಸ್ತೆ ಮೂಲಕ ಸರಸ್ವತಿಪುರಂನ ರೋಟರಿ ಪಶ್ಚಿಮ ಸಭಾಂಗಣದ ಎದುರು ಮುಕ್ತಾಯಗೊಳ್ಳಲಿದೆ ರೋಟರಿ ಪಶ್ಚಿಮದ ಸಭಾಂಗಣದಲ್ಲಿ ಬೆಳಗ್ಗೆ 10.30ಕ್ಕೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಹಲವು ಮಾಜಿ ಸೈನಿಕರನ್ನು ಸನ್ಮಾನಿಸಲಾಗುವುದು. ರ್‍ಯಾಲಿಯಲ್ಲಿ ಸುಮಾರು 500 ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ವಿವರಿಸಿದರು.

2023–24ನೇ ಸಾಲಿನ ರೋಟರಿ ಇಂಟರ್‌ನ್ಯಾಷನಲ್ ಜಿಲ್ಲೆ 3181ರ ಜಿಲ್ಲಾ ಗೌರ್ನರ್ ಹೆಚ್.ಆರ್.ಕೇಶವ್ ಮಾತನಾಡಿದರು. ಮಾಜಿ ಸೈನಿಕರ ಸಂಘದ ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ನಂಜುಂಡಸ್ವಾಮಿ, ರೋಟರಿ ಇಂಟರ್‌ನ್ಯಾಷನಲ್ ಜಿಲ್ಲೆ 3181ರ ಸಹಾಯಕ ಗೌರ್ನರ್ ಕೆ.ಮಂಜುನಾಥ್, ರೋಟರಿ ಹೆರಿಟೇಜ್ ಕ್ಲಬ್ ಮೈಸೂರು ಅಧ್ಯಕ್ಷ ಸುರೇಶ್, ಕಾರ್ಯದರ್ಶಿ ಎಂ.ಪಿ.ಪ್ರಭಾಕರ್ ಗೋಷ್ಠಿಯಲ್ಲಿದ್ದರು.

ವಿಮಾನ ನಿಲ್ದಾಣಕ್ಕೆ ನಾಲ್ವಡಿ ಹೆಸರು: ಪ್ರಮೋದಾದೇವಿ ಒಡೆಯರ್ ಸಂತಸ

ಮೈಸೂರು, ಜು. 23(ಆರ್‌ಕೆ)– ಮೈಸೂರು ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿಡಲು ನಿರ್ಧರಿಸಿರುವ ಸರ್ಕಾರದ ಕ್ರಮಕ್ಕೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಂತಸ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಇಂದು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಅವರು, ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿಡಬೇಕೆಂಬುದು ಬಹುದಿನಗಳ ಬಯಕೆಯಾಗಿತ್ತು. ಆ ಬಗ್ಗೆ ಹಲವರಿಂದಲೂ ಒತ್ತಾಯ ಕೇಳಿಬಂದಿತ್ತು. ರಾಜ ಮಹಾರಾಜರ ಕೊಡುಗೆಯನ್ನು ಪರಿಗಣಿಸಿ ಸರ್ಕಾರ ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ ಎಂದು ನಾಮಕರಣ ಮಾಡಲು ನಿರ್ಧರಿಸಿರುವುದು ಸ್ವಾಗತಾರ್ಹ ಸಂಗತಿ ಎಂದರು.

ಕರ್ನಾಟಕ ಸರ್ಕಾರದ ಈ ಕ್ರಮದಿಂದ ತಮಗೆ ಸಂತೋಷವಾಗಿದ್ದು, ಇದೀಗ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ 'ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ' ಎಂಬ ಫಲಕ ಹಾಕುವರೆಂಬ ವಿಶ್ವಾಸವಿದೆ ಎಂದು ಪ್ರಮೋದಾದೇವಿ ಒಡೆಯರ್ ತಿಳಿಸಿದರು.

ಮೈಸೂರಿನ ಗನ್ ಹೌಸ್ ಸರ್ಕಲ್‌ನಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಮೆ ಸ್ಥಾಪಿಸಬೇಕೆಂಬುದು ಹಲವರ ಹಂಬಲವಾಗಿರುವುದರಿಂದ ಸುತ್ತೂರು ಶ್ರೀಗಳಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಪ್ರತಿಮೆ ಸ್ಥಾಪಿಸಲು ಮುಂದಾಗಿರುವ ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅವರಿಗೆ ಸ್ಥಳದ ಬಗ್ಗೆ ಮರು ಪರಿಶೀಲಿಸುವಂತೆ ಪತ್ರ ಬರೆದು ಕೋರಿಕೊಂಡಿದ್ದೇನೆ ಎಂದು ಪ್ರಮೋದಾದೇವಿ ಒಡೆಯರ್ ತಿಳಿಸಿದರು.

ಆ ಬಗ್ಗೆ ಶ್ರೀಗಳಿಂದ ಇನ್ನೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆದರೆ, ನಮ್ಮ ಮನವಿಗೆ ಅವರು ಪೂರಕವಾಗಿ ಸ್ಪಂದಿಸುವರೆಂಬ ವಿಶ್ವಾಸವಿದೆ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಪ್ರತಿಮೆ ಸ್ಥಾಪಿಸಲುದ್ದೇಶಿಸಿರುವ ಅರಮನೆ ದಕ್ಷಿಣ ದ್ವಾರ ಸಮೀಪ ಗನ್ ಹೌಸ್ ಸರ್ಕಲ್‌ನಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಮೆ ಸ್ಥಾಪಿಸಬೇಕೆಂದು ಮೈಸೂರಿನ ಹಲವು ಸಂಘ–ಸಂಸ್ಥೆ ಮುಖಂಡರು, ನಾಗರಿಕರು ತಮ್ಮ ಬಯಕೆಯನ್ನು ತಮಗೆ ಪತ್ರ ಮುಖೇನ ವ್ಯಕ್ತಪಡಿಸಿದ್ದಾರೆ ಎಂದು ಅವರು ನುಡಿದರು.

ಬಡವರ ಮುಖ್ಯವಾಹಿನಿಗೆ ತರಲು ಹಲವು ಕಾರ್ಯಕ್ರಮ

● ವಸತಿ ಸಚಿವ ವಿ.ಸೋಮಣ್ಣ ವಿಶ್ವಾಸ ● 'ಶ್ರೀ ವಿ.ಸೋಮಣ್ಣ ವನಸಿರಿ' ಪ್ರಶಸ್ತಿ ಪ್ರದಾನ

ಮೈಸೂರು, ಜು.23(ಎಂಕೆ)– ಬಡವರ ಮಕ್ಕಳು ಬಡವರಾಗಿಯೇ ಅಂತ್ಯ ಕಾಣಬಾರದು. ಬಡವರ ಕುಟುಂಬಗಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮಾರ್ಗದರ್ಶನದಲ್ಲಿ ರಾಜ್ಯ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ರೂಪಿಸುವ ಕೆಲಸ ಮಾಡುತ್ತಿದೆ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಮೈಸೂರಿನ ಬಲ್ಲಾಳ ವೃತ್ತ ಸಮೀಪವಿರುವ ನಿತ್ಯೋತ್ಸವ ಕಲಾಭವನದಲ್ಲಿ ವಿ.ಸೋಮಣ್ಣ ಅಭಿಮಾನಿ ಬಳಗದ ವತಿಯಿಂದ ವಿ.ಸೋಮಣ್ಣ ಅವರ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ 'ಶ್ರೀ ವಿ.ಸೋಮಣ್ಣ ವನಸಿರಿ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಡವರ ಹಣವನ್ನು ಬಡವರಿಗೆ ನೀಡುತ್ತಿದ್ದೇವೆಯೇ ಹೊರತು ನಮ್ಮ ಕೊಡುಗೆಯೇನಿಲ್ಲ ಎಂದರು.

ನಮ್ಮ ಜೀವನದಲ್ಲಿ ಜಾತಿ ಒಂದು ಭಾಗವಷ್ಟೇ. ಕಾಯಕ ಎಲ್ಲಕ್ಕಿಂತ ಮೀರಿದ್ದು, ಈ ನಿಟ್ಟಿನಲ್ಲಿ ಪ್ರತಿಯೊಬ್ಬರನ್ನು ಸಮಾನವಾಗಿ ಕಾಣುವ ಮೂಲಕ ಅವಕಾಶ, ಅಧಿಕಾರ ದೊರೆತಾಗ ಸೇವೆ ಮಾಡಿ ನಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಬೇಕು. ರಾಜ್ಯದ ಬಡವರಿಗೆ ಮನೆ ನೀಡುವ ಜವಾಬ್ದಾರಿಯನ್ನು ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನನಗೆ ವಹಿಸಿದ್ದರು ಎಂದು ಸ್ಮರಿಸಿದರು.

ನಿಷ್ಕಲ್ಮಷ ರಾಜಕಾರಣ: ರಾಜಕಾರಣ ಮುಳ್ಳಿನ ಹಾಸಿಗೆ ಇದ್ದಂತೆ. ಹಗೆತನಕ್ಕೆ ಹೆಚ್ಚು ಅವಕಾಶ ಮಾಡಿಕೊಡುತ್ತದೆ. ಇದರ ನಡುವೆ ಎಲ್ಲರ ಪ್ರೀತಿ–ವಿಶ್ವಾಸ ಗಳಿಸುತ್ತಾ ನಿಷ್ಕಲ್ಮಷ ರಾಜಕಾರಣ ಮಾಡಿಕೊಂಡು ಬಂದಿದ್ದೇನೆ. ಸಿದ್ದಗಂಗಾ ಶ್ರೀ ಶಿವಕುಮಾರ ಸ್ವಾಮೀಜಿ, ಬಾಲಗಂಗಾಧರನಾಥ ಸ್ವಾಮೀಜಿ, ಸುತ್ತೂರು ಶ್ರೀಗಳು ನನ್ನ ಮಾರ್ಗದರ್ಶಕರಾಗಿದ್ದಾರೆ. ಇರುವಷ್ಟು ದಿನಗಳು ಜನರ ಆರೋಗ್ಯ ಸೇವೆ ಮಾಡಿಕೊಂಡಿರುತ್ತೇನೆ. ನಾನೆಂದಿಗೂ ತೆರೆದ ಪುಸ್ತಕದಂತೆ ಬದುಕಿದ್ದೇನೆ. ಹಾಗೆಯೇ ತಮ್ಮ ಬಳಿ ಯಾರಾದರೂ ತೊಂದರೆ ಎಂದು ನೋವು ಹೇಳಿಕೊಂಡು ಬಂದವರಿಗೆ ಜಾತಿ ನೋಡದೆ ಸಹಾಯ ಮಾಡಿ ಎಂದು ಮನವಿ ಮಾಡಿದರು.

ಚಾಮುಂಡಿಬೆಟ್ಟದ ಸ್ವಚ್ಛತೆ: ಸಂಸದ ಪ್ರತಾಪ್ ಸಿಂಹ ಮಾತನಾಡಿ, ವಿ.ಸೋಮಣ್ಣ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಮಲೈ ಮಹದೇಶ್ವರ ಬೆಟ್ಟದಂತೆ ಚಾಮುಂಡಿಬೆಟ್ಟದ ಸ್ವಚ್ಛತೆಗೂ ಮುಂದಾದರು. ಬೆಟ್ಟದ ಮೇಲೆ ಕಾಲಿಡುವುದಕ್ಕೂ ಜಾಗವಿಲ್ಲದಂತೆ ಆವರಿಸಿಕೊಂಡಿದ್ದ ಮಳಿಗೆಗಳನ್ನು ತೆರವುಗೊಳಿಸಿ, ಭಕ್ತರಿಗೆ ಸ್ವಚ್ಛ ಹಾಗೂ ನಿರ್ಮಲ ವಾತಾವರಣ ನಿರ್ಮಾಣ ಮಾಡಿದ್ದಾರೆ. ಮಳಿಗೆಗಳನ್ನು ತೆರವುಗೊಳಿಸುವ ವೇಳೆ ದೊಡ್ಡವರು ಎನಿಸಿಕೊಂಡವರೆಲ್ಲರೂ ಕರೆ ಮಾಡಿ ಬೇಡ ಎಂದರೂ ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ದೃಢ ನಿರ್ಧಾರ ತೆಗೆದುಕೊಂಡು ಚಾಮುಂಡಿಬೆಟ್ಟಕ್ಕೆ ಹೊಸ ರೂಪ ಕೊಟ್ಟಿದ್ದಾರೆ ಎಂದು ಗುಣಗಾನ ಮಾಡಿದರು.

ಗೋವಿಂದರಾಜನಗರ ಕ್ಷೇತ್ರದಲ್ಲಿ ವೀರಶೈವರ ಸಂಖ್ಯೆ ಅತೀ ಕಡಿಮೆ. ಒಕ್ಕಲಿಗರೇ ಹೆಚ್ಚಾಗಿರುವ ಕ್ಷೇತ್ರದಲ್ಲಿ ಎಲ್ಲರ ವಿಶ್ವಾಸಗಳಿಸಿ ಗೆದ್ದಿದ್ದಾರೆ ಎಂದರೆ ಸೋಮಣ್ಣ ಅವರ ವ್ಯಕ್ತಿತ್ವ ಎಂತಹದು ಎಂಬುದರ ಅರಿವಾಗುತ್ತದೆ. ವೈಯಕ್ತಿಕವಾಗಿ ನನ್ನ ಮಾರ್ಗದರ್ಶಕರಾಗಿರುವ ಅವರು, ನನ್ನ ಕಷ್ಟ ಕೇಳಿ ಗೌರವಯುತವಾಗಿ ಬದುಕಲು ಸಹಾಯ ಮಾಡಿದ್ದಾರೆ. ಪ್ರಾಮಾಣಿಕವಾಗಿ ರಾಜಕಾರಣ ಮಾಡುತ್ತಿರುವುದಕ್ಕೆ ಅವರೂ ಕೂಡ ಕಾರಣರಾಗಿದ್ದಾರೆ ಎಂದು ನೆನೆದರು.

ಸನ್ಮಾನ: ಇದೇ ವೇಳೆ ಚಾಮರಾಜನಗರದಲ್ಲಿ 10 ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಬೆಳೆಸಿ ಪರಿಸರ ಉಳಿವಿಗೆ ಶ್ರಮಿಸುತ್ತಿರುವ ಸಿ.ಎಂ.ವೆಂಕಟೇಶ್ ಮತ್ತು ಜಯಲಕ್ಷ್ಮಿ ವೆಂಕಟೇಶ್ ದಂಪತಿಗೆ 'ವಿ.ಸೋಮಣ್ಣ ವನಸಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಹೆಚ್.ಜೆ. ಬಸವಲಿಂಗಪ್ಪ, ಸಿ.ಬಸವೇಗೌಡ, ಓಂ ಪ್ರಕಾಶ್, ಡಾ.ಹರ್ಷ ಬಸಪ್ಪ, ಪ್ರಕಾಶ್ ಚಿಕ್ಕಪಾಳ್ಯ, ಶಿವಾಜಿರಾವ್ ಜಾಧವ್, ಕಲಾ ಶಿಕ್ಷಕಿ ಸಂಗೀತಾ, ಡಿಸಿಪಿ ಗೀತ ಪ್ರಸನ್ನ, ಡಾ.ಯೋಗೇಶ್, ಶಿವಮೂರ್ತಿ ಕಾನ್ಯ, ಪರಮಶಿವಪ್ಪ ಹಾಗೂ ಕೆ.ಎಸ್. ಮಹದೇವಪ್ರಸಾದ್ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಶಾಸಕರಾದ ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ವಿ.ಸೋಮಣ್ಣ ಅಭಿಮಾನಿ ಬಳಗದ ವತಿಯಿಂದ ಚಾಮರಾಜನಗರದಲ್ಲಿ 10 ಸಾವಿರ ಗಿಡನೆಟ್ಟು ಬೆಳೆಸುತ್ತಿರುವ ಸಿ.ಎಂ.ವೆಂಕಟೇಶ್ ಮತ್ತು ಜಯಲಕ್ಷ್ಮಿ ವೆಂಕಟೇಶ್ ದಂಪತಿಗೆ 'ಶ್ರೀ ವಿ.ಸೋಮಣ್ಣ ವನಸಿರಿ' ಪ್ರಶಸ್ತಿ ಪ್ರದಾನ ಮಾಡುವುದರ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಸನ್ಮಾನಿಸಲಾಯಿತು. ಸುತ್ತೂರು ಶ್ರೀ, ವಸತಿ ಸಚಿವ ವಿ.ಸೋಮಣ್ಣ, ಶಾಸಕರಾದ ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸಂಸದ ಪ್ರತಾಪ್ ಸಿಂಹ ಮತ್ತಿತರರಿದ್ದರು.

ಅನಿಷ್ಟ ಪದ್ಧತಿ ಆಚರಣೆ ನಿಲ್ಲಿಸಿದ್ದೇವೆ...

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ 'ಮಹಿಷ ದಸರಾ' ಎಂಬ ಅನಿಷ್ಟ ಪದ್ಧತಿಯನ್ನು ಚಾಮುಂಡಿ ಸನ್ನಿಧಿಯಲ್ಲಿ ಆಚರಣೆ ಮಾಡಲಾಗುತ್ತಿತ್ತು. ಕೆಟ್ಟ ಕೆಟ್ಟದಾಗಿ ಚಾಮುಂಡಿಯ ಬಗ್ಗೆ ಮಾತನಾಡಲಾಗುತ್ತಿತ್ತು. ಟೌನ್‌ಹಾಲ್‌ನಿಂದ ಬೆಳ್ಳಿ ರಥದಲ್ಲಿ ಬೆಟ್ಟಕ್ಕೆ ಹೋಗಿ ಅಪಚಾರ ಮಾಡುವ ಕೆಲಸವಾಗುತ್ತಿತ್ತು 4 ವರ್ಷ ಅದೇ ರೀತಿ ನಡೆಯಿತು. ಇದು ಬಗ್ಗೆ ಮೈಸೂರಿನಲ್ಲಿ ಯಾರೂ ಸಹ ಧನಿ ಎತ್ತುತ್ತಿರಲಿಲ್ಲ. ಮಟ್ಟ ಹಾಕುವ ತಾಕತ್ತು ಯಾರಿಗೂ ಇರಲಿಲ್ಲ. ಅದನ್ನು ಮಟ್ಟಹಾಕಿದ್ದು ಸೋಮಣ್ಣನವರು. ಕಳೆದ ಮೂರು ವರ್ಷದಿಂದ ಚಾಮುಂಡಿ ಬೆಟ್ಟದಲ್ಲಿ ಅನಾಚಾರ ನಡೆಯದಂತೆ ತಡೆದಿದ್ದಾರೆ. ಚಾಮುಂಡಿ ತಾಯಿ ಬಗ್ಗೆ ಅಪಾರ ನಂಬಿಕೆ ಇಟ್ಟಿರುವ ಸೋಮಣ್ಣ ಅವರು, ನಿಜವಾದ ಪ್ರೀತಿ–ಗೌರವ ಇಟ್ಟುಕೊಂಡು, ಕೆಲಸ ಮಾಡುತ್ತಿದ್ದಾರೆ.

– ಸಂಸದ ಪ್ರತಾಪ್ ಸಿಂಹ

ಆ.3 ಅಥವಾ 4ರೊಳಗೆ ಒಳ್ಳೆ ಸುದ್ದಿ...!

ಚಾಮರಾಜನಗರ ಜಿಲ್ಲೆ ಉದ್ಘಾಟನೆಗೊಂಡು 25 ವರ್ಷಗಳು ತುಂಬುವ ಹಿನ್ನೆಲೆಯಲ್ಲಿ ಚಾಮರಾಜನಗರಕ್ಕೆ ವಿಶೇಷ ಕೊಡುಗೆ ಸಂಬಂಧ ಆ.3 ಅಥವಾ 4ರೊಳಗೆ ಒಳ್ಳೆ ಸುದ್ದಿ ನೀಡಲಾಗುವುದು. ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿ ನಿಟ್ಟಿನಲ್ಲಿ ಈಗಾಗಲೇ 18–20 ಕೆರೆಗಳಿಗೆ ನೀರು ತುಂಬಿಸಲಾಗಿದೆ. ಕೈಗಾರಿಕೆಗಳ ಅಭಿವೃದ್ಧಿಗಾಗಿ ಕೈಗಾರಿಕೆ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಸುಮಾರು 487 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗಳಿಗಾಗಿ ಡಿಪಿಆರ್ ತಯಾರಿಸಲಾಗಿದ್ದು, ಜಿಲ್ಲೆಯ ಸಮಗ್ರ ಅಭಿವೃದ್ಧಿ ಸಂಬಂಧಿ ನೀಲಿನಕ್ಷೆ ತಯಾರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

– ವಿ.ಸೋಮಣ್ಣ, ವಸತಿ ಸಚಿವ

ಮೈಸೂರು ಮಿತ್ರ

ಕಬಿನಿ, ತಾರಕ ಜಲಾಶಯಗಳ ಅಭಿವೃದ್ಧಿಗೆ

ವಿಶ್ವಬ್ಯಾಂಕ್‌ನಿಂದ 106 ಕೋಟಿ ರೂ. ಅನುದಾನ ಬಿಡುಗಡೆ

ಶಾಸಕ ಅನಿಲ್ ಚಿಕ್ಕಮಾದು ಮಾಹಿತಿ



ಹೆಚ್.ಡಿ.ಕೋಟೆ, ಜು.23– ತಾಲೂಕಿನ ಕಬಿನಿ ಮತ್ತು ತಾರಕ ಜಲಾಶಯಗಳ ಅಭಿವೃದ್ಧಿಗೆ ವಿಶ್ವಬ್ಯಾಂಕ್ 106 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಆಡಳಿತಸೌಧದಲ್ಲಿ ಕಾವೇರಿ ನೀರಾವರಿ ನಿಗಮ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ವಿಶ್ವಬ್ಯಾಂಕ್‌ನಿಂದ ಬಿಡುಗಡೆಯಾಗಿರುವ ಹಣ ಕೇಂದ್ರ ಸರ್ಕಾರಕ್ಕೆ ಬಂದಿದ್ದು, ನಂತರ ರಾಜ್ಯ ಸರ್ಕಾರಕ್ಕೆ ವರ್ಗಾವಣೆಯಾಗುತ್ತದೆ. 2018–19ರಲ್ಲಿ ಕಬಿನಿ ಹಾಗೂ ತಾರಕ ಜಲಾಶಯಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೆ. ಇದೀಗ ವಿಶ್ವಬ್ಯಾಂಕ್‌ನಿಂದ ತಾರಕ ಜಲಾಶಯಕ್ಕೆ 42 ಕೋಟಿ ಹಣ ಮಂಜೂರಾಗಿದ್ದು, ಕಾಮಗಾರಿ ಟೆಂಡರ್ ಹಂತದಲ್ಲಿದೆ. ಕಬಿನಿ ಜಲಾಶಯಕ್ಕೆ 64 ಕೋಟಿ ಮಂಜೂರಾಗಿದ್ದು, ಕ್ರಿಯಾಯೋಜನೆ ತಯಾರಾಗ ಬೇಕಿದೆ. ಮುಂದಿನ 5 ತಿಂಗಳೊಳಗೆ ಕಬಿನಿ ಜಲಾಶಯ ಪುನರುಜ್ಜೀವನಗೊಳಿಸುವ ಕಾಮಗಾರಿ ಪ್ರಾರಂಭವಾಗಲಿದೆ ಎಂದರು.

ರಾಜ್ಯ ಸರ್ಕಾರದಿಂದ ನೀರಾವರಿ ಇಲಾಖೆಗೆ 17 ಕೋಟಿ ರೂ. ವಿಶೇಷ ಅನುದಾನ ಮಂಜೂರಾಗಿದ್ದು, ಹಿಂದುಳಿದ ವರ್ಗ, ಸಾಮಾನ್ಯ ವರ್ಗ ವಾಸ ಮಾಡುವ ಕಾಲೋನಿಗಳಲ್ಲಿ ಸಿಮೆಂಟ್ ರಸ್ತೆ, ಚರಂಡಿ ಕಾಮಗಾರಿ ನಡೆಯಲಿವೆ. ಜಲಾಶಯ ವ್ಯಾಪ್ತಿಯ ನಾಲೆಗಳ ದುರಸ್ತಿ ಕಾಮಗಾರಿಗಳು ಕೂಡ ನಡೆಯಲಿದೆ ಎಂದರು.

ಅಭಿವೃದ್ಧಿಗೆ ಸೂಚನೆ: ತಾರಕ ಜಲಾಶಯ ಮತ್ತಷ್ಟು ಅಭಿವೃದ್ಧಿಯಾಗಬೇಕು. ಅಣೆಕಟ್ಟೆ ಮೇಲ್ಭಾಗ ವಿದ್ಯುತ್ ದೀಪಾಲಂಕಾರ ಮಾಡಿಸಬೇಕು. ಪ್ರವಾಸಿ ಮಂದಿರ ನಿರ್ಮಾಣವಾಗಬೇಕು. ತಾಲೂಕಿಗೆ ಬರುವ ಪ್ರವಾಸಿಗರು ಇಲ್ಲಿಗೂ ಬರಬೇಕು. ಆ ನಿಟ್ಟಿನಲ್ಲಿ ಕಾಮಗಾರಿ ನಡೆಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಾಗಿನ: ತಾರಕ ಜಲಾಶಯದ ಗರಿಷ್ಠ ಮಟ್ಟ 2425 ಅಡಿ ಇದ್ದು, ಭರ್ತಿಯಾಗಲು ಇನ್ನೂ 3 ಅಡಿ ನೀರು ಬೇಕಿದೆ. ಜಲಾಶಯ ಭರ್ತಿಯಾದ ನಂತರ ಬಾಗಿನ ಅರ್ಪಿಸಲಾಗುವುದು. ಶೀಘ್ರ ಕಾವೇರಿ ನೀರಾವರಿ ಸಮಿತಿ ಸಭೆ ಕರೆದು, ಜಲಾಶಯ ಅಚ್ಚುಕಟ್ಟು ವ್ಯಾಪ್ತಿಯ ರೈತರಿಗೆ ನೀರು ನೀಡಲಾಗುವುದು ಎಂದರು.

ಹೆಚ್.ಡಿ.ಕೋಟೆ ತಾಲೂಕಿನ ಮೈಸೂರು–ಮಾನಂದವಾಡಿ ಅಂತರರಾಜ್ಯ ರಸ್ತೆಯನ್ನು 900 ಕೋಟಿ ರೂ. ವೆಚ್ಚದಲ್ಲಿ ಎರಡು ಪಥದ ರಸ್ತೆಯಾಗಿ ನಿರ್ಮಾಣ ಮಾಡುವ ಕಾಮಗಾರಿಗೆ ಈಗ ಡಿಪಿಆರ್ ತಯಾರಾಗಿದೆ. ಟೆಂಡರ್ ಪ್ರಕ್ರಿಯೆಗೆ ಇನ್ನು 1 ವರ್ಷ ಬೇಕು. ಆದರೆ ಸತತ ಮಳೆಗೆ ಮೈಸೂರು ಮಾನಂದವಾಡಿ ರಸ್ತೆ ಗುಂಡಿ ಬಿದ್ದಿದ್ದು, ಅವುಗಳನ್ನು ಮುಚ್ಚಿದರೆ ಸಾಲದು. ರಸ್ತೆಗೆ ಪೂರ್ಣವಾಗಿ ಡಾಂಬರು ಹಾಕಬೇಕಿದೆ. ಹಾಗಾಗಿ ವಡ್ಡರಪಾಳ್ಯದಿಂದ ಕರಿಗಳ ಗ್ರಾಮದವರೆಗಿನ 6.5 ಕಿಮೀ ರಸ್ತೆ ಅಗಲೀಕರಣ ಮತ್ತು ದುರಸ್ತಿಗೆ ಮಂಜೂರಾಗಿರುವ 10.50 ಕೋಟಿ ರೂ.ಗಳನ್ನು ಹಾಗೆ ಉಳಿಸಿ, ತಾವು ಸರ್ಕಾರದ ಮಟ್ಟದಲ್ಲಿ ಚರ್ಚೆ ಮಾಡಿ, ಕೊನೆ ಪಕ್ಷ ತಾಲೂಕಿನ ಗಡಿ ಭಾಗ ಮಹದೇವನಗರದಿಂದ ಯರಹಳ್ಳಿ ಹ್ಯಾಂಡ್‌ಪೋಸ್ಟ್ ತನಕ 22 ಕಿಮೀ ರಸ್ತೆ ಡಾಂಬರೀಕರಣಕ್ಕೆ ಕ್ರಮ ವಹಿಸಲಾಗುವುದು ಎಂದರು.

ಸಭೆಯಲ್ಲಿ ಕಬಿನಿ ಸಹಾಯಕ ಕಾರ್ಯಪಾಲಕ ಅಭಿಯಂತರ ಜನಾರ್ಧನ್, ತಾರಕ ಎಇಇ ರಾಮೇಗೌಡ, ಸರಗೂರು ಎಇಇ ಉಷಾ, ಲೋಕೋಪಯೋಗಿ ಇಲಾಖೆ ಎಇಇ ಮಹೇಶ್ ಸೇರಿದಂತೆ ಇನ್ನಿತರರಿದ್ದರು.

ಮಲ್ಕುಂಡಿಯಲ್ಲಿ ವಿಜೃಂಭಣೆಯ ಓಕಳಿ ಮಹೋತ್ಸವ



ಮಲ್ಕುಂಡಿ, ಜು.23– ಗ್ರಾಮದಲ್ಲಿ ಶ್ರೀ ಕೆಂಡದ ಬಸವೇಶ್ವರಸ್ವಾಮಿ ಓಕಳಿ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ಗ್ರಾಮದ ಬೀದಿಗಳನ್ನು ತಳಿರು ತೋರಣ, ವಿದ್ಯುತ್ ದೀಪ ಹಾಗೂ ರಂಗೋಲೆಯಿಂದ ಸಿಂಗರಿಸಲಾಗಿತ್ತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀ ಕೆಂಡದ ಬಸವೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು. ಶಾಸಕ ಬಿ.ಹರ್ಷವರ್ಧನ್ ಮೆರವಣಿಗೆಗೆ ಚಾಲನೆ ನೀಡಿದರು. ಗ್ರಾಮಸ್ಥರು ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಅಪಹರಣವಾಗಿದ್ದ ಅಪ್ರಾಪ್ತೆ ರಕ್ಷಣೆ: ಯುವಕನ ಬಂಧನ

ಹುಣಸೂರು, ಜು.23– ಪ್ರೀತಿಸುವುದಾಗಿ ನಂಬಿಸಿ ಅಪ್ರಾಪ್ತೆಯನ್ನು ಅಪಹರಿಸಿದ ಆರೋಪದ ಮೇಲೆ ಯುವಕನ ವಿರುದ್ಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ. ತಾಲೂಕಿನ ಹನಗೋಡು ಹೋಬಳಿ ಬೂತಾಳೆ ಪೆಂಜಹಳ್ಳಿಯ ಸಂದೀಪ್(22) ಬಂಧಿತ ಆರೋಪಿ. ಈತ ಪ್ರೀತಿ–ಪ್ರೇಮದ ನೆಪದಲ್ಲಿ 16 ವರ್ಷದ ಬಾಲಕಿಯನ್ನು ಜು.8ರಂದು ಅಪಹರಿಸಿರುವುದಾಗಿ ಆಕೆಯ ಪೋಷಕರು ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು, ಮೈಸೂರಿನಲ್ಲಿ ಮನೆಯೊಂದರಲ್ಲಿ ಇರಿಸಿದ್ದ ಬಾಲಕಿಯನ್ನು ರಕ್ಷಿಸಿ, ಆರೋಪಿ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸದ್ಯ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಅಪ್ರಾಪ್ತೆಯನ್ನು ಬಾಲಮಂದಿರಕ್ಕೆ ಬಿಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೊನೆ ಆಷಾಢ ಶುಕ್ರವಾರ: ವಿಶೇಷ ಪೂಜೆ



ಸರಗೂರು, ಜು.23– ಪಟ್ಟಣದ ವಾಹನ ಚಾಲಕರು ಆಷಾಢ ಮಾಸದ ಕೊನೆ ಶುಕ್ರವಾರ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ವಾಹನ ಚಾಲಕರ ಸಂಘದ ಗೌರವಾಧ್ಯಕ್ಷ ಹೆಚ್.ಎಸ್.ಲಿಂಗರಾಜು, ಚಾಲಕರಾದ ವೆಂಕಟೇಶ್, ಹಾಲನಾಯಕ, ರವಿ, ಮಹದೇವನಾಯಕ, ಸುಂದ್ರಣ್ಣ, ಸುರೇಶ್, ಎಂ.ನಾಗರಾಜು, ನಾಗೇಶ್, ಕುಮಾರ, ತಿಮ್ಮರಾಜು, ಹರೀಶ್, ಪಪಂ ಮುಖ್ಯಾಧಿಕಾರಿ ಬಿ.ಜೆ.ಸತೀಶ್, ರಾಮು, ಶ್ರೀನಾಥ್, ಮಂಜು, ಸ್ವಾಮಿ, ಪೊಲೀಸ್ ಸಿಬ್ಬಂದಿ ಇನ್ನಿತರರಿದ್ದರು.



ಆಷಾಢ ಮಾಸದ ಅಂಗವಾಗಿ ಮೂಗೂರಿನ ಶ್ರೀ ತ್ರಿಪುರ ಸುಂದರಿ ಅಮ್ಮನವರನ್ನು ವಿವಿಧ ಬಗೆಯ ಹೂಗಳಿಂದ ಅಲಂಕರಿಸಿ, ವಿಶೇಷ ಪೂಜೆ ನೆರವೇರಿಸಲಾಯಿತು. ಈ ವೇಳೆ ಭಕ್ತರು ಅಮ್ಮನವರ ದರ್ಶನ ಪಡೆದು ಪುನೀತರಾದರು.


ಕೊಡಗಹಳ್ಳಿ ಗ್ರಾಪಂಗೆ ಕೆ.ಎಸ್.ಧನಂಜಯ ಪಾಪಣ್ಣ ಅಧ್ಯಕ್ಷ



ಬನ್ನೂರು, ಜು.23– ಇಲ್ಲಿನ ಕೊಡಗಹಳ್ಳಿ ಗ್ರಾಪಂ ನೂತನ ಅಧ್ಯಕ್ಷರಾಗಿ ಮಾಜಿ ಶಾಸಕ ಕೆ.ಜೆ.ರಾಮಸ್ವಾಮಿ ಅವರ ಮೊಮ್ಮಗ ಕೆ.ಎಸ್.ಧನಂಜಯ ಪಾಪಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದಿನ ಅಧ್ಯಕ್ಷರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಕೆ.ಎಸ್.ಧನಂಜಯ ಪಾಪಣ್ಣ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ನಟೇಶ್ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಚುನಾವಣಾ ಪ್ರಕ್ರಿಯೆಯಲ್ಲಿ ಗ್ರಾಪಂನ 18 ಮಂದಿ ಸದಸ್ಯರ ಪೈಕಿ 15 ಮಂದಿ ಹಾಜರಿದ್ದರು.

ಕೆ.ಎಸ್.ಧನಂಜಯ ಪಾಪಣ್ಣ ಮಾತನಾಡಿ, ಗ್ರಾಮದ ಅಭಿವೃದ್ಧಿಗೆ ಸರ್ವ ಸದಸ್ಯರ ಸಹಕಾರದೊಂದಿಗೆ ಶ್ರಮಿಸುವುದಾಗಿ ತಿಳಿಸಿದರು. ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲು, ತಾಪಂ ಮಾಜಿ ಸದಸ್ಯೆ ಎ.ನಾಗಮಣಿ, ಜೆಡಿಎಸ್ ಯುವ ಘಟಕದ ಹೋಬಳಿ ಅಧ್ಯಕ್ಷ ಕೆ.ಪಿ.ಶಿವಕುಮಾರ್, ಪಂಚಾಯಿತಿ ಸದಸ್ಯರಾದ ಪುಷ್ಪ, ಸ್ವಾಮಿ, ಕಮಲಮ್ಮ, ಟಿ.ಎಸ್.ಶೋಭ, ಕೆ.ಎಸ್.ಮಹೇಶ್, ಪುಟ್ಟಸ್ವಾಮಿ, ಮೋಹನ್ ಕುಮಾರ್, ಸಿ.ಲಕ್ಷ್ಮಿ, ಸುಮ, ಎಂ.ಎಂ.ರಮೇಶ್, ಎಂ.ಎಸ್.ಶಿವರಾಜ್, ಟಿ.ಕೆ.ವೀಣಾ, ಬಿ.ಆರ್.ಸುಮ, ನಂದಿನಿ, ಜಿ.ಕೆ.ಕುಮಾರ್, ಜಯಲಕ್ಷ್ಮಿ, ಸುರೇಶ್, ಸಿದ್ದೇಗೌಡ, ಬಾಲಚಂದ್ರು, ಬಸುರಾಜು, ಭಾಸ್ಕರ್, ಸ್ವಾಮಿ ಇನ್ನಿತರರಿದ್ದರು.

ಎಸ್.ಚಿನ್ನಸ್ವಾಮಿ ನಿಧನ



ಹುಣಸೂರು, ಜು.23– ತಾಲೂಕಿನ ಮದ್ಯ ಮರಾಟಗಾರರ ಸಂಘದ ಅಧ್ಯಕ್ಷರೂ ಆದ ನಗರದ ಗೋಲ್ಡನ್ ವೈನ್ಸ್ ಹಾಗೂ ಸಂತೋಷ್ ಬಾರ್ ಮಾಲೀಕ ಎಸ್.ಚಿನ್ನಸ್ವಾಮಿ (77) ಶನಿವಾರ ಸಂಜೆ ನಿಧನರಾದರು.

ಮೃತರು ಪತ್ನಿ ಸರಸ್ವತಿ, ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಹುಣಸೂರಿನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ತಾಲೂಕಿನ ಮದ್ಯ ಮಾರಾಟ ಮಾಲೀಕರು ಸಂತಾಪ ಸೂಚಿಸಿದ್ದಾರೆ.

ಮನುಷ್ಯನಿಗೆ ಜ್ಞಾನ, ಬುದ್ಧಿ ಜೊತೆಗೆ ಸಂಸ್ಕಾರವೂ ಮುಖ್ಯ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ



ತಿ.ನರಸೀಪುರ, ಜು.23– ಮನುಷ್ಯನಿಗೆ ಜ್ಞಾನ, ಬುದ್ಧಿ ಜೊತೆಗೆ ಸಂಸ್ಕಾರವೂ ಇರಬೇಕು ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ ಅಭಿಪ್ರಾಯಪಟ್ಟರು.

ಪಟ್ಟಣದ ಮಹದೇವಪ್ಪ ಸ್ಮಾರಕ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ತಾಲೂಕು ಪದಾಧಿಕಾರಿಗಳ ಪದಗ್ರಹಣ ಹಾಗೂ ವಚನ ಸಾಹಿತ್ಯದ ಪಿತಾಮಹ ಫ.ಗು. ಹಳಕಟ್ಟಿ ಜಯಂತಿ ಪ್ರಯುಕ್ತ ವಚನ ಸಂರಕ್ಷಣಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಜ್ಞಾನ, ಬುದ್ಧಿ ಮನುಷ್ಯನಿಗೆ ಎಷ್ಟು ಬೇಕು ಅಷ್ಟಿದ್ದರೆ ಸಾಕು. ಉತ್ತಮ ಬದುಕು ಕಾಣಲು ಉತ್ತಮ ನಡವಳಿಕೆ, ಸದಾ ಒಳಿತನ್ನು ಬಯಸುವ ಸಂಸ್ಕಾರ ಇರಬೇಕು ಎಂದರು.

ಶರಣ ಸಾಹಿತ್ಯ ಪಸರಿಸಲು ರಾಜೇಂದ್ರ ಶ್ರೀಗಳು ಶರಣ ಸಾಹಿತ್ಯ ಪರಿಷತ್ ಸ್ಥಾಪಿಸಿ ಅಖಿಲ ಭಾರತ ಮಟ್ಟದಲ್ಲಿ ಬೆಳೆಸಲು ಕಾರಣರಾಗಿದ್ದಾರೆ. ರಾಜ್ಯವಲ್ಲದೇ ದೆಹಲಿ, ಸೊಲ್ಲಾಪುರ, ಹೈದರಾಬಾದ್ ಸೇರಿದಂತೆ ಅನೇಕ ಕಡೆ ಶಾಖೆಗಳಿವೆ. ಅನುಭವ ಮಂಟಪವನ್ನು ಬಸವಣ್ಣನವರು ಸ್ಥಾಪಿಸಿದರೂ ಅವರು ಅಧಿಕಾರಕ್ಕೇರಲಿಲ್ಲ ಎಂದರು.

ಜಿಲ್ಲಾಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ ಮಾತನಾಡಿದರು. ವಿದ್ಯೋದಯ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವ ಸ್ವಾಮಿ, ಶಿವಾನಂದ ಶರ್ಮಾರ ಸ್ಮರಣಾರ್ಥ ಪರಿಷತ್‌ಗೆ ಲಕ್ಷ ರೂ. ದತ್ತಿ ನಿಧಿ ನೀಡುವುದಾಗಿ ತಿಳಿಸಿದರು. ಜೆಎಸ್ಎಸ್ ಕಾಲೇಜಿನ ಉಪನ್ಯಾಸಕ ಡಾ.ಡಿ.ಎಂ.ಮಹೇಂದ್ರಮೂರ್ತಿ, ಫ.ಗು ಹಳಕಟ್ಟಿ ಬದುಕು ಹಾಗೂ ವಚನ ಸಾಹಿತ್ಯದ ಬಗ್ಗೆ ಉಪನ್ಯಾಸ ನೀಡಿದರು.

ವಾಟಾಳು ಮಠದ ಡಾ.ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಗ್ರಾಮ ವಿದ್ಯೋದಯ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ, ನಿಕಟಪೂರ್ವ ಜಿಲ್ಲಾಧ್ಯಕ್ಷ ಎಂ.ಚಂದ್ರಶೇಖರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾಧ್ಯಕ್ಷ ಮಹದೇವಸ್ವಾಮಿ ಮಾತನಾಡಿದರು. ಇದೇ ವೇಳೆ ನೂತನ ಪದಾಧಿಕಾರಿಗಳ ಪದಗ್ರಹಣ ನಡೆಯಿತು. ನಂಜನಗೂಡು ಅಧ್ಯಕ್ಷ ಕೆಂಪಣ್ಣ, ತಾಲೂಕು ಅಧ್ಯಕ್ಷ ತೋಂಟೇಶ್, ನಿರ್ಗಮಿತ ತಾಲೂಕು ಅಧ್ಯಕ್ಷ ಶಿವಮಲ್ಲಪ್ಪ, ಉಪನ್ಯಾಸಕ ಕುಮಾರಸ್ವಾಮಿ, ಜಿಪಂ ಮಾಜಿ ಸದಸ್ಯ ಶಿವಕುಮಾರ್, ರಾಜಣ್ಣ, ಮಹದೇವಯ್ಯ, ಚಂದ್ರಶೇಖರ್, ಪುರಸಭಾ ಸದಸ್ಯ ಕಿರಣ್, ಸರ್ಕಾರಿ ನೌಕರರ ಸಂಘಧ ಅಧ್ಯಕ್ಷ ಶಿವಶಂಕರಮೂರ್ತಿ, ಮಲ್ಲು, ಮಂಟೇಲಿಂಗಯ್ಯ, ಮೂರ್ತಿ, ದಯಾನಂದ ಪಟೇಲ್, ಜ್ಞಾನೇಂದ್ರಮೂರ್ತಿ ಮತ್ತಿತರರಿದ್ದರು.

ದುಶ್ಚಟಗಳಿಂದ ದೂರವಿದ್ದರೆ ಮಾತ್ರ ನೆಮ್ಮದಿ ಬದುಕು

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಸುರೇಶ್‌ಶೆಟ್ಟಿ



ಕಂಪಲಾಪುರ, ಜು.23– ಮನುಷ್ಯ ದುಶ್ಚಟಗಳಿಂದ ದೂರವಿದ್ದರೆ ಮಾತ್ರ ನೆಮ್ಮದಿಯಿಂದ ಬದುಕಲು ಸಾಧ್ಯ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಯೋಜನಾಧಿಕಾರಿ ಸುರೇಶ್‌ಶೆಟ್ಟಿ ತಿಳಿಸಿದರು.

ಇಲ್ಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಪಿರಿಯಾಪಟ್ಟಣ ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಕೊಡಗು ಜಿಲ್ಲೆ ಸಹಯೋಗದೊಂದಿಗೆ ಆಯೋಜಿಸಿದ್ದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿನ ಆಧುನಿಕ ಯುಗದಲ್ಲಿ ಮನುಷ್ಯ ಎಷ್ಟು ಜಾಗರೂಕತೆಯಿಂದ ಇರುತ್ತಾನೋ ಅಷ್ಟು ಒಳ್ಳೆಯದು. ಮಾದಕ ವಸ್ತುಗಳ ದಾಸನಾದರೆ ಇಡೀ ಸಂಸಾರ ಬೀದಿ ಪಾಲಾಗುತ್ತದೆ. ಜೊತೆಗೆ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ದೇವರು ಕೊಟ್ಟಿರುವ ಈ ಅಮೂಲ್ಯ ಜೀವವನ್ನು ಉತ್ತಮ ರೀತಿ ಕಾಪಾಡಿಕೊಳ್ಳುವುದರಲ್ಲಿ ಯುವಪೀಳಿಗೆ ಪಾತ್ರ ದೊಡ್ಡದು ಎಂದರು.

ಗ್ರಾಮಾಭಿವೃದ್ಧಿ ಯೋಜನೆ ಸಂಪನ್ಮೂಲ ವ್ಯಕ್ತಿ ಸೋಮಶೇಖರ್ ಮಾತನಾಡಿ, ಸ್ವಾಸ್ಥ್ಯ ಎಂದರೆ ಆರೋಗ್ಯ. ಅದು ಚೆನ್ನಾಗಿದ್ದರೆ ಏನು ಬೇಕಾದರೂ ಮಾಡಬಹುದು. ಹದಗೆಟ್ಟರೆ ಜೀವಕ್ಕೆ ಕುತ್ತು. ಆರೋಗ್ಯದಲ್ಲಿ ದೈಹಿಕ, ಮಾನಸಿಕ, ಸಾಮಾಜಿಕ ಎಂದು 3 ವಿಧಗಳಿದ್ದು, ಪ್ರಮುಖವಾಗಿ ದೈಹಿಕ ಆರೋಗ್ಯದ ಕಡೆ ಹೆಚ್ಚು ಕಾಳಜಿ ವಹಿಸಬೇಕು. ಪಂಚೇಂದ್ರಿಯಗಳನ್ನು ಚೆನ್ನಾಗಿಟ್ಟುಕೊಳ್ಳಬೇಕು. ಪ್ರಕೃತಿದತ್ತವಾದ ಸ್ವಾಭಾವಿಕ ಆಹಾರ ಪದಾರ್ಥ ಸೇವಿಸಬೇಕು. ದುಶ್ಚಟಗಳನ್ನು ಸಮಾಜದಿಂದ ದೂರವಿಡಬೇಕು. ಖುಷಿಗಾಗಿ ಮದ್ಯ, ಧೂಮಪಾನ ಸೇವನೆ ಮುಂದೆ ಜೀವಕ್ಕೆ ಮಾರಕವಾಗಬಹುದು. ಆದ್ದರಿಂದ ಹದಿಹರೆಯದ ವಯಸ್ಸಿನವರು ಹೆಚ್ಚಾಗಿ ತಮ್ಮ ಹಾಗೂ ಅಕ್ಕಪಕ್ಕದವರಿಗೆ ತಿಳುವಳಿಕೆ ಹೇಳಿ ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಶ್ರಮಿಸಬೇಕೆಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸದಾಶಿವ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯ ವೈಖರಿಯಿಂದ ಎಷ್ಟೋ ಕುಟುಂಬಗಳು ಆರ್ಥಿಕವಾಗಿ ಸದೃಢವಾಗಿ ನೆಮ್ಮದಿ ಜೀವನ ನಡೆಸುತ್ತಿವೆ ಎಂದರು.

ಮುಖ್ಯ ಶಿಕ್ಷಕ ಮಹದೇವಯ್ಯ, ಎಸ್‌ಡಿಎಂಸಿ ಸದಸ್ಯರಾದ ರಾಜೇಶ್, ಶಹ ನಾಜ್, ರಾಣಿ, ಚಂದ್ರು, ಶಿಕ್ಷಕಿಯರಾದ ಶಾರದಮ್ಮ, ಶ್ರೀಲಕ್ಷ್ಮಿ, ಪೂರ್ಣಿಮಾ, ಭಾಗ್ಯಮ್ಮ, ಸುಜಾತಾ, ಗೀತಾ, ಧರ್ಮಸ್ಥಳ ಯೋಜನೆ ಮೇಲ್ವಿಚಾರಕಿ ರವಿಕಲಾಶೆಟ್ಟಿ ಸೇರಿದಂತೆ ಸೇವಾ ಪ್ರತಿನಿಧಿಗಳು, ವಿದ್ಯಾರ್ಥಿಗಳು ಹಾಜರಿದ್ದರು.




ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಸಮೀಪದ ಭುವನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಸ್ವಚ್ಛತಾ ಆಂದೋಲನದಡಿಯಲ್ಲಿ ಮನೆ ಮನೆಗೆ ಕಸದ ಬಕೆಟ್‌ಗಳನ್ನು ವಿತರಿಸಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷೆ ಮಮತಾ, ಪಿಡಿಒ ದೇವರಾಜೇಗೌಡ, ಉಪಾಧ್ಯಕ್ಷೆ ದೀಪಾ, ಮಾಜಿ ಉಪಾಧ್ಯಕ್ಷ ಶಿವಕುಮಾರ್, ಗ್ರಾಪಂ ಮಾಜಿ ಸದಸ್ಯ ಗಿರೀಶ್, ಪಂಚಾಯಿತಿ ನೌಕರರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಗ್ರಾಮಸ್ಥರು ಹಾಜರಿದ್ದರು.

ರಾಜೀವ್‌ಗಾಂಧಿ ವಸತಿ ಯೋಜನೆಯಡಿ

ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಣೆ

ಮನೆ ನಿರ್ಮಾಣಕ್ಕೆ ಯಾರಿಗೂ ಲಂಚ ನೀಡಬೇಡಿ: ಸಾರಾ



ಕೆ.ಆರ್.ನಗರ, ಜು.23– ವಸತಿ ಯೋಜನೆಗಳಡಿ ವಿತರಿಸಿರುವ ಮನೆ ನಿರ್ಮಾಣಕ್ಕೆ ಆಯ್ಕೆಯಾಗಿರುವ ಫಲಾನುಭವಿಗಳು ಯಾರಿಗೂ ಲಂಚ ನೀಡಬಾರದು. ಹಣಕ್ಕಾಗಿ ನಿಮ್ಮನ್ನು ಯಾರಾದರೂ ಪೀಡಿಸಿದರೆ ನನ್ನ ಗಮನಕ್ಕೆ ತನ್ನಿ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಪುರಸಭೆಯಲ್ಲಿ ರಾಜೀವ್ ಗಾಂಧಿ ವಸತಿ ಯೋಜನೆಯಡಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಮನೆ ನಿರ್ಮಾಣದ ಮಂಜೂರಾತಿ ಪತ್ರ ವಿತರಿಸಿ ಮಾತನಾಡಿದ ಅವರು, ಮನೆ ನಿರ್ಮಿಸಿಕೊಳ್ಳುವ ಉದ್ದೇಶದಿಂದ ಸರ್ಕಾರ ಹಣ ನೀಡಿದ್ದು, ಪ್ರತಿಯೊಬ್ಬರೂ ಅದನ್ನು ಬಳಸಿಕೊಂಡು ಮನೆ ನಿರ್ಮಾಣ ಮಾಡಿಕೊಳ್ಳಬೇಕು. ಏಕೆಂದರೆ ಅನೇಕರು ಅರ್ಜಿ ಸಲ್ಲಿಸಿದ್ದರೂ ಅರ್ಹರೆಂದು ನಿಮ್ಮನ್ನು ಆಯ್ಕೆ ಮಾಡಿದ್ದೇವೆ. ಹೀಗಾಗಿ ಪ್ರತಿಯೊಬ್ಬರೂ ಮನೆ ನಿರ್ಮಿಸಿಕೊಳ್ಳಬೇಕು ಎಂದರು.


ಕಳೆದ ನಾಲ್ಕೈದು ವರ್ಷಗಳ ಅವಧಿಯಲ್ಲಿ ವಸತಿ ಯೋಜನೆಯಡಿ ಆಯ್ಕೆಯಾಗಿ ಮಂಜೂರಾತಿ ಪತ್ರ ಪಡೆದರೂ 109 ಮಂದಿ ಮನೆಯನ್ನೇ ನಿರ್ಮಿಸಿಕೊಂಡಿಲ್ಲ. ಇದರಿಂದ ಇತರರಿಗೆ ಅನ್ಯಾಯವಾಗಿದೆ. ಮನೆ ನಿರ್ಮಿಸಿಕೊಳ್ಳದವರು ಮುಂದೆ ವಸತಿ ಯೋಜನೆಯಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಿಲ್ಲ. ಆದ್ದರಿಂದ ನಿಗದಿತ ಸಮಯದಲ್ಲಿ ಮನೆ ನಿರ್ಮಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪಟ್ಟಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ 840 ಗುಂಪು ಮನೆಗಳ ನಿರ್ಮಾಣವನ್ನು ರಾಜೀವ್‌ಗಾಂಧಿ ವಸತಿ ನಿಗಮದಿಂದಲೇ ನಿರ್ಮಾಣ ಮಾಡಿಕೊಡಲು ಒಪ್ಪಿಗೆ ನೀಡಿದ್ದು, ಇನ್ನು ಒಂದು ವಾರದಲ್ಲಿ ಟೆಂಡರ್ ಮಾಡಿಸಲಾಗುವುದು. ಈಗಾಗಲೇ ಈ ಮನೆಗಳಿಗೆ ಹಣ ಕಟ್ಟಿದವರನ್ನು ಕೈಬಿಟ್ಟು ಅಗತ್ಯವಿದ್ದು ಹಣ ಕಟ್ಟಲು ಮುಂದೆ ಬರುವವರನ್ನು ಶೀಘ್ರವಾಗಿ ಪಟ್ಟಿ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪುರಸಭಾ ಅಧ್ಯಕ್ಷ ಪ್ರಕಾಶ್ ಮಾತನಾಡಿ, ಪಟ್ಟಣದಲ್ಲಿ ಎರಡು ಮೂರು ಮನೆಗಳನ್ನು ಹೊಂದಿರುವವರು ಕೂಡ ವಸತಿ ಯೋಜನೆಯಲ್ಲಿ ಮನೆ ಕೇಳುತ್ತಿದ್ದು, ಅಂತವರಿಗೆ ಕೆಲವರು ತಮ್ಮ ತೆವಲಿಗಾಗಿ ಕೊಡಿಸುತ್ತಿದ್ದಾರೆ. ಉಳ್ಳವರನ್ನು ಬಿಟ್ಟು ಅರ್ಹ ಬಡವರು, ನಿರ್ಗತಿಕರಿಗೆ ನೀಡುವಂತೆ ಶಾಸಕರಲ್ಲಿ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯ ನಟರಾಜ್, ಆಶ್ರಯ ಕಮಿಟಿ ಸದಸ್ಯ ಮಂಜುನಾಥ್ ಮಾತನಾಡಿದರು. ಪುರಸಭಾ ಮುಖ್ಯಾಧಿಕಾರಿ ಡಾ.ಜಯಣ್ಣ, ಸ್ಥಾಯಿ ಸಮಿತಿ ಅಧ್ಯಕ್ಷ ಶಂಕರ್‌ಸ್ವಾಮಿ, ಸದಸ್ಯರಾದ ಕೆ.ಎಲ್. ಜಗದೀಶ್, ಕೆ.ಪಿ.ಪ್ರಭುಶಂಕರ್, ಸಂತೋಷ್ ಗೌಡ, ಶಂಕರ್, ಉಮೇಶ್, ಕೆ.ಬಿ.ವೀಣಾ, ತೋಂಟದಾರ್ಯ, ಜಿ.ಪಿ.ಮಂಜು ಸೇರಿದಂತೆ ಇನ್ನಿತರರಿದ್ದರು.

ಪುರಸಭಾ ಸದಸ್ಯನಿಂದ ಸರ್ಕಾರಿ ಜಾಗ ಕಬಳಿಕೆ

ಬಿಜೆಪಿ ಸದಸ್ಯನಿಂದ ಡಿಸಿಗೆ ದೂರು



ಕಿರಣ್

ತಿ.ನರಸೀಪುರ, ಜು.23– ಸರ್ಕಾರಿ ಜಾಗಕ್ಕೆ ಅಕ್ರಮ ಖಾತೆ ಮಾಡಿಸಿಕೊಂಡು ವಾಣಿಜ್ಯ ಮಳಿಗೆ ನಿರ್ಮಾಣ ಮಾಡಿದ್ದಾರೆಂದು ಕಾಂಗ್ರೆಸ್ ಪುರಸಭಾ ಸದಸ್ಯರೊಬ್ಬರ ವಿರುದ್ಧ ಬಿಜೆಪಿ ಪುರಸಭಾ ಸದಸ್ಯ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದಾರೆ. ಕಾಂಗ್ರೆಸ್ ಪುರಸಭಾ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ವಿರುದ್ಧ ಬಿಜೆಪಿ ಸದಸ್ಯ ಎಸ್.ಕೆ.ಕಿರಣ್ ಜಿಲ್ಲಾಧಿಕಾರಿಗೆ ದೂರು ನೀಡಿದ್ದಾರೆ.

ಈ ಸಂಬಂಧ ಪತ್ರಿಕಾಗೋಷ್ಠಿ ನಡೆಸಿದ ಕಿರಣ್, ಪುರಸಭಾ ವ್ಯಾಪ್ತಿಗೊಳಪಡುವ ಇಂದಿರಾ ಕಾಲೋನಿಯ ಖಾತೆ ನಂ.718ರ ಸರ್ವೆ ನಂ.5ರಲ್ಲಿನ ಹುಲ್ಲಹಳ್ಳಿ ನಾಲೆಗೆ ಸೇರಿದ ಸರ್ಕಾರಿ ಜಾಗದಲ್ಲಿ ಅಕ್ರಮ ಕಟ್ಟಡ ನಿರ್ಮಿಸುವ ಮೂಲಕ ನಂಜುಂಡಸ್ವಾಮಿ ಭಾರೀ ಅವ್ಯವಹಾರ ನಡೆಸಿದ್ದಾರೆ. ಸರ್ಕಾರಿ ಜಾಗಕ್ಕೆ ಪುರಸಭೆಯವರು ಕೆಎಂಎಫ್ 24 ಸೇರಿದಂತೆ ಖಾತೆ, ಕಟ್ಟಡ ಲೈಸೆನ್ಸ್ ಮಾಡಿಕೊಡುವ ಮೂಲಕ ಅಧಿಕಾರಿಗಳು ಸಹ ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು.

ಕಬಳಿಕೆಯಾಗಿರುವ ಸರ್ಕಾರಿ ಜಾಗ 1 ಕೋಟಿ ರೂ. ಬೆಲೆ ಬಾಳುವ ಆಸ್ತಿಯಾಗಿದ್ದು, ಕೂಡಲೇ ಪುರಸಭೆಯಿಂದ ಅಕ್ರಮವಾಗಿ ನೀಡಲಾಗಿರುವ ಖಾತೆ ಹಾಗೂ ಕಟ್ಟಡ ಲೈಸೆನ್ಸ್ ಅನ್ನು ರದ್ದುಗೊಳಿಸಿ, ಕಟ್ಟಲಾಗಿರುವ ಕಟ್ಟಡವನ್ನು ಕೆಡವಿ ಆಸ್ತಿಯನ್ನು ಪುರಸಭೆಯವರು ವಶಪಡಿಸಿಕೊಳ್ಳಬೇಕೆಂದು ಆಗ್ರಹಿಸಿದರು. ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ ಅಧಿಕಾರಿಗಳು ಹಾಗೂ ಅಕ್ರಮವಾಗಿ ಕಟ್ಟಡ ಕಟ್ಟಿರುವ ಪುರಸಭಾ ಸದಸ್ಯರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಪುರಸಭಾ ಅಧ್ಯಕ್ಷರನ್ನು ಒತ್ತಾಯಿಸಿದ ಅವರು, ಕ್ರಮಕ್ಕೆ ಮುಂದಾಗದಿದ್ದಲ್ಲಿ ಅಧ್ಯಕ್ಷ ಮದನ್ ರಾಜ್ ಸಹ ಅಕ್ರಮದಲ್ಲಿ ಶಾಮೀಲಾಗಿದ್ದಾರೆಂದು ಭಾವಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರಾಜ್ಯ ರೈತ ಸಂಘಟನೆ ಸಹ ಈ ಬಗ್ಗೆ ಪ್ರಸ್ತಾಪಿಸಿ, ಜಾಗ ಹುಲ್ಲಹಳ್ಳಿ ನಾಲೆಗೆ ಸೇರಿದ ಆಸ್ತಿಯಾಗಿದೆ ಇದರ ರಕ್ಷಣೆ ಮಾಡುವಂತೆ ಪ್ರತಿಭಟನೆ ನಡೆಸಿದೆ. ಬಿಜೆಪಿ ಮಾಧ್ಯಮ ಮುಖಂಡರಾದ ಶಿವಕುಮಾರ್ ಬಡ್ಡು ಸಹ ಪುರಸಭೆ ಅಧ್ಯಕ್ಷರಿಗೆ ಮನವಿ ಸಲ್ಲಿಸಿ ನಾಲೆಗೆ ವಶಪಡಿಸಿಕೊಳ್ಳಲಾಗಿರುವ ಜಾಗದಲ್ಲಿ ಅಕ್ರಮ ಕಟ್ಟಡ ನಿರ್ಮಾಣವಾಗುತ್ತಿರುವುದನ್ನು ತಡೆಗಟ್ಟಿ ಜಾಗದ ಹದ್ದು ಬಸ್ತು ಮಾಡಿಸಿ ಸರ್ಕಾರಿ ಜಾಗ ರಕ್ಷಣೆ ಮಾಡುವಂತೆ ಜ.21ರಲ್ಲಿ ಕೋರಿದ್ದಾರೆ. ನಾನೂ ಸಹ ಪುರಸಭೆ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳಿಗೆ ಈ ಹಿಂದೆಯೇ ಮನವಿ ಸಲ್ಲಿಸಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.